ವಾರ್ಷಿಕ ಚಂದಾ ರೂ.25/-

ಮಾಸಿಕ

# ಜನಪದ

ಸಂಪುಟ-05 • ಸಂಚಿಕೆ-01 • ಅಕ್ಟೋಬರ್ 2021

ಅಕ್ಟೋಬರ್
2021



ಬಾಪೂಜಿ ಜೀವನ ಗಾಥೆ
ಸಾರುವ **ಗಾಂಧಿ** ಭವನ




# ಮುಖ್ಯಮಂತ್ರಿ ರೈತ ವಿದ್ಯಾ ನಿಧಿ ದೇಶದಲ್ಲೇ ಪ್ರಪ್ರಥಮ ಯೋಜನೆ

Download From : www.kpscvaani.com



ಸೆಪ್ಟೆಂಬರ್ 5 ರಂದು ಶಿಕ್ಷಕರ ದಿನಾಚರಣೆ ಅಂಗವಾಗಿ ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ಏರ್ಪಡಿಸಲಾಗಿದ್ದ ಕಾರ್ಯಕ್ರಮದಲ್ಲಿ
ಮುಖ್ಯಮಂತ್ರಿ ಬಸವರಾಜ ಎಸ್ ಬೊಮ್ಮಾಯಿ ಅವರು ಡಾ. ರಾಧಾಕೃಷ್ಣನ್ ಮತ್ತು ಸಾವಿತ್ರಿಬಾಯಿ ಫುಲೆ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿದರು.
ಈ ಸಂದರ್ಭದಲ್ಲಿ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರಾದ ಬಿ.ಸಿ.ನಾಗೇಶ್ ಮತ್ತು ಶಾಸಕರಾದ ರಿಜ್ವಾನ್ ಅರ್ಷದ್ ಉಪಸ್ಥಿತರಿದ್ದರು.



ಸೆಪ್ಟೆಂಬರ್ 11 ರಂದು ಮುಖ್ಯಮಂತ್ರಿ ಬಸವರಾಜ ಎಸ್ ಬೊಮ್ಮಾಯಿ ಅವರು
ತಮ್ಮ ನಿವಾಸದಲ್ಲಿ ಸಾರ್ವಜನಿಕರಿಂದ ಅಹವಾಲು ಸ್ವೀಕರಿಸುತ್ತಿರುವುದು.

Download From : www.kpscvaani.com

ವಾರ್ಷಿಕ ಚಂದಾ ರೂ.25/-

# ವಾರ್ತಾ ಜನಪದ

ಸಂಪುಟ-05 • ಸಂಚಿಕೆ-01 • ಅಕ್ಟೋಬರ್ 2021





ಅನ್ನದಾತನ ಮನೆಯಲ್ಲಿ ವಿದ್ಯಾದೀಪ ಬೆಳಗಿಸಲು ಮುಂದಾದ ರಾಜ್ಯ ಸರ್ಕಾರ
• ಉಮೇಶ್ ಕೊಲಿಗೆರೆ






ರಾಷ್ಟ್ರೀಯ ಶಿಕ್ಷಣ ನೀತಿಯಿಂದ ಶಿಕ್ಷಣ ಕ್ಷೇತ್ರದಲ್ಲಿ **ಹೊಸ ಮನ್ವಂತರ**
• ಎನ್. ನಾಗರತ್ನಮ್ಮ






ಬಾಪೂಜಿ ಜೀವನ ಗಾಥೆ ಸಾರುವ **ಗಾಂಧಿ ಭವನ**
• ತುಕಾರಾಂರಾವ್ ಬಿ.ವಿ

17 **ಗಾಂಧೀಜಿ ನಿರೀಕ್ಷೆಗಳು ಮತ್ತು ಭಾಷಾ ಮಾಧ್ಯಮ**
• ಕೆ. ವೆಂಕಟೇಶ್






ಇಪ್ಪತ್ತು ಲಕ್ಷ ಮಂದಿಗೆ ಉಚಿತ ವೈದ್ಯಕೀಯ ಚಿಕಿತ್ಸೆ ಒದಗಿಸಿರುವ ಅಪರೂಪದ ವೈದ್ಯ **ಡಾ ಬಿ. ರಮಣರಾವ್**
• ಡಿ.ಪಿ. ಮುರಳೀಧರ್

23 ಅನುಗ್ರಹ ಕೊಡುಗೆ ಯೋಜನೆಯಡಿ ಫಲಾನುಭವಿಗಳಿಗೆ **ಡಿಬಿಟಿ ಮೂಲಕ ಪರಿಹಾರಧನ ವಿತರಣೆ**
• ಶ್ರೀನಾಥ ಮರಕುಂದಿ

26 ಕೃಷಿ ಜಮೀನಿನಲ್ಲಿ **ಅರಣ್ಯ ಕೃಷಿ ಮಾಡಲು ಪ್ರೋತ್ಸಾಹ ಧನ**
• ಸಂಧ್ಯಾ .ಪಿ

29 ಯುವ ಕೃಷಿಕನ **ಕೈ ಹಿಡಿದ ಸಮಗ್ರ ಬೇಸಾಯ ಪದ್ಧತಿ**
• ಸಾಗರ ಎಮ್. ಬಾಗೇವಾಡಿ

30 'ಅಕ್ಕಡಿ' ಬೇಸಾಯದಿಂದ **ಅನ್ನದಾತನ ಬದುಕು ಹಸನು**
• ಚೈತ್ರ ಹೆಚ್. ಬಿ. ಹೆಸರಹಳ್ಳಿ

33 ವಿಶ್ವದ ಗಮನ ಸೆಳೆದಿರುವ **ರಕ್ಷಣಾ ಆಹಾರ ಸಂಶೋಧನಾ ಪ್ರಯೋಗಾಲಯ**
• ಡಾ.ಪಿ.ವಿ.ವರಪ್ರಸಾದ್

36 ಧಾರವಾಡಿ ಎಮ್ಮೆ- **ಜಾಗತಿಕ ಹೆಮ್ಮೆ!!**
• ಕೆ.ಎಸ್.ರಾಜಮನ್ನಾರ್

40 ಯಾಲಕ್ಕಿ ಕಂಪಿನ ನಾಡಲ್ಲಿ **ಸಿದ್ಧೇಶ್ವರ ದೇವಾಲಯ**
• ಜಿ.ಎಂ.ಶಿರಹಟ್ಟಿ

42 ಬೆಂಗಳೂರಿನಲ್ಲೊಂದು ಮಾದರಿ **ಪಾರಂಪರಿಕ ಗ್ರಾಮ**
• ಕೆ. ಅಶೋಕ

46 ಎನ್‌ಆರ್‌ಜಿ ಕೆಲಸಕ್ಕೆ ಪುರುಷರು ದೂರ.. **ಮಹಿಳೆಯರೇ ಪೂರ...**
• ರಮೇಶ್ ಹೆಗಡೆ ಗುಂಡೂಮನೆ

48 ಅನಾಥ ಶವಗಳಿಗೆ **ಮುಕ್ತಿ ಕರುಣಿಸುವ ಮಹಿಳೆ**
• ವೃಷಾಂಕ್ ಖಾಡ್ಕರ್

50 ಪದಬಂಧ-23



**ಪ್ರಧಾನ ಸಂಪಾದಕರು**
**ಡಾ|| ಪಿ. ಎಸ್. ಹರ್ಷ, ಐಪಿಎಸ್**
ಆಯುಕ್ತರು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

**ಸಂಪಾದಕೀಯ ಸಲಹೆ**
**ಡಿ.ಪಿ. ಮುರಳೀಧರ್**
ಜಂಟಿ ನಿರ್ದೇಶಕರು

**ಸಹನಾ ಎಂ.**
ಉಪ ನಿರ್ದೇಶಕರು

**ಉಪ ಸಂಪಾದಕರು**
**ಬಿ. ಜಿ. ಪೂರ್ಣಿಮ**

**ಪ್ರಕಾಶಕರು**
**ಆಯುಕ್ತರು**
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
#17, ವಾರ್ತಾ ಸೌಧ, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು - 560 001
Ph : 080-22028103 / 22028023
email : varthajanapada@yahoo.co.in
https://dipr.karnataka.gov.in

**ಮುದ್ರಕರು**
**ಲಾವಣ್ಯ ಮುದ್ರಣ**
# 19, ವಿದ್ಯಾಪೀಠ ವೃತ್ತ,
ಬನಶಂಕರಿ 1ನೇ ಹಂತ, ಬೆಂಗಳೂರು-50


ಲೇಖಕರ ಅಭಿಪ್ರಾಯಗಳು ಸರ್ಕಾರದ ಅಭಿಪ್ರಾಯಗಳಲ್ಲ

Download From : www.kpscvaani.com

# ನಿಮ್ಮ ಅನಿಸಿಕೆ

ವಿಶಾಲವಾಗಿರುವ ಹಂಪಿ ಶಿಲ್ಪಕಲಾ ಸ್ಮಾರಕಗಳನ್ನು ಸುತ್ತಿ ಬರಲು ವಯಸ್ಕರಿಗೆ ತುಂಬಾ ತ್ರಾಸದಾಯುಕವಾಗಿರುತ್ತದೆ. ಹೀಗಿರುವಾಗ ವೃದ್ಧರು, ವಿಕಲಚೇತನರು ಮಕ್ಕಳಿಗೆ ಸಹಾಯವಾಗಬಹುದಾದ 'ಹಂಪಿ ಆನ್ ವೀಲ್ಸ್' ಎಂಬ ರೈಲು ಬಸ್ ಸೇವೆಯನ್ನು ಹಂಪಿ ಪ್ರದೇಶ ಪ್ರಾಧಿಕಾರವು ಆರಂಭಿಸಿರುವುದು ಪ್ರವಾಸಿಗರಿಗೆ ಹೆಚ್ಚಿನ ಸೌಲಭ್ಯ ಒದಗಿಸಿದಂತ್ತಾಗಿದೆ. ಪ್ರಾಧಿಕಾರದ ಈ ಕಾರ್ಯ ಶ್ಲಾಘನೀಯವಾದುದು.

**–ಎಸ್.ಸಿ. ರವಿ, ಮೈಸೂರು**

* * *

ಉತ್ತರ ಕರ್ನಾಟಕದ ಹಾವೇರಿ ಜಿಲ್ಲೆಯ ಪ್ರವಾಸಿ ತಾಣಗಳ ಬಗ್ಗೆ ಡಾ: ರಂಗನಾಥ ಕಳಗಟ್ಟಿ ಅವರು ಪರಿಚಯ ಮಾಡಿರುವ ಲೇಖನ ತುಂಬಾ ಸೊಗಸಾಗಿ ಮೂಡಿ ಬಂದಿದೆ. ಹಾವೇರಿ ಜಿಲ್ಲೆಯ ಎಲ್ಲಾ ಪ್ರವಾಸಿ ತಾಣಗಳನ್ನು ಖುದ್ದಾಗಿ ಸುತ್ತಾಡಿದ ಅನುಭವ ಮೂಡಿ ಬಂದಿತು. ಇಲ್ಲಿನ ನವಿಲು ಧಾಮ, ಕೆಂಪು ಮೆಣಸಿನ ಕಾಯಿ ಮಾರುಕಟ್ಟೆ, ಅಗಡಿ ತೋಟ, ಜಾನಪದ ವಿಶ್ವವಿದ್ಯಾನಿಲಯ, ಶ್ರೀ ಮಾಲತೇಶ ದೇವಸ್ಥಾನ, ಶ್ರೀ ಕದಂಬದೇವಸ್ಥಾನ, ಕೃಷ್ಣಮೃಗಗಳ ತಾಣ, ಇವೇ ಮೊದಲಾದವುಗಳನ್ನು ಸವಿವರವಾಗಿ ಪರಿಚಯ ಮಾಡಿಕೊಟ್ಟಿದ್ದಾರೆ.

**–ರೇವಣ್ಣ, ಬಸವರಾಜಪುರ**

ಕರ್ನಾಟಕದ 23ನೇ ಮುಖ್ಯಮಂತ್ರಿಯಾಗಿ ಬಸವರಾಜ ಎಸ್ ಬೊಮ್ಮಾಯಿ ಅವರು ಅಧಿಕಾರ ಸ್ವೀಕರಿಸುತ್ತಿರುವ ಫೋಟೋದೊಂದಿಗೆ ಪ್ರಕಟವಾಗಿರುವ ಲೇಖನ ತುಂಬಾ ಇಷ್ಟವಾಯಿತು. ಹಾಗೆಯೇ ಸ್ವಾತಂತ್ರ್ಯ ದಿನಾಚರಣೆಯ ಸಂದರ್ಭದ ಭಾಷಣದಲ್ಲಿ ಮುಖ್ಯಮಂತ್ರಿ ಅವರು ಪ್ರಕಟಿಸಿದ ಅಮೃತ ಯೋಜನೆಗಳ ಮಹತ್ವದ ಲೇಖನ ರಾಜ್ಯದ ಜನತೆಗೆ ಮುದ ನೀಡುವಂತಿದೆ. ದಂಡಿ ಸತ್ಯಾಗ್ರಹದಲ್ಲಿ ಏಕೈಕ ಕನ್ನಡದ ಕುವರನಾಗಿ ಶ್ರೀ ಮೈಲಾರ ಮಹಾದೇವರ ಲೇಖನ ಇಂದಿನ ಯುವ ಜನತೆಗೆ ರಾಷ್ಟ್ರಾಭಿಮಾನ ತಿಳಿಯುವಂತಿದೆ.

**–ಡಾ: ಬಿ.ಎ.ರಾಜಪ್ಪ ನಿಬಗೂರು, ಜಗಲೂರು**

* * *

ಸೆಪ್ಟೆಂಬರ್ ವಾರ್ತಾ ಜನಪದ ಸಂಚಿಕೆಯ ಮುಖಪುಟ, ಹಿಂಪುಟದ ಫೋಟೋಗಳು ಬಹಳ ಚೆನ್ನಾಗಿ ಮೂಡಿ ಬಂದಿದೆ. ಸಂಪಾದಕರಿಗೆ ಅಭಿನಂದನೆಗಳು. ನೂತನ ರಾಜ್ಯ ಸಂಪುಟ ಸಚಿವರ ಕಿರುಪರಿಚಯ ಬಹಳ ಉತ್ತಮವಾಗಿದೆ. ಹಾಗೂ ತುಂಗಭದ್ರಾ ಅಣೆಕಟ್ಟು ವೀಕ್ಷಿಸಿ 'ಮೂಕ ವಿಸ್ಮಿತರಾದ ಉಪರಾಷ್ಟಪತಿಗಳು' ಲೇಖನವನ್ನು ಕೆ.ರೋಹಿಣಿ ಅವರು ಇನ್ನೂ ಓದಬೇಕು ಅನ್ನುವ ರೀತಿಯಲ್ಲಿ ಮೂಡಿಸಿದ್ದಾರೆ. ಸಂಚಿಕೆಯಲ್ಲಿ ಉತ್ತಮ ಲೇಖನ ನೀಡುವ ಜೊತೆಗೆ ಉತ್ತಮ ಫೋಟೋಗಳನ್ನು ಮುದ್ರಣ ಮಾಡಿರುವುದಕ್ಕೆ ತಮಗೆ ತುಂಬಾ ತುಂಬಾ ಅಭಿನಂದನೆಗಳು.

**–ಸೋಸಲೆ ಮಹಾದೇವ ಶೆಟ್ಟಿ, ಟಿ. ನರಸೀಪುರ**

* * *

ಕಳೆದ ಜನಪದ ಮಾಸ ಪತ್ರಿಕೆಯು ಹಲವಾರು ವಿಶೇಷತೆಗಳಿಂದ ಕೂಡಿದೆ. ನೂತನ ಮುಖ್ಯಮಂತ್ರಿಗಳ ಹೊಸತನದ ಜವಾಬ್ದಾರಿಗಳ ಹಾಗೂ ಘೋಷಣೆಗಳ ವಿವರಣೆ ಅರ್ಥವತ್ತಾಗಿದ್ದವು. ದಂಡಿ ಸತ್ಯಾತ್ರಹದಲ್ಲಿ ಧುಮುಕಿದ್ದ 'ಮೈಲಾರ ಮಹದೇವ' ಅವರ ದಿಟ್ಟ ಪರಿಚಯ ರೋಮಾಂಚನ ತಂದಿತು. ಯುವ ಕುಡಿಗಳಿಗೆ ಸ್ಪೂರ್ತಿಯನ್ನು ತಂದಿತು. ವಿಶ್ವ ವಿಖ್ಯಾತ ತಾಣ ಹಂಪಿಯನ್ನು ಸುತ್ತಲು 'ಹಂಪಿ ಆನ್ ವೀಲ್ಸ್' ಸಾರಿಗೆ ವ್ಯವಸ್ಥೆ ಪ್ರವಾಸಿಗರಿಗೆ ಖುಷಿಯನ್ನುಂಟು ಮಾಡಿದೆ. ಹಾವೇರಿಯ ಮುಖ್ಯ ತಾಣಗಳು ಮನತಣಿಸಿದವು. ತುಂಗಭದ್ರಾ ಅಣೆಕಟ್ಟೆಯು ಉಪರಾಷ್ಟ್ರಪತಿಗಳನ್ನು ಮೂಕವಿಸ್ಮಿತರನ್ನಾಗಿ ಮಾಡಿದ್ದು ಕನ್ನಡ ನಾಡಿನ ಸಿರಿವಂತಿಕೆಯನ್ನು ಸಾರುತ್ತಿದೆ. ಹತ್ತನೇ ತರಗತಿ ಪಾಸಾದವರಿಗೆ ಮುಂದೆ ಮಾಡಬಹುದಾದ ಕೋರ್ಸ್‌ಗಳ ಪರಿಚಯ ವಿದ್ಯಾರ್ಥಿಗಳಿಗೆ ಉಪಯುಕ್ತವಾಗಲಿದೆ.

**–ಡಾ. ಶಿವರಾಜ ಯತಗಲ್, ಲಿಂಗಸೂಗೂರು**

* * *

ವಾರ್ತಾ ಜನಪದದಲ್ಲಿ ಪ್ರಕಟವಾದ ದಂಡಿ ಸತ್ಯಾಗ್ರಹದಲ್ಲಿ ಕನ್ನಡದ ಏಕೈಕ ವೀರ 'ಮೈಲಾರ ಮಹಾದೇವ' ಎಂಬ ಲೇಖನ ಸಮಯೋಚಿತವಾಗಿತ್ತು. ಮಹಾತ್ಮಗಾಂಧಿಯವರ ಪ್ರಭಾವಕ್ಕೆ ಒಳಗಾಗಿ ದಂಡಿ ಸತ್ಯಾಗ್ರಹದಲ್ಲಿ ಭಾಗವಹಿಸಿ ಹುತಾತ್ಮರಾದ ಸ್ವಾತಂತ್ರ್ಯ ಪ್ರೇಮಿ ಮೈಲಾರ ಮಹಾದೇವ ಇವರ ಕೆಚ್ಚೆದೆಯ ಕಲಿತನವನ್ನು ವಿವರಿಸುವ ಈ ಲೇಖನವನ್ನು ಓದಿ ನನಗೆ ರೋಮಾಂಚನವಾಯಿತು. 75 ನೇ ಸ್ವಾತಂತ್ರ್ಯೋತ್ಸವದ ಸಂಭ್ರಮದ ಆಚರಣೆಯ ಈ ಸಂದರ್ಭದಲ್ಲಿ ಈ ಲೇಖನ ಪ್ರಕಟಿಸಿದ ನಿಮಗೆ ವಂದನೆಗಳು.

**–ಬಸವರಾಜ ಹೂಗಾರ, ಇಳಕಲ್**




ಸೆಪ್ಟೆಂಬರ್ ತಿಂಗಳ ವಾರ್ತಾ ಜನಪದದಲ್ಲಿ ಆನೆಗದ್ದೆಯ ಮಾದರಿ ಶಾಲೆ ಬಗ್ಗೆ ತುಂಬಾ ಚೆನ್ನಾಗಿ ಚಿತ್ರ ಸಮೇತ ಹಾಕಿರುವುದು ತುಂಬಾ ಸಂತಸವಾಯಿತು. ಈ ಶಾಲೆ ಎಲ್ಲಾ ಶಾಲೆಗಳಿಗೂ ಮಾದರಿಯಾಗಿದೆ. ಜೊತೆಗೆ ಸ್ವಾತಂತ್ರ್ಯ ಅಮೃತ ಮಹೋತ್ಸವದ ಸಂದರ್ಭದಲ್ಲಿ ಮೈಲಾರ ಮಹದೇವನ ಬಗ್ಗೆ ಫೋಟೋ ಸಮೇತ ವಿಚಾರ ತಿಳಿಸಿರುವುದು ಸ್ತುತ್ಯಾರ್ಹವಾಗಿದೆ. ಹಾವೇರಿ ಜಿಲ್ಲೆಯ ಹೆಸರು ಕೇಳಿದ್ದರೂ, ಅಲ್ಲಿ ಇಷ್ಟೆಲ್ಲಾ ವಿಶೇಷತೆ ಇದೆ ಎಂಬುದು ಚಿತ್ರ ಸಮೇತ ಕೊಟ್ಟಿರುವ ಲೇಖನ ಓದಿದಾಗಲೇ ಗೊತ್ತಾಗಿದ್ದು, ಅಲ್ಲಿಗೆ ಹೋಗಿ ಬಂದಷ್ಟೇ ಆನಂದವಾಯಿತು. ಏಲಕ್ಕಿ ಬೆಳೆಯು ಅಲ್ಲಿಯ ಮಹತ್ವ ಅರಿತೆವು.

ಇನ್ನು ಗೋಳೂರು ಗಣೇಶನ ಬಗ್ಗೆ ಹೆಚ್ಚಿನ ಮಾಹಿತಿಯನ್ನು ಓದುಗರಿಗೆ ನೀಡಿದ್ದೀರಿ. ನಟಿ ಜಯಂತಿಯ ಬಗ್ಗೆಯೂ ಅನೇಕ ಮಾಹಿತಿ ತಿಳಿಯಿತು. ನೂತನ ಮುಖ್ಯಮಂತ್ರಿಗಳ ಮತ್ತು ಸಚಿವ ಸಂಪುಟದವರ ಬಗ್ಗೆ ಪರಿಚಯ ಸೇರಿದಂತೆ ಎಲ್ಲಾ ವಿಚಾರಗಳು ಸೊಗಸಾಗಿ ಮೂಡಿ ಬಂದಿದೆ.

**–ಜೆ.ವಿ.ನಾಗರತ್ನಮ್ಮ, ಸಿದ್ದೇಶ್ವರ ನಗರ**


'ವಾರ್ತಾ ಜನಪದ' ಮಾಸಿಕ ಈಗ **www.kanaja.inನಲ್ಲಿ ಲಭ್ಯ**

ವಾರ್ತಾ ಜನಪದ ಮಾಸಿಕಕ್ಕೆ ಚಂದಾದಾರರಾಗಲು ಬಯಸುವವರು ರೂ 25/– ಅನ್ನು ಪಾವತಿಸಲು ಕಡ್ಡಾಯವಾಗಿ ಸೇವಾಸಿಂಧುವಿನ **https://sevasindhu.karnataka.gov.in** ಮೂಲಕ ಆನ್ ಲೈನ್ ಅರ್ಜಿಯನ್ನು ಸಲ್ಲಿಸಬೇಕು.

ವಾರ್ತಾ ಜನಪದ ಪತ್ರಿಕೆಯ ಸಾಫ್ಟ್ ಕಾಪಿಯನ್ನು ಇ–ಮೇಲ್ ಮೂಲಕ ಉಚಿತವಾಗಿ ಚಂದಾದಾರರಾಗಲು ಇಚ್ಛಿಸುವವರು ತಮ್ಮ ಇ–ಮೇಲ್ ವಿಳಾಸವನ್ನು 9480841210 ಗೆ ಕಳುಹಿಸಿ ನೋಂದಾಯಿಸಿ ಕೊಳ್ಳಬಹುದು.

**Download From : www.kpscvaani.com**



# ಸಂಪಾದಕೀಯ...

**ಪ್ರಿಯ ಓದುಗ ಮಿತ್ರರೆ,**

ಅನ್ನದಾತರ ಮಕ್ಕಳು ಉನ್ನತ ಶಿಕ್ಷಣ ಪಡೆಯುವ ಮೂಲಕ ಉನ್ನತ ಹುದ್ದೆಯನ್ನು ಹೊಂದುವಂತ್ತಾಗಬೇಕು ಎಂಬುದು ಮುಖ್ಯಮಂತ್ರಿ ಬಸವರಾಜ ಎಸ್ ಬೊಮ್ಮಾಯಿ ಅವರ ಉದ್ದೇಶ. ಅವರು ಅಧಿಕಾರ ಸ್ವೀಕರಿಸಿದ ದಿನವೇ ರೈತ ಮಕ್ಕಳ ಉನ್ನತ ಶಿಕ್ಷಣಕ್ಕೆ ವಿದ್ಯಾರ್ಥಿ ವೇತನ ನೀಡಲು ಒಂದು ಸಾವಿರ ಕೋಟಿ ರೂಗಳನ್ನು ಕಾಯ್ದಿರಿಸುವುದಾಗಿ ಘೋಷಣೆ ಮಾಡಿದರು. ಘೋಷಣೆ ಮಾಡಿದ ಒಂದು ತಿಂಗಳಲ್ಲೇ ಯೋಜನೆ ಉದ್ಘಾಟನೆಗೊಂಡಿದೆ. ಸೆಪ್ಟೆಂಬರ್ 5 ರಂದು ಕೇಂದ್ರ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವರಾದ ನರೇಂದ್ರ ಸಿಂಗ್ ತೋಮರ್ ಅವರು ಯೋಜನೆಗೆ ಚಾಲನೆ ನೀಡಿದರು.

'ಮುಖ್ಯಮಂತ್ರಿ ರೈತ ವಿದ್ಯಾನಿಧಿ' ಎಂದು ಹೆಸರಿಡಲಾಗಿರುವ ಈ ಯೋಜನೆಯಿಂದ ಪ್ರಸಕ್ತ ಸಾಲಿನಲ್ಲಿ ಅಂದಾಜು 18 ಲಕ್ಷ ವಿದ್ಯಾರ್ಥಿಗಳು ಸೌಲಭ್ಯ ಪಡೆಯಲಿದ್ದಾರೆ. ಸೌಲಭ್ಯಕ್ಕಾಗಿ ಅರ್ಜಿ ಸಲ್ಲಿಸುವ ಪ್ರಕ್ರಿಯೆಯನ್ನು ಹಂತ ಹಂತವಾಗಿ ಆರಂಭಿಸಲಾಗುತ್ತಿದ್ದು, ಇದು ರೈತ ಮಕ್ಕಳ ಉನ್ನತ ಶಿಕ್ಷಣದ ಪ್ರಮಾಣ ಹೆಚ್ಚಿಸಲು ಸರ್ಕಾರ ಇಟ್ಟಿರುವ ಮಹತ್ವದ ಹೆಜ್ಜೆಯಾಗಲಿದೆ.

ನಗರಾಭಿವೃದ್ಧಿಗೆ ಸಾರಿಗೆ ಸೇವೆಯು ಅತ್ಯಂತ ಪೂರಕವಾಗಿರುತ್ತದೆ. ಹಾಗಾಗಿ ಬೆಂಗಳೂರು ನಗರದ ಸಂಚಾರ ದಟ್ಟಣೆಗೆ ಪರಿಹಾರ ನೀಡುವ ನಿಟ್ಟಿನಲ್ಲಿ ಮೆಟ್ರೋ ಸೇವೆಯನ್ನು ವಿಸ್ತರಿಸಲಾಗುತ್ತಿದೆ. ಕಳೆದ ತಿಂಗಳು ಕೆಂಗೇರಿಯವರೆಗೆ (7.6 ಕಿಮೀ) ವಿಸ್ತರಿಸಲಾಗಿರುವ ಮೈಸೂರು ರಸ್ತೆಯ ನೇರಳೆ ಮಾರ್ಗದ ಮೆಟ್ರೋ ಸೇವೆಗೆ ಮುಖ್ಯಮಂತ್ರಿ ಬಸವರಾಜ ಎಸ್ ಬೊಮ್ಮಾಯಿ ಮತ್ತು ಕೇಂದ್ರ ವಸತಿ, ನಗರ ವ್ಯವಹಾರ, ಪೆಟ್ರೋಲಿಯಂ ಹಾಗೂ ನೈಸರ್ಗಿಕ ಅನಿಲ ಖಾತೆ ಸಚಿವರಾದ ಹರ್ದೀಪ್ ಸಿಂಗ್ ಅವರು ಚಾಲನೆ ನೀಡಿದರು.

ಇದುವರೆವಿಗೆ ಈ ಮಾರ್ಗದಲ್ಲಿ ಅತಿ ಹೆಚ್ಚು ಸಂಚಾರ ದಟ್ಟಣೆಯನ್ನು ಅನುಭವಿಸುತ್ತಿದ್ದ ಸಾರ್ವಜನಿಕರು ಈಗ ಸಂತೋಷದಿಂದ ಮೆಟ್ರೋದಲ್ಲಿ ಸಂಚರಿಸುತ್ತಿದ್ದಾರೆ. ಸದ್ಯ ಒಟ್ಟು 58 ಕಿ.ಮೀ ಉದ್ದದ ಮೆಟ್ರೋ ಮಾರ್ಗ ನಿರ್ಮಾಣವಾಗಿರುವುದರಿಂದ ಬೆಂಗಳೂರು ನಗರವು ಚೆನ್ನೈಯನ್ನು ಹಿಂದಿಕ್ಕಿ ದೇಶದಲ್ಲಿಯೇ ಮೂರನೇ ಅತಿ ಉದ್ದದ ಮೆಟ್ರೋ ಮಾರ್ಗವನ್ನು ಹೊಂದಿರುವ ನಗರವೆನಿಸಿಕೊಂಡಿದೆ.

ಶಿಕ್ಷಣದ ಜೊತೆಗೆ ವಿದ್ಯಾರ್ಥಿಗಳಿಗೆ ಜ್ಞಾನ, ಕೌಶಲ್ಯ ಮತ್ತು ಮೌಲ್ಯಗಳನ್ನು ನೀಡುವ ಮತ್ತು ಪರಿಪೂರ್ಣ ವ್ಯಕ್ತಿತ್ವವನ್ನು ರೂಪಿಸುವ ಜೀವನ ಶಿಕ್ಷಣ ನೀಡುವ ಉದ್ದೇಶದಿಂದ ರಾಷ್ಟ್ರೀಯ ಶಿಕ್ಷಣ ನೀತಿ–2020ಅನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಈ ನೂತನ ನೀತಿಯಿಂದ ಶಿಕ್ಷಣ ವ್ಯವಸ್ಥೆಯಲ್ಲಿ ಅಮೂಲಾಗ್ರ ಬದಲಾವಣೆಯನ್ನು ತರಲು ಸಾಧ್ಯವಿದೆ. ಯುವಕರಿಗೆ ಉತ್ತಮ ಭವಿಷ್ಯ ನೀಡುವಂತೆ ನೂತನ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಜಾರಿಗೆ ತರುವುದು ರಾಜ್ಯ ಸರ್ಕಾರದ ಸದುದ್ದೇಶವಾಗಿದೆ. ಆದಾಗ್ಯೂ ಈ ನೀತಿಯ ಪ್ರಯೋಜನವನ್ನು ಅರಿಯದವರು ವಿರೋಧ ವ್ಯಕ್ತಪಡಿಸುತ್ತಿರುವುದರಿಂದ ಯಾರು ಆತಂಕಕ್ಕೆ ಒಳಗಾಗುವ ಅವಶ್ಯಕತೆ ಇಲ್ಲ. ಇದರ ಬಗ್ಗೆ ಮುಕ್ತವಾಗಿ ಚರ್ಚಿಸಲು ಸರ್ಕಾರ ಸಿದ್ಧವಿದೆ ಎಂದು ಮುಖ್ಯಮಂತ್ರಿ ಅವರೇ ಭರವಸೆ ನೀಡಿರುವುದರಿಂದ ಸಾರ್ವಜನಿಕರು ಮತ್ತು ವಿದ್ಯಾರ್ಥಿಗಳು ಆತಂಕಕ್ಕೆ ಒಳಗಾಗದೇ ಸರ್ಕಾರದೊಂದಿಗೆ ಈ ಕುರಿತು ಮುಕ್ತವಾಗಿ ಚರ್ಚಿಸಬಹುದು.

ಇನ್ನು ನಮ್ಮ ರಾಜ್ಯವು ಲಸಿಕೆ ನೀಡಿಕೆಯಲ್ಲಿ ದೇಶದಲ್ಲೇ ಎರಡನೇ ಸ್ಥಾನವನ್ನು ಹೊಂದಿದ್ದು, ಇದುವರೆವಿಗೂ ಅಂದಾಜು 5.18 ಕೋಟಿ ಡೋಸ್ ಕೋವಿಡ್ ಲಸಿಕೆಯನ್ನು ನೀಡಲಾಗಿದೆ. ರಾಜ್ಯ ಸರ್ಕಾರವು ಕೋವಿಡ್ ಲಸಿಕಾ ಅಭಿಯಾನವನ್ನು ಅತ್ಯಂತ ಯಶಸ್ವಿಯಾಗಿ ಹಮ್ಮಿಕೊಳ್ಳುತ್ತಿರುವುದರಿಂದಲೇ ಸೋಂಕಿನ ಪ್ರಮಾಣ ತಗ್ಗಿದೆ. ಸೋಂಕಿನ ಪ್ರಮಾಣ ಕಡಿಮೆಯಾಗಿರುವ ಹಿನ್ನೆಲೆಯಲ್ಲಿ ಬಹುಪಾಲು ಕ್ಷೇತ್ರಗಳು ಮೊದಲ ಸ್ಥಿತಿಗೆ ಮರಳುತ್ತಿವೆ. ಮಕ್ಕಳು ಶಾಲಾ–ಕಾಲೇಜುಗಳನ್ನು ನೋಡಿ ವರ್ಷಗಳೇ ಕಳೆದು ಹೋಗಿತ್ತು. ಸರ್ಕಾರವು ಸಾಕಷ್ಟು ಮುಂಜಾಗ್ರತಾ ಕ್ರಮಗಳನ್ನು ತೆಗೆದುಕೊಂಡು ಶಾಲಾ–ಕಾಲೇಜುಗಳನ್ನು ಹಂತ ಹಂತವಾಗಿ ಪ್ರಾರಂಭಿಸುತ್ತಿದೆ. ಮಕ್ಕಳು ಅತ್ಯಂತ ಉತ್ಸಾಹದಿಂದ ಶಾಲಾ–ಕಾಲೇಜುಗಳಿಗೆ ಬರಲಾರಂಭಿಸಿದ್ದಾರೆ. ಪರಿಸ್ಥಿತಿ ಸಂಪೂರ್ಣವಾಗಿ ಸಹಜ ಸ್ಥಿತಿಗೆ ಮರಳಬೇಕಾದರೆ ಎಲ್ಲರೂ ಲಸಿಕೆಯನ್ನು ಹಾಕಿಸಿಕೊಳ್ಳಬೇಕು. ಆಗ ಎಲ್ಲಾ ಚಟುವಟಿಕೆಗಳು ಸಂಪೂರ್ಣವಾಗಿ ಸಹಜ ಸ್ಥಿತಿಗೆ ಮರಳಲು ಸಾಧ್ಯ. ಆದ್ದರಿಂದ ತಪ್ಪದೇ ಎಲ್ಲರೂ ಲಸಿಕೆಯನ್ನು ಹಾಕಿಸಿಕೊಳ್ಳಿ.

**ಓದುಗರಿಗೆಲ್ಲರಿಗೂ ವಿಜಯ ದಶಮಿಯ ಹಾರ್ದಿಕ ಶುಭಾಶಯಗಳು.**

**ಡಾ|| ಪಿ. ಎಸ್. ಹರ್ಷ, ಐಪಿಎಸ್**
ಪ್ರಧಾನ ಸಂಪಾದಕರು

**ಪ್ರಧಾನ ಸಂಪಾದಕರು,** ವಾರ್ತಾ ಜನಪದ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ,
#17, ವಾರ್ತಾ ಸೌಧ, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001. email : feedbackjanapada@gmail.com



Download From : www.kpscvaani.com

# ಅನ್ನದಾತನ ಮನೆಯಲ್ಲಿ ವಿದ್ಯಾದೀಪ ಬೆಳಗಿಸಲು ಮುಂದಾದ ರಾಜ್ಯ ಸರ್ಕಾರ




**ಊಟ ಮುಗಿದ ಮೇಲೆ ಸಾಮಾನ್ಯವಾಗಿ ಎಲ್ಲರೂ "ಅನ್ನದಾತ ಸುಖೀಭವ" ಎಂದು ಹೇಳುತ್ತೇವೆ. ಆ ಅನ್ನದಾತನ ಕ್ಷೇಮಾಭಿವೃದ್ಧಿಗಾಗಿ ಎಷ್ಟು ಯೋಜನೆಗಳನ್ನು ಜಾರಿಗೊಳಿಸಿದರೂ ಕಡಿಮೆಯೇ. ಅಂತಹ ಅನ್ನದಾತರ ಮಕ್ಕಳ ಉನ್ನತ ಶಿಕ್ಷಣಕ್ಕೆ ಪ್ರೋತ್ಸಾಹ ನೀಡುವಂತಹ 'ಮುಖ್ಯಮಂತ್ರಿ ರೈತ ವಿದ್ಯಾನಿಧಿ' ಯೋಜನೆಯನ್ನು ದೇಶದಲ್ಲೇ ಮೊಟ್ಟಮೊದಲ ಬಾರಿಗೆ ರಾಜ್ಯ ಸರ್ಕಾರ ಜಾರಿಗೊಳಿಸಿದೆ.**

ಉಮೇಶ್ ಕೊಲಿಗೆರೆ

ಉತ್ಪಾದನೆ, ಮಾರುಕಟ್ಟೆ, ಶಿಕ್ಷಣ, ತರಬೇತಿ, ತಂತ್ರಜ್ಞಾನ, ಆಧುನಿಕ ಯಂತ್ರೋಪಕರಣಗಳ ಬೆಂಬಲ, ವಿವಿಧ ಯೋಜನೆಗಳ ಆರ್ಥಿಕ ನೆರವು ಹೀಗೆ ಸಾಕಷ್ಟು ಉಪಕ್ರಮಗಳನ್ನು ಸರ್ಕಾರ ತೆಗೆದುಕೊಳ್ಳುತ್ತದೆ. ಅದೇ ರೀತಿಯಲ್ಲಿ ಸರ್ಕಾರವು ಅನ್ನದಾತರಿಗಾಗಿ ಹಲವಾರು ಯೋಜನೆಗಳನ್ನು ಜಾರಿಗೆ ತಂದಿದೆ. ಆ ಎಲ್ಲಾ ಯೋಜನೆಗಳನ್ನು ಮುಂದುವರೆಸಿಕೊಂಡು ಹೋಗುವ ಜೊತೆಗೆ ಮುಖ್ಯಮಂತ್ರಿ ಬಸವರಾಜ ಎಸ್ ಬೊಮ್ಮಾಯಿ ಅವರು ದೇಶದಲ್ಲೇ ಮತ್ತೊಂದು ಮೈಲಿಗಲ್ಲಾಗುವ ಯೋಜನೆಯೊಂದನ್ನು ಜಾರಿಗೊಳಿಸಿದ್ದಾರೆ.



Download From : www.kpscvaani.com

ಜುಲೈ 28 ರಂದು ಅಧಿಕಾರ ಸ್ವೀಕರಿಸಿದ ಬಸವರಾಜ ಎಸ್ ಬೊಮ್ಮಾಯಿ ಅವರು ಮೊದಲ ದಿನದ ಸಚಿವ ಸಂಪುಟದಲ್ಲಿ ನಾಲ್ಕು ಪ್ರಮುಖ ನಿರ್ಧಾರಗಳನ್ನು ತೆಗೆದುಕೊಂಡರು. ಅವುಗಳಲ್ಲಿ ಮೊದಲನೆಯದು ಕೃಷಿಕರ ಮಕ್ಕಳ ಉನ್ನತ ವ್ಯಾಸಂಗಕ್ಕಾಗಿ ಶಿಷ್ಯವೇತನ ನೀಡುವುದು. ಅದಕ್ಕಾಗಿ ಆ ದಿನವೇ ಒಂದು ಸಾವಿರ ಕೋಟಿ ರೂಪಾಯಿಗಳನ್ನು ಕಾಯ್ದಿರಿಸಲಾಯಿತು. ಉಳಿದಂತೆ ಹಿರಿಯ ನಾಗರಿಕರಿಗೆ ನೀಡಲಾಗುವ ಸಂಧ್ಯಾಸುರಕ್ಷಾ ಮಾಸಾಶನವನ್ನು 1000 ದಿಂದ 1200 ರೂಪಾಯಿಗಳಿಗೆ ಹೆಚ್ಚಿಸುವುದು, ಅದಕ್ಕಾಗಿ 862 ಕೋಟಿ ರೂಪಾಯಿಗಳನ್ನು ಕಾಯ್ದಿರಿಸಲಾಯಿತು. ವಿಧವಾ ವೇತನವನ್ನು 600ರಿಂದ 800 ರೂ.ಗಳಿಗೆ ಹೆಚ್ಚಿಸಿ 400 ಕೋಟಿರೂ ನೀಡಲಾಯಿತು. ವಿಶೇಷ ಚೇತನರ ಮಾಸಾಶನವನ್ನು 600 ರಿಂದ 800 ರೂ.ಗೆ ಹೆಚ್ಚಿಸಲಾಗಿದೆ. ಜನಸಾಮಾನ್ಯರ ಬಳಿಗೆ ನಮ್ಮ ಆಡಳಿತ ತಲುಪಬೇಕು, ಯಾವುದೇ ಸೌಲಭ್ಯಗಳ ವಿತರಣೆಯಲ್ಲಿ ವಿಳಂಬವಾಗಬಾರದು ಎಂಬ ಸ್ಪಷ್ಟ ಸೂಚನೆಯನ್ನು ಸಂಪುಟ ಸಭೆಯ ಬಳಿಕ ಮುಖ್ಯಮಂತ್ರಿಯವರು ಆಡಳಿತ ವ್ಯವಸ್ಥೆಗೆ ನೀಡಿದರು.

ರೈತರ ಮಕ್ಕಳಿಗೆ ಶಿಷ್ಯವೇತನ ನೀಡುವ ಯೋಜನೆಗೆ "ಮುಖ್ಯಮಂತ್ರಿ ರೈತ ವಿದ್ಯಾನಿಧಿ" ಎಂದು ನಾಮಕರಣ ಮಾಡಲಾಗಿದೆ. ಇದಕ್ಕಾಗಿ ಒಂದು ಸಾವಿರ ಕೋಟಿ ರೂಪಾಯಿಗಳನ್ನು ನಿಗದಿ ಮಾಡಲಾಗಿದೆ. ಮುಂದಿನ ದಿನಗಳಲ್ಲಿ ಅಗತ್ಯವಾದರೆ ಮತ್ತಷ್ಟು ಅನುದಾನ ಒದಗಿಸಲು ಬದ್ಧ ಎಂದು ಮುಖ್ಯಮಂತ್ರಿಗಳು ತಿಳಿಸಿದ್ದಾರೆ. ಸಂಪುಟ ನಿರ್ಣಯವಾದ 38 ದಿನಗಳಲ್ಲೇ ಈ ಯೋಜನೆ ಉದ್ಘಾಟನೆಯೂ ಆಗಿದೆ. ಸೆಪ್ಟೆಂಬರ್ 5ರಂದು ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ನಡೆದ ಕಾರ್ಯಕ್ರಮದಲ್ಲಿ ಕೇಂದ್ರ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವರಾದ ನರೇಂದ್ರ ಸಿಂಗ್ ತೋಮರ್ ಅವರು ಯೋಜನೆಗೆ ಚಾಲನೆ ನೀಡಿದರು. ಕೇಂದ್ರ ಸರ್ಕಾರದ ಸಂಪುಟದಲ್ಲಿ ಕೃಷಿ ಮತ್ತು ರೈತ ಕಲ್ಯಾಣ ರಾಜ್ಯ ಸಚಿವರಾಗಿರುವ ರಾಜ್ಯದವರೇ ಆದ ಶೋಭಾ ಕರಂದ್ಲಾಜೆ, ರಾಜ್ಯ ಕೃಷಿ ಸಚಿವರಾದ ಬಿ.ಸಿ.ಪಾಟೀಲ್, ಪಶುಸಂಗೋಪನಾ ಸಚಿವರಾದ ಪ್ರಭುಚವ್ಹಾಣ್, ತೋಟಗಾರಿಕಾ ಸಚಿವರಾದ ಮುನಿರತ್ನ ಸೇರಿದಂತೆ ಅನೇಕ ಗಣ್ಯರು ಭಾಗವಹಿಸಿದ್ದರು. ಅಂದು ಸಾಂಕೇತಿಕವಾಗಿ 150 ಮಂದಿ ವಿದ್ಯಾರ್ಥಿಗಳಿಗೆ ಶಿಷ್ಯವೇತನವನ್ನೂ ವಿತರಿಸಲಾಯಿತು.



> ದೇಶದಲ್ಲೇ ಪ್ರಪ್ರಥಮವಾಗಿ ರೂಪಿಸಲಾಗಿರುವ ಮುಖ್ಯಮಂತ್ರಿ ರೈತ ವಿದ್ಯಾ ನಿಧಿಯು ಎಸ್‌ಎಸ್‌ಎಲ್‌ಸಿ ಪರೀಕ್ಷೆಯನ್ನು ಯಶಸ್ವಿಯಾಗಿ ಪೂರೈಸಿದ ರೈತ ಮಕ್ಕಳ ಮುಂದಿನ ವಿದ್ಯಾರ್ಜನೆಯು ಸರಾಗವಾಗಿ ಮುಂದುವರೆಸಲು ಪ್ರತಿವರ್ಷ ಶಿಷ್ಯವೇತನ ಒದಗಿಸುವ ನೆರವಿನ ಯೋಜನೆಯಾಗಿದೆ. ವಾರ್ಷಿಕ ಶಿಷ್ಯವೇತನವನ್ನು ರೈತರ ಮಕ್ಕಳ ಬ್ಯಾಂಕ್ ಖಾತೆಗೆ ನೇರ ನಗದು ವರ್ಗಾವಣೆ (ಡಿಬಿಟಿ) ಮೂಲಕ ಜಮೆ ಮಾಡಲಾಗುವುದು. ಈ ಯೋಜನೆಯ ಸೌಲಭ್ಯವು ರಾಜ್ಯದ ರೈತಾಪಿ ಮಕ್ಕಳ ಉನ್ನತ ವ್ಯಾಸಂಗಕ್ಕೆ ವರದಾನವಾಗಲಿದೆ.

**ಜಾತಿ, ಧರ್ಮ ಮೀರಿದ ಯೋಜನೆ:**

ರಾಜ್ಯದಲ್ಲಿ ಎಸ್‌ಎಸ್‌ಎಲ್‌ಸಿ ನಂತರ ಶಿಕ್ಷಣಕ್ಕೆ ದಾಖಲಾಗುವ ಎಲ್ಲಾ ಕೃಷಿಕರ ಮಕ್ಕಳಿಗೆ ಜಾತಿ, ಧರ್ಮ ಮೀರಿ ಮುಖ್ಯಮಂತ್ರಿ ರೈತ ವಿದ್ಯಾನಿಧಿ ಯೋಜನೆಯಡಿ ಕನಿಷ್ಠ 2500 ರಿಂದ 11 ಸಾವಿರ ರೂಪಾಯಿಗಳವರೆಗೆ ಶಿಷ್ಯವೇತನ ನೀಡಲಾಗುತ್ತದೆ. ಅಧಿಕೃತವಾಗಿ ನೋಂದಣಿಯಾದ ಶಿಕ್ಷಣ ಸಂಸ್ಥೆಗಳಲ್ಲಿ ಪಿಯುಸಿ, ಐಟಿಐ, ಡಿಪ್ಲೋಮಾ ಕೋರ್ಸ್‌ಗಳಿಗೆ ದಾಖಲಾದ ವಿದ್ಯಾರ್ಥಿಗಳಿಗೆ 2500 ರೂ., ವಿದ್ಯಾರ್ಥಿನಿಯರು ಮತ್ತು ಅನ್ಯಲಿಂಗದವರಿಗೆ 3 ಸಾವಿರ ಶಿಷ್ಯವೇತನ ನೀಡಲಾತ್ತಿದೆ.

ಬಿ.ಎ., ಬಿಎಸ್‌ಸಿ, ಬಿಕಾಂ, ಇತ್ಯಾದಿ ಎಲ್ಲಾ ಪದವಿಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಐದು ಸಾವಿರ, ವಿದ್ಯಾರ್ಥಿನಿಯರು ಹಾಗೂ ಅನ್ಯಲಿಂಗದವರಿಗೆ 5500 ರೂ., ಎಲ್‌ಎಲ್‌ಬಿ, ಪ್ಯಾರಾಮೆಡಿಕಲ್, ಬಿಫಾರ್ಮಾ, ನರ್ಸಿಂಗ್ ಇತ್ಯಾದಿ ಕೋರ್ಸ್‌ಗಳಿಗೆ ದಾಖಲಾದ



Download From : www.kpscvaani.com



ವಿದ್ಯಾರ್ಥಿಗಳಿಗೆ 7500 ರೂ., ವಿದ್ಯಾರ್ಥಿನಿಯರಿಗೆ 8000 ರೂ., ಎಂಬಿಬಿಎಸ್, ಇಂಜಿನಿಯರಿಂಗ್‌ನ ಬಿಇ, ಬಿಟೆಕ್ ಮತ್ತು ಎಲ್ಲಾ ರೀತಿಯ ಸ್ನಾತಕೋತ್ತರ ಕೋರ್ಸ್‌ಗಳಲ್ಲಿ ಓದುತ್ತಿರುವ ವಿದ್ಯಾರ್ಥಿಗಳಿಗೆ 10 ಸಾವಿರ, ವಿದ್ಯಾರ್ಥಿನಿಯರು ಹಾಗೂ ಅನ್ಯಲಿಂಗದವರಿಗೆ ಹನ್ನೊಂದು ಸಾವಿರ ಶಿಷ್ಯವೇತನ ನೀಡಲಾಗುತ್ತದೆ.

ರಾಜ್ಯದ ಯಾವುದೇ ಭಾಗದಲ್ಲಿ ಉಳುಮೆ ಮಾಡುವ ಅಥವಾ ಕೃಷಿ ಮಾಡುವ ಜಮೀನನ್ನು ಹೊಂದಿರುವ ರೈತರ ಮಕ್ಕಳು ಶಿಷ್ಯವೇತನ ಪಡೆಯಲು ಅರ್ಹರಾಗಿರುತ್ತಾರೆ. ಜೈವಿಕ ಮಕ್ಕಳು ಮತ್ತು ದತ್ತು ಪಡೆದಿರುವ ಮಕ್ಕಳು ಶಿಷ್ಯವೇತನಕ್ಕೆ ಅರ್ಹರಿರುತ್ತಾರೆ. ಮೆರಿಟ್, ಅರ್ಹತಾ ಪರೀಕ್ಷೆ, ಶೈಕ್ಷಣಿಕ ಪರೀಕ್ಷೆಗಳಲ್ಲಿ ರ್‍ಯಾಂಕ್ ಪಡೆದ ಆಧಾರದ ಮೇಲೆ ವಿದ್ಯಾರ್ಥಿ ವೇತನ ಪಡೆಯುತಿದ್ದರೂ ರೈತ ವಿದ್ಯಾನಿಧಿ ಶಿಷ್ಯವೇತನಕ್ಕೆ ಅರ್ಹರಿರುತ್ತಾರೆ.

ಕೃಷಿ ಇಲಾಖೆ ಮೂಲಕ ಈ ಯೋಜನೆಯನ್ನು ಜಾರಿಗೆ ತರಲಾಗುತ್ತಿದೆ. ಅಂದಾಜಿನ ಪ್ರಕಾರ 18 ಲಕ್ಷ ವಿದ್ಯಾರ್ಥಿಗಳಿಗೆ ಶಿಷ್ಯವೇತನ ಸಿಗಲಿದೆ. ಕೋವಿಡ್–19ರ ಪರಿಸ್ಥಿತಿಯಿಂದಾಗಿ ಶೈಕ್ಷಣಿಕ ಚಟುವಟಿಕೆಗಳು ಮಂದಗತಿಯಲ್ಲಿ ಸಾಗುತ್ತಿರುವುದರಿಂದ ಪ್ರವೇಶಾತಿ ಪ್ರಮಾಣ ಕಡಿಮೆಯಿದೆ. ಹಾಗಾಗಿ ಯೋಜನೆಗೆ ಹಂತ ಹಂತವಾಗಿ ಅರ್ಜಿ ಸ್ವೀಕಾರ ಪ್ರಕ್ರಿಯೆಯನ್ನು ಆರಂಭಿಸಲು ನಿರ್ಧರಿಸಲಾಗಿದೆ.

ಕೃಷಿ ಇಲಾಖೆಯ www. kkisan.karnataka.gov.in ವೆಬ್‌ಸೈಟ್‌ನಲ್ಲಿ ಮತ್ತು ಸೇವಾಸಿಂಧು ಪೋರ್ಟಲ್ ಮೂಲಕ ಅರ್ಜಿ ಸಲ್ಲಿಸಲು ಅವಕಾಶ ನೀಡುವ ಸಾಧ್ಯತೆ ಇದೆ. ಯೋಜನೆಯ ಬಗ್ಗೆ ಕಾಲಕಾಲಕ್ಕೆ ಹೊರಡಿಸಲಾಗುವ ಅಧಿಸೂಚನೆ ಹಾಗೂ ತಿದ್ದುಪಡಿಗಳ ಬಗ್ಗೆ www. raitamitra.karnataka.gov.inರಲ್ಲಿ ಮಾಹಿತಿ ಪಡೆದುಕೊಳ್ಳಬಹುದಾಗಿದೆ.

ಅರ್ಜಿ ಸಲ್ಲಿಸಲು ರೈತರ ಮಕ್ಕಳು ಎಂಬುದನ್ನು ಖಾತ್ರಿ ಮಾಡಲು ಆರ್‌ಟಿಸಿ ಹೊಂದಿರುವುದು ಕಡ್ಡಾಯವಾಗಿದೆ. ಸಂಪರ್ಕಕ್ಕಾಗಿ ಮೊಬೈಲ್ ಸಂಖ್ಯೆ ನಮೂದು ಮಾಡಿದರೆ ಓಟಿಪಿ ಬರಲಿದ್ದು, ಅದನ್ನು ನಮೂದಿಸಿ




ನಾನು ಹಳ್ಳಿಗಳಿಗೆ ಹೋದಾಗ ರೈತರು ತಮ್ಮ ಮಗ ಅಥವಾ ಮಗಳು ಎಸ್‌ಎಸ್‌ಎಲ್‌ಸಿ ಪಾಸಾಗಿದ್ದಾರೆ. ಅವರನ್ನು ಮುಂದೆ ಓದಿಸಲು ನಮ್ಮಿಂದ ಸಾಧ್ಯವಿಲ್ಲ, ಅವರಿಗೆ ಒಂದು ಕೆಲಸ ಕೊಡಿಸಿ ಎಂದು ಅರ್ಜಿ ನೀಡುತ್ತಿದ್ದರು. ರೈತರ ಮಕ್ಕಳು ಉನ್ನತ ವ್ಯಾಸಂಗ ಮಾಡಬೇಕು, ಅವರು ಉನ್ನತ ಸ್ಥಾನಗಳಿಗೆ ಏರಬೇಕು ಎಂಬ ಸದ್ದುದ್ದೇಶದಿಂದ ವಿದ್ಯಾನಿಧಿ ಜಾರಿಗೆ ತರಲಾಗಿದೆ. ಹಣಕಾಸಿನ ಕೊರತೆಯಿಂದ ಇನ್ನು ಮುಂದೆ ರೈತರ ಮಕ್ಕಳು ಓದು ನಿಲ್ಲಿಸಬಾರದು. ಸರ್ಕಾರದ ಹಲವಾರು ಯೋಜನೆಗಳನ್ನು ಸದುಪಯೋಗ ಪಡಿಸಿಕೊಂಡು ಹೆಚ್ಚಿನ ವ್ಯಾಸಂಗ ಮಾಡಬೇಕು.

**ಬಸವರಾಜ ಎಸ್ ಬೊಮ್ಮಾಯಿ**
ಮುಖ್ಯಮಂತ್ರಿಗಳು



Download From : www.kpscvaani.com



ನೋಂದಣಿಯಾಗಬೇಕಿದೆ. ನಂತರ ಇ-ಅರ್ಜಿ ನಮೂನೆಯಲ್ಲಿ ಅಗತ್ಯ ಮಾಹಿತಿ ನಮೂದಿಸಬೇಕು. ವಿದ್ಯಾರ್ಥಿಯ ಭಾವಚಿತ್ರ, ಆಧಾರ್ ಸಂಖ್ಯೆ, ಐಎಫ್‌ಎಸ್‌ಸಿ ಕೋಡ್ ಸಹಿತ ಬ್ಯಾಂಕ್ ಮಾಹಿತಿ, ಶೈಕ್ಷಣಿಕ ಸಂಸ್ಥೆಯ ವಿವರ ಸೇರಿದಂತೆ ಅಗತ್ಯ ಮಾಹಿತಿಗಳನ್ನು ಭರ್ತಿ ಮಾಡಿದ ಬಳಿಕ ಅರ್ಜಿ ಸಲ್ಲಿಕೆ ಪ್ರಕ್ರಿಯೆ ಪೂರ್ಣಗೊಳ್ಳಲಿದೆ.

**ರೈತ ಮಕ್ಕಳ ಉನ್ನತ ಶಿಕ್ಷಣದ ಪ್ರಮಾಣ ಹೆಚ್ಚಿಸಲು ಮಹತ್ವದ ಹೆಜ್ಜೆ:**

ರೈತ ಮಕ್ಕಳ ಉನ್ನತ ವ್ಯಾಸಂಗಕ್ಕಾಗಿ ಶಿಷ್ಯವೇತನ ನೀಡುವ ಈ ಯೋಜನೆ ದೇಶದಲ್ಲೇ ಪ್ರಪ್ರಥಮ ಪ್ರಯತ್ನವಾಗಿದೆ. ಕೃಷಿ ಚಟುವಟಿಕೆಗಳಿಗೆ ಬೆಂಬಲ ನೀಡುವ ಹಲವು ರೀತಿಯ ಕಾರ್ಯಕ್ರಮಗಳನ್ನು ವಿವಿಧ ರಾಜ್ಯ ಸರ್ಕಾರಗಳು ರೂಪಿಸಿವೆ. ಆದರೆ ರೈತರ ಮಕ್ಕಳು ಶಿಕ್ಷಣದಲ್ಲಿ ಹಿಂದುಳಿಯಬಾರದು ಎಂಬ ಸದ್ದುದ್ದೇಶದಿಂದ ಜಾರಿಗೆ ತಂದಿರುವ ವಿದ್ಯಾನಿಧಿ ದೇಶದಲ್ಲೇ ಮಾದರಿಯಾಗಿದೆ.

ಇತ್ತೀಚಿನ ದಿನಗಳಲ್ಲಿ ನಗರ ಮತ್ತು ಗ್ರಾಮೀಣ ಪ್ರದೇಶಗಳೆರಡರಲ್ಲೂ ಶಿಕ್ಷಣ ಮತ್ತು ಆರೋಗ್ಯ ಪ್ರಮುಖ ವೆಚ್ಚದ ಬಾಬ್ತುಗಳಾಗಿವೆ. ಗ್ರಾಮೀಣ ಭಾಗದಲ್ಲಿ ಬಹಳಷ್ಟು ಮಕ್ಕಳು ಶಾಲಾ ಶುಲ್ಕ ಪಾವತಿಸಲಾಗದೆ ಶಿಕ್ಷಣವನ್ನೇ ಅರ್ಧಕ್ಕೆ ಮೊಟಕುಗೊಳಿಸಿದ ಉದಾಹರಣೆಗಳು ಸಾಕಷ್ಟಿವೆ. ಶಿಕ್ಷಣ ಇಲಾಖೆಯ ಅಂಕಿ ಸಂಖ್ಯೆಗಳ ಪ್ರಕಾರ ಪ್ರೌಢಶಿಕ್ಷಣ ಹಂತದಲ್ಲಿ ಶೇ.17ರಷ್ಟು ವಿದ್ಯಾರ್ಥಿಗಳು ಶಾಲೆಯಿಂದ ಹೊರಗುಳಿಯುತ್ತಿದ್ದಾರೆ. ಐದು ವರ್ಷದೊಳಗಿನ ಮಕ್ಕಳ ಒಟ್ಟು ಸಾಕ್ಷರತೆ ಶೇ.76ರಷ್ಟಿದ್ದರೆ, ನಗರ ಪ್ರದೇಶದ ಮಕ್ಕಳ ಸಾಕ್ಷರತೆ ಶೇ.86ರಷ್ಟು, ಗ್ರಾಮೀಣ ಭಾಗದಲ್ಲಿ ಶೇ.71ರಷ್ಟು ಮಕ್ಕಳು ಮಾತ್ರ ಪ್ರಾಥಮಿಕ ಶಿಕ್ಷಣ ಪೂರೈಸುತ್ತಿದ್ದಾರೆ. 15 ವರ್ಷ ಮೇಲ್ಪಟ್ಟವರಲ್ಲಿ ಗ್ರಾಮೀಣ ಭಾಗದ ಶೇ.64ರಷ್ಟು ಮಕ್ಕಳು ಮಾತ್ರ ಪಿಯುಸಿ ನಂತರದ ಶಿಕ್ಷಣಕ್ಕೆ ದಾಖಲಾಗುತ್ತಿದ್ದಾರೆ. ನಗರ ಪ್ರದೇಶದಲ್ಲಿ ಈ ಪ್ರಮಾಣ ಹೆಚ್ಚಿದ್ದು, ಶೇ.84ರಷ್ಟು ಮಕ್ಕಳು ಉನ್ನತ ಶಿಕ್ಷಣ ಪಡೆಯುತ್ತಿದ್ದಾರೆ.

ಕೊರೊನಾ ಮೊದಲಿನ ಐದಾರು ವರ್ಷಗಳ ಅಂಕಿ-ಸಂಖ್ಯೆಗಳ ಪ್ರಕಾರ ಒಂದರಿಂದ ನಾಲ್ಕನೆ ತರಗತಿಗೆ ಶೇ.99.2ರಷ್ಟು ಮಕ್ಕಳು ದಾಖಲಾದರೆ,

> **ಎಸ್‌ಎಸ್‌ಎಲ್‌ಸಿ ಪೂರ್ಣಗೊಳಿಸಿ, ಕರ್ನಾಟಕ ರಾಜ್ಯದ ಯಾವುದೇ ಭಾಗದಲ್ಲಿ ಅಧಿಕೃತವಾಗಿ ನೋಂದಣಿಯಾಗಿರುವ ಶಿಕ್ಷಣ ಸಂಸ್ಥೆಯಲ್ಲಿ ಪಿಯುಸಿ/ಪದವಿ/ಸ್ನಾತಕೋತ್ತರ ಕೋರ್ಸ್‌ಗಳಿಗೆ ಪ್ರವೇಶ ಪಡೆದಿರುವ ರೈತ ಮಕ್ಕಳು ಮುಖ್ಯಮಂತ್ರಿ ರೈತ ವಿದ್ಯಾ ನಿಧಿ ಯೋಜನೆಯಡಿ ಶಿಷ್ಯವೇತನ ಪಡೆಯಲು ಅರ್ಹರಾಗಿರುತ್ತಾರೆ. ಹೆಚ್ಚಿನ ಮಾಹಿತಿಯನ್ನು https://raitamitra.karnataka.gov.in ಮೂಲಕ ಪಡೆದುಕೊಳ್ಳಬಹುದು. ಆದರೆ ಅರ್ಜಿ ಸಲ್ಲಿಸಲು ರೈತರ ಮಕ್ಕಳು ಎಂಬುದನ್ನು ಖಾತ್ರಿ ಮಾಡಲು ಆರ್‌ಟಿಸಿ ಹೊಂದಿರುವುದು ಕಡ್ಡಾಯವಾಗಿರುತ್ತದೆ.**



Download From : www.kpscvaani.com

ಐದರಿಂದ ಎಂಟನೆ ತರಗತಿ ವೇಳೆಗೆ ಶೇ.92.8ರಷ್ಟು ಮಂದಿ ಮಾತ್ರ ಕಲಿಕೆಯಲ್ಲಿ ಉಳಿದುಕೊಳ್ಳುತ್ತಿದ್ದರು. ಎಂಟ ರಿಂದ ಎಸ್‌ಎಸ್‌ಎಲ್‌ಸಿವರೆಗೆ ಶೇ.83.9ರಷ್ಟು ಮಂದಿ ಮಾತ್ರ ಶಾಲೆಗೆ ಬಂದರೆ, ಎಸ್‌ಎಸ್‌ಎಲ್‌ಸಿಯಿಂದ ಪಿಯುಸಿವರೆಗೆ ಶೇ.56.8ರಷ್ಟು ವಿದ್ಯಾರ್ಥಿಗಳು ಉಳಿದುಕೊಳ್ಳುತ್ತಾರೆ. ಪಿಯುಸಿ ನಂತರದ ಉನ್ನತ ಶಿಕ್ಷಣಕ್ಕೆ ಶೇ.27.1ರಷ್ಟು ಮಾತ್ರ ದಾಖಲಾಗಿದ್ದಾರೆ. ಆರ್ಥಿಕ ಮುಗ್ಗಟ್ಟಿನಿಂದ ಗ್ರಾಮೀಣ ಭಾಗದಲ್ಲಿ ಅದರಲ್ಲೂ ಕೃಷಿಕರ ಮಕ್ಕಳು ಉನ್ನತ ಶಿಕ್ಷಣದಿಂದ ದೂರ ಸರಿಯುತ್ತಿದ್ದಾರೆ.

ಎಸ್‌ಎಸ್‌ಎಲ್‌ಸಿ ಬಳಿಕ ಮುಂದೆ ಓದಲಾಗದೆ ಸಣ್ಣ ಪುಟ್ಟ ಕೆಲಸ ಮಾಡಿಕೊಂಡೋ ಅಥವಾ ಕೂಲಿ ಕಾರ್ಮಿಕರಾಗಿಯೋ ಬದಲಾಗುತ್ತಿದ್ದಾರೆ. ಇದರಿಂದ ಅಪಾರವಾದ ಮಾನವ ಸಂಪತ್ತು ವೃದ್ಧಿಸುವ ಮೊದಲೇ ಕುಸಿಯುತ್ತಿದೆ. ಭಾರತದಂತಹ ಅಭಿವೃದ್ಧಿ ಶೀಲ ದೇಶದಲ್ಲಿ ಅಗತ್ಯವಾದ ಎಲ್ಲಾ ಸೌಲಭ್ಯಗಳಿದ್ದರೂ ವೈಯಕ್ತಿಕ ಆರ್ಥಿಕ ಮುಗ್ಗಟ್ಟಿನಿಂದ ಉನ್ನತ ಶಿಕ್ಷಣ ಪಡೆಯಲಾಗುತ್ತಿಲ್ಲ.

ಕೆಲವು ರಾಜ್ಯಗಳಲ್ಲಿ ನಕಾರಾತ್ಮಕ ಬೆಳವಣಿಗೆಗಳ ನಡುವೆ ಕರ್ನಾಟಕದಲ್ಲಿ ಆಶಾದಾಯಕ ಬೆಳವಣಿಗೆಗಳಾಗಿವೆ. ಕಳೆದ ಐದಾರು ವರ್ಷಗಳಿಂದ ಉನ್ನತ ಶಿಕ್ಷಣದಲ್ಲಿ ಮುಂಚೂಣಿಯಲ್ಲಿರುವ ದೇಶದ ಎಂಟು ರಾಜ್ಯಗಳಲ್ಲಿ ಕರ್ನಾಟಕ ಮೂರನೇ ಸ್ಥಾನವನ್ನು ಕಾಯ್ದುಕೊಂಡಿದೆ. ಅತಿ ಹೆಚ್ಚು ಶಿಕ್ಷಣ ಸಂಸ್ಥೆಗಳನ್ನು ಹೊಂದಿರುವ ಜಿಲ್ಲೆಗಳ ಪೈಕಿ ಬೆಂಗಳೂರು ಈಗಲೂ ನಂಬರ್ ಒನ್ ಆಗಿ ಉಳಿದಿದೆ. ಇಲ್ಲಿ 1009 ಶಿಕ್ಷಣ ಸಂಸ್ಥೆಗಳಿದ್ದರೆ, ಎರಡನೇ ಸ್ಥಾನದಲ್ಲಿರುವ ಜೈಪುರ 606 ಸಂಸ್ಥೆಗಳನ್ನು ಹೊಂದಿದೆ.

ರಾಜ್ಯ ಸರ್ಕಾರ ಪ್ರೌಢಶಿಕ್ಷಣದವರೆಗೂ ಪಠ್ಯಪುಸ್ತಕ, ಸಮವಸ್ತ್ರ, ಶೂ, ಬಿಸಿಯೂಟ ಸೇರಿದಂತೆ ಅನೇಕ ಸೌಲಭ್ಯಗಳನ್ನು ನೀಡುತ್ತಿದೆ. ಆರ್‌ಟಿಇ ಅಡಿ ಖಾಸಗಿ ಶಿಕ್ಷಣ ಸಂಸ್ಥೆಗಳಿಗೆ ಸರ್ಕಾರವೇ ಶುಲ್ಕ ಪಾವತಿಸಿ ಆರ್ಥಿಕವಾಗಿ ಹಿಂದುಳಿದ ಮಕ್ಕಳಿಗೆ ಉಚಿತ ಶಿಕ್ಷಣ ಕೊಡಿಸಲಾಗುತ್ತಿದೆ. ಪಿಯುಸಿ ನಂತರ ಲ್ಯಾಪ್‌ಟ್ಯಾಪ್, ಟ್ಯಾಬ್ ಸೇರಿದಂತೆ ವಿವಿಧ ಶೈಕ್ಷಣಿಕ ಸಲಕರಣೆಗಳನ್ನು ನೀಡುತ್ತಿದೆ. ಬಹುತೇಕ ಸರ್ಕಾರಿ ಕಾಲೇಜುಗಳ ತರಗತಿಗಳು ಸ್ಮಾರ್ಟ್ ಕ್ಲಾಸ್‌ಗಳಾಗಿ ಬದಲಾಗಿವೆ.

**ಕೃಷಿ ಚಟುವಟಿಕೆಗಳಿಗೆ ಬೆಂಬಲ ನೀಡುವ ಹಲವು ರೀತಿಯ ಕಾರ್ಯಕ್ರಮಗಳನ್ನು ವಿವಿಧ ರಾಜ್ಯ ಸರ್ಕಾರಗಳು ರೂಪಿಸಿವೆ. ಆದರೆ ರೈತರ ಮಕ್ಕಳು ಶಿಕ್ಷಣದಲ್ಲಿ ಹಿಂದುಳಿಯಬಾರದು ಎಂಬ ಸದುದ್ದೇಶದಿಂದ ರಾಜ್ಯ ಸರ್ಕಾರವು ಜಾರಿಗೆ ತಂದಿರುವ ಶಿಷ್ಯವೇತನ ನೀಡುವ ವಿದ್ಯಾನಿಧಿ ಯೋಜನೆಯು ದೇಶದಲ್ಲೇ ಪ್ರಪ್ರಥಮ ಪ್ರಯತ್ನವಾಗಿದೆ.**

ರಾಜ್ಯದಲ್ಲಿ ಶಿಕ್ಷಣ ಕಾಂತ್ರಿಯೇ ನಡೆಯುತ್ತಿದೆ. ಶಾಲೆಯಿಂದ ಹೊರಗುಳಿಯುವ ವಿದ್ಯಾರ್ಥಿಗಳ ಸಂಖ್ಯೆಯನ್ನು ಕಡಿಮೆ ಮಾಡಲಾಗಿದೆ. ಅಪೌಷ್ಠಿಕತೆ ನಿವಾರಣೆ ಯೋಜನೆ ಮೂಲಕ ಭವಿಷ್ಯದ ಪ್ರಜೆಗಳನ್ನು ಸದೃಢಗೊಳಿಸಲಾಗುತ್ತಿದೆ.

ಕೊರೊನಾ ಕಾಲದಲ್ಲಂತೂ ವ್ಯಾಪಾರ, ವಾಣಿಜ್ಯ ಚಟುವಟಿಕೆಗಳು ಕುಸಿದು ಹೋಗಿವೆ. ಕೃಷಿ ಸ್ಥಿರತೆಯನ್ನು ಕಾಯ್ದು ಕೊಂಡಿತ್ತಾದರೂ ಮಾರುಕಟ್ಟೆ ಸಿಗದೆ ರೈತರು ಸಾಕಷ್ಟು ನಷ್ಟ ಅನುಭವಿಸಿದರು. ಈ ಬಾರಿ ಶೈಕ್ಷಣಿಕ ವರ್ಷದಲ್ಲಿ ಮಕ್ಕಳ ಶಾಲಾ ಶುಲ್ಕ ಪಾವತಿಸಲಾಗದೆ ಶಾಲಾ–ಕಾಲೇಜು ಬಿಡಿಸುವ ಸಂದರ್ಭಗಳು ಬಹಳಷ್ಟಿದ್ದವು. ಸಂಕಷ್ಟ ಪರಿಸ್ಥಿತಿಯಲ್ಲಿದ್ದ ರೈತಾಪಿ ಕುಟುಂಬಕ್ಕೆ ವಿದ್ಯಾನಿಧಿ ವರದಾನವಾಗಿದೆ. ಕೃಷಿ ಲಾಭದಾಯಕವಾಗಿಲ್ಲ ಎಂದು ಬಹಳಷ್ಟು ಮಂದಿ ಬೇಸಾಯದಿಂದ ವಿಮುಖರಾಗುತ್ತಿದ್ದಾರೆ. ಹೇಗಾದರೂ ಮಾಡಿ ತಮ್ಮ ಮಕ್ಕಳನ್ನು ವಿದ್ಯಾವಂತರನ್ನಾಗಿ ಮಾಡಬೇಕು ಎಂಬ ಮಹದಾಸೆ ಹೊಂದಿದವರಿಗೆ ಕೊರೊನಾ ತಂದಿಟ್ಟ ಆರ್ಥಿಕ ಸಂಕಷ್ಟ ಭರಿಸಲಾರದಾಗಿತ್ತು.

ಬಿತ್ತನೆ ಕಾಲ ಮತ್ತು ಶೈಕ್ಷಣಿಕ ವರ್ಷದ ಆರಂಭ ಒಟ್ಟೊಟ್ಟಿಗೆ ಬರುವುದರಿಂದ ರೈತಾಪಿಗಳಿಗೆ ಧರ್ಮ ಸಂಕಟ ಎದುರಾಗುತಿತ್ತು. ಇತ್ತ ಬಿತ್ತನೆಗೆ ರಸಗೊಬ್ಬರ, ಬಿತ್ತನೆ ಬೀಜ ಖರೀದಿ ಮಾಡಿ ಬೇಸಾಯ ಮಾಡಿದರೆ, ಹಣ ಖಾಲಿ ಆಗಿ ಮಕ್ಕಳ ಶಾಲಾ ಶುಲ್ಕ ಕಟ್ಟಲಾಗದ ಪರಿಸ್ಥಿತಿ ಎದುರಾಗುತಿತ್ತು. ಮಕ್ಕಳ ಶಾಲಾ ಶುಲ್ಕ ಪಾವತಿಸಿದರೆ ಬಿತ್ತನೆಗೆ ಹಣ ಸಾಲದೆ ವರ್ಷದ ಬೆಳೆ ನಷ್ಟವಾಗುತಿತ್ತು. ಈ ಇಕ್ಕಟ್ಟಿನ ಪರಿಸ್ಥಿತಿಯಲ್ಲಿ ರೈತರು ಸಾಲ ಮಾಡಿ, ಬಡ್ಡಿಗೆ ಬಡ್ಡಿಕಟ್ಟಿ ಅದರ ಸುಳಿಯಿಂದ ಹೊರ ಬರಲಾಗದೆ ದುಡುಕಿನ ನಿರ್ಧಾರ ಮಾಡುವಂತಾಗುತಿತ್ತು. ಈಗ ವಿದ್ಯಾನಿಧಿ ಕಡಿಮೆ ಆದಾಯ ಇರುವ ಕುಟುಂಬಗಳಿಗೆ ಆಸರೆಯಾಗಲಿದೆ. ಈ ವರ್ಷದ ಶೈಕ್ಷಣಿಕ ಮಧ್ಯಭಾಗದಲ್ಲಿ ಯೋಜನೆ ಜಾರಿಯಾಗಿದ್ದರೂ, ಹಿಂಗಾರು ಹಂಗಾಮಿನಲ್ಲಿ ರೈತರ ಪಾಲಿಗೆ ಇದು ಸಂಕಷ್ಟಹರವಾಗಿದೆ.

ರೈತರ ಆರ್ಥಿಕ ಚೇತರಿಕೆಗೆ ಕೇಂದ್ರ ಮತ್ತು ರಾಜ್ಯಗಳು ಹಲವಾರು ಯೋಜನೆಗಳನ್ನು ರೂಪಿಸಿವೆ. ಪ್ರಧಾನ ಮಂತ್ರಿ ಕಿಸಾನ್ ಸನ್ಮಾನ್ ನಿಧಿ ಯೋಜನೆ ದೇಶಾದ್ಯಂತ ರೈತರಿಗೆ ವಾರ್ಷಿಕ ಆರು ಸಾವಿರ ರೂಪಾಯಿ ಆದಾಯ ತಂದು ಕೊಡುತ್ತಿದೆ. ರಾಜ್ಯ ಸರ್ಕಾರ ಅದರ ಜೊತೆಗೆ ನಾಲ್ಕು ಸಾವಿರ ರೂಪಾಯಿಗಳನ್ನು ಪಾವತಿಸುತ್ತಿದೆ. ಕೃಷಿ ಸನ್ಮಾನ್ ಯೋಜನೆಯಡಿ ಪ್ರತಿ ರೈತ ಕುಟುಂಬ ವರ್ಷಕ್ಕೆ 10 ಸಾವಿರ ರೂಪಾಯಿ ಅನುದಾನ ಪಡೆದುಕೊಳ್ಳುತ್ತಿದೆ. ಕಳೆದ ಆಗಸ್ಟ್ 9ರಂದು ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ದೇಶಾದ್ಯಂತ 9.75 ಕೋಟಿ ರೈತರಿಗೆ ಈ ಯೋಜನೆಯಡಿ 19,500 ಕೋಟಿ ರೂಪಾಯಿಗಳನ್ನು ನೇರ ನಗದು ವರ್ಗಾವಣೆ ಮೂಲಕ ಪಾವತಿಸಿದ್ದಾರೆ. ಅದರಲ್ಲಿ ಕರ್ನಾಟಕದ 51.19 ಲಕ್ಷ ರೈತರಿಗೆ 1023 ಕೋಟಿ ರೂಪಾಯಿ ಸಂದಾಯವಾಗಿದೆ. ಪ್ರಧಾನಮಂತ್ರಿ ಫಸಲ್ ಭೀಮಾ ಯೋಜನೆ ಸೇರಿದಂತೆ ಹಲವಾರು ಯೋಜನೆಗಳು ರೈತರ ಜೀವನ ಮಟ್ಟವನ್ನು ಸುಧಾರಿಸಲು ಪ್ರಯತ್ನಿಸುತ್ತಿವೆ.

ಈಗ ರಾಜ್ಯ ಸರ್ಕಾರದ ವಿದ್ಯಾನಿಧಿ ಜಾರಿಯಾಗಿರುವುದರಿಂದ ಪ್ರತಿ ರೈತರ ಕುಟುಂಬಕ್ಕೆ ವಾರ್ಷಿಕವಾಗಿ ನೇರ ನಗದು ರೂಪದಲ್ಲಿ ಕನಿಷ್ಠ 12500 ರಿಂದ 21000 ರೂಪಾಯಿಗಳು ಸಂದಾಯವಾಗಲಿದೆ. ಉಳಿದಂತೆ ಹಲವು ರಿಯಾಯಿತಿಗಳು, ಸಬ್ಸಿಡಿಗಳು, ಉತ್ತೇಜನ ಯೋಜನೆಗಳು, ಮಾರುಕಟ್ಟೆ ಬೆಂಬಲ, ಕನಿಷ್ಠ ಬೆಂಬಲ ಬೆಲೆ ಹೀಗೆ ನಾನಾ ರೀತಿಯಲ್ಲಿ ರೈತರ ಜೀವನ ಮಟ್ಟ ಹಂತ ಹಂತವಾಗಿ ಸುಧಾರಣೆಯಾಗುತ್ತಿದೆ.

ಅದೇ ರೀತಿಯಲ್ಲಿ ಇನ್ನು ಮುಂದೆ ಗ್ರಾಮೀಣ ಭಾಗದ ವಿದ್ಯಾರ್ಥಿಗಳು ಉನ್ನತ ಶಿಕ್ಷಣದಿಂದ ವಿಮುಖರಾಗುವುದನ್ನು ಮುಖ್ಯಮಂತ್ರಿ ರೈತ ವಿದ್ಯಾನಿಧಿ ಯೋಜನೆಯು ತಡೆಗಟ್ಟಲಿದೆ. ■



Download From : www.kpscvaani.com



# ರಾಷ್ಟ್ರೀಯ ಶಿಕ್ಷಣ ನೀತಿಯಿಂದ ಶಿಕ್ಷಣ ಕ್ಷೇತ್ರದಲ್ಲಿ ಹೊಸ ಮನ್ವಂತರ

**ಕರ್ನಾಟಕದ ಶಿಕ್ಷಣ ಕ್ಷೇತ್ರದಲ್ಲಿ ಹೊಸ ಮನ್ವಂತರ ಆರಂಭವಾಗಿದ್ದು, ದೇಶದಲ್ಲೇ ಮೊದಲಿಗೆ ಕರ್ನಾಟಕ ರಾಜ್ಯದಲ್ಲಿ ರಾಷ್ಟ್ರೀಯ ಶಿಕ್ಷಣ ನೀತಿ-2020 ಅನ್ನು ಅನುಷ್ಠಾನಗೊಳಿಸಿ ಕ್ರಮವಹಿಸಲಾಗುತ್ತಿರುವುದರಿಂದ ಶಿಕ್ಷಣ ಕ್ಷೇತ್ರದಲ್ಲಿ ಇಡೀ ದೇಶವೇ ನವ ದಿಕ್ಕಿನತ್ತ ಚಲಿಸುವ ಭರವಸೆ ಮೂಡಿದೆ.**

ಎನ್.ನಾಗರತ್ನಮ್ಮ

ಪ್ರತಿ ವಿದ್ಯಾರ್ಥಿಯು ತನ್ನ ಭವಿಷ್ಯವನ್ನು ರೂಪಿಸಿಕೊಳ್ಳಲು ತನ್ನ ಬದುಕನ್ನು ಕಟ್ಟಿಕೊಳ್ಳಲು, ತನಗಿಷ್ಟವಾದ, ತನಗೆ ಸೂಕ್ತವಾದ ಮತ್ತು ಆಸಕ್ತಿಯಿರುವ ವಿಷಯಗಳನ್ನೇ ಆಯ್ಕೆ ಮಾಡಿಕೊಂಡು ವ್ಯಾಸಂಗ ಮಾಡುವ ಸ್ವಾತಂತ್ರ್ಯವನ್ನು ರಾಷ್ಟ್ರೀಯ ಶಿಕ್ಷಣ ನೀತಿ–2020 ಒದಗಿಸಿಕೊಟ್ಟಿದೆ.

ವಿದ್ಯಾರ್ಥಿಗಳಿಗೆ ಉದ್ಯಮಗಳು ಬಯಸುವ, ಉದ್ಯಮಗಳಿಗೆ ಬೇಕಾದ ಪಠ್ಯಕ್ರಮ, ಪ್ರತಿ ವಿಷಯವನ್ನು ಮನಮುಟ್ಟುವ ರೀತಿಯಲ್ಲಿ ಕಲಿಸುವ ಬೋಧನಾಕ್ರಮ, ಕಲಿಕೆಯ ನಿಜ ಮೌಲ್ಯಮಾಪನ, ಇವುಗಳ ಮೂಲಕ ಉತ್ತಮ ಕೆಲಸ ಸಿಗುವಂತಹ ನೈಪುಣ್ಯತೆ, ಸ್ವಂತ ಉದ್ಯೋಗ ಪ್ರಾರಂಭಿಸುವ ಸಾಮರ್ಥ್ಯ ನೀಡುವುದು ಇದರ ಉದ್ದೇಶ.



Download From : www.kpscvaani.com



## ಮುಕ್ತವಾಗಿ ಚರ್ಚಿಸಲು ಸರ್ಕಾರ ಸಿದ್ಧವಿದೆ

ನೂತನ ರಾಷ್ಟ್ರೀಯ ಶಿಕ್ಷಣ ನೀತಿಯ ಬಗ್ಗೆ ಮುಕ್ತವಾಗಿ ಚರ್ಚಿಸಲು ಸರ್ಕಾರ ಸಿದ್ಧವಿದ್ದು, ಯಾರೂ ಆತಂಕಕ್ಕೆ ಒಳಗಾಗಬೇಕಾಗಿಲ್ಲ. ಇಂದಿನ ಕಾಲಕ್ಕೆ ತಕ್ಕ ಹಾಗೆ ಪ್ರಸ್ತುತವಾಗುವಂತೆ, ಯುವಕರಿಗೆ ಉತ್ತಮ ಭವಿಷ್ಯ ನೀಡುವಂತೆ ನೂತನ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಜಾರಿಗೆ ತರುವ ಸದುದ್ದೇಶವಿದೆ. ಶಿಕ್ಷಣ ಕ್ಷೇತ್ರದಲ್ಲಿ ಕ್ರಾಂತಿಕಾರಿ ಬದಲಾವಣೆ ತರಲಾಗುವುದು, ಮತ್ತು ಪ್ರೌಢಶಿಕ್ಷಣದ ಬಗ್ಗೆ ಸಮಿತಿ ರಚಿಸಿ ಅನುಷ್ಠಾನದ ಬಗ್ಗೆ ತೀರ್ಮಾನಿಸಲಾಗುವುದು. ಹಾಗಾಗಿ ಯಾರು ಕೂಡ ಆತಂಕ ಪಡುವ ಅಗತ್ಯ ಇಲ್ಲ.

ದೇಶದಲ್ಲಿಯೇ ಮೊದಲು ನೂತನ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಜಾರಿ ಮಾಡುತ್ತಿರುವುದು ನಮ್ಮ ರಾಜ್ಯವಾದ್ದರಿಂದ ಅನುಷ್ಠಾನಕ್ಕೆ ಕ್ರಮವಹಿಸಲಾಗುತ್ತಿದೆ. ಈ ಕುರಿತು ಯಾವುದೇ ಅನುಮಾನ, ಅಭಿಪ್ರಾಯಗಳಿದ್ದರೆ ಸರ್ಕಾರದೊಂದಿಗೆ ಮುಕ್ತವಾಗಿ ಚರ್ಚಿಸಬೇಕು. ಆಗಲೇ ರಾಜ್ಯದಲ್ಲಿ ಯಶಸ್ವಿಯಾಗಿ ನೂತನ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಜಾರಿಗೊಳಿಸಲು ಸಾಧ್ಯವಾಗಲಿದೆ.

**–ಬಸವರಾಜ ಎಸ್ ಬೊಮ್ಮಾಯಿ,**
ಮುಖ್ಯಮಂತ್ರಿಗಳು

ಯಾವುದೇ ವಿದ್ಯಾರ್ಥಿಯು ಉನ್ನತ ಶಿಕ್ಷಣದ ಯಾವುದೇ ಹಂತದಲ್ಲಿ ಕಾರಣಾಂತರಗಳಿಂದ ಕಲಿಕೆಯನ್ನು ಅರ್ಧಕ್ಕೆ ನಿಲ್ಲಿಸಿದಲ್ಲಿ, ನಂತರ ಅದೇ ಹಂತದಿಂದ ಕಲಿಕೆಯನ್ನು ಮುಂದುವರೆಸುವ ಅವಕಾಶವನ್ನು ಈ ನೀತಿಯಡಿ ನೀಡಲಾಗಿದೆ.

ಪ್ರತಿ ವಿದ್ಯಾರ್ಥಿಗಳಿಗೆ ಉನ್ನತ ಶಿಕ್ಷಣದಲ್ಲಿನ ವಿಷಯಗಳ ಜೊತೆಗೆ ಜ್ಞಾನ, ಕೌಶಲ್ಯ ಮತ್ತು ಮೌಲ್ಯಗಳನ್ನು ನೀಡುವ ಮತ್ತು ಪರಿಪೂರ್ಣ ವ್ಯಕ್ತಿತ್ವವನ್ನು ರೂಪಿಸುವ ಜೀವನ ಶಿಕ್ಷಣವನ್ನು ನೀಡುವುದು ರಾಷ್ಟ್ರೀಯ ಶಿಕ್ಷಣ ನೀತಿ–2020ರ ಪ್ರಮುಖ ಉದ್ದೇಶವಾಗಿದೆ.

ಹೊಸ ಶಿಕ್ಷಣ ನೀತಿಯಡಿ ಉನ್ನತ ಶಿಕ್ಷಣವನ್ನು ಜಾಗತೀಕರಣಗೊಳಿಸುವ ನಿಟ್ಟಿನಲ್ಲಿ ಅಮೆರಿಕದ ಪೆನ್ಸಿಲ್ವೇನಿಯಾದ ಮಾಂಟಿಗೋಮೆರಿಕ ಕಮ್ಯುನಿಟಿ ಕಾಲೇಜಿನ ಜೊತೆ ಕಾಲೇಜು ಶಿಕ್ಷಣ ಇಲಾಖೆ ಒಪ್ಪಂದ ಮಾಡಿಕೊಂಡು ಜಾಗತಿಕ ಮಟ್ಟದ ಉನ್ನತ ಶಿಕ್ಷಣಕ್ಕೆ ಅವಕಾಶ ಕಲ್ಪಿಸಿದೆ.

ಯುಯುಸಿಎಂಎಸ್ ನೂತನ ರಾಷ್ಟ್ರೀಯ ಶಿಕ್ಷಣ ನೀತಿ ಅನುಷ್ಠಾನಕ್ಕೆ ನೆರವು ನೀಡುವ ವೇದಿಕೆ. ಡಿಜಿಟಲ್ ಕಲಿಕೆ–ಕರ್ನಾಟಕ ಕಲಿಕಾ ನಿರ್ವಹಣಾ ವ್ಯವಸ್ಥೆ ಮೂಲಕ (ಎಲ್ಎಂಎಸ್) ಸ್ಮಾರ್ಟ್ ತರಗತಿಗಳು, ವಿದ್ಯಾರ್ಥಿಗಳಿಗೆ ಟ್ಯಾಬ್ಲೆಟ್ ಪಿಸಿಗಳ ಅನುಕೂಲ ದೊರಕಲಿದೆ.

ರಾಷ್ಟ್ರೀಯ ಶಿಕ್ಷಣ ನೀತಿಯ ಕರಡುನ್ನು 2019 ರಲ್ಲಿ ಸಿದ್ಧಪಡಿಸಲಾಯಿತು. ನಂತರ ಮಾರ್ಚ್ 2020ರಲ್ಲಿ ಕರ್ನಾಟಕ ರಾಜ್ಯದಲ್ಲಿ ನೂತನ ರಾಷ್ಟ್ರೀಯ ಶಿಕ್ಷಣ ನೀತಿ ಅನುಷ್ಠಾನ ಕಾರ್ಯಪಡೆಯನ್ನು ರಚನೆ ಮಾಡಲಾಯಿತು. ಜುಲೈ 2020ಕ್ಕೆ ಕೇಂದ್ರ ಸಚಿವ ಸಂಪುಟ ಅನುಮೋದನೆ ನೀಡಿದ ಹಿನ್ನೆಲೆಯಲ್ಲಿ ಡಿಸೆಂಬರ್ 2020ರಲ್ಲಿ ಅನುಷ್ಠಾನ ಕಾರ್ಯಪಡೆ ವರದಿ ಸಿದ್ಧವಾಗಿ, ಆಗಸ್ಟ್ 23, 2021 ಕ್ಕೆ ರಾಷ್ಟ್ರೀಯ ಶಿಕ್ಷಣ ನೀತಿಗೆ ಚಾಲನೆ ದೊರಕಿತು.

ಆಗಸ್ಟ್ 23 ರಂದು ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ಹಮ್ಮಿಕೊಂಡಿದ್ದ ರಾಷ್ಟ್ರೀಯ ಶಿಕ್ಷಣ ನೀತಿ ಅನುಷ್ಠಾನ





Download From : www.kpscvaani.com




ಕಾರ್ಯಕ್ರಮಕ್ಕೆ ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಅವರು ನವದೆಹಲಿಯಿಂದ ವರ್ಚುಯಲ್ ವೇದಿಕೆ ಮೂಲಕ ರಾಷ್ಟ್ರೀಯ ಶಿಕ್ಷಣ ನೀತಿ–2020 ಜಾರಿಗೆ ಹಸಿರು ನಿಶಾನೆ ತೋರಿದರು.

ಪ್ರಧಾನಮಂತ್ರಿ ನರೇಂದ್ರ ಮೋದಿಯವರ ದೂರದೃಷ್ಟಿ ಫಲವಾಗಿ ಹೊಸ ಶಿಕ್ಷಣ ನೀತಿಯನ್ನು 34 ವರ್ಷಗಳ ನಂತರ ಜಾರಿಗೊಳಿಸಿದ್ದು, ಶಿಕ್ಷಣ ವ್ಯವಸ್ಥೆಯಲ್ಲಿ ಅಮೂಲಾಗ್ರ ಬದಲಾವಣೆಯಾಗುವ ಜೊತೆಗೆ, ವಿದ್ಯಾರ್ಥಿಗಳ ಜ್ಞಾನ, ಸೃಜನ ಶೀಲತೆ, ಅಭಿವ್ಯಕ್ತಿಗೆ ಕಾರಣವಾಗುವ ಶಿಕ್ಷಣ ನೀತಿಯಾಗಿದ್ದು, ಇದನ್ನು ಯಶಸ್ವಿಯಾಗಿ ಜಾರಿ ಮಾಡಲು ರಾಜ್ಯ ಸರ್ಕಾರ ಮುಂದಾಗಿದೆ.

ಇಸ್ರೋ ಸಂಸ್ಥೆಯ ಅಧ್ಯಕ್ಷ ಡಾ. ಕಸ್ತೂರಿ ರಂಗನ್ ಅಧ್ಯಕ್ಷತೆಯಲ್ಲಿ ವಿಶ್ವವಿದ್ಯಾನಿಲಯದ ಕುಲಪತಿಗಳು, ಶಿಕ್ಷಣ ತಜ್ಞರು ಮತ್ತು ಅಧ್ಯಾಪಕರನ್ನೊಳಗೊಂಡ ಸದಸ್ಯರುಗಳೊಂದಿಗೆ ರಚಿಸಿದ್ದ ಸಮಿತಿಯು ಸುದೀರ್ಘ ಸಮಾಲೋಚನೆ ನಡೆಸಿ ವರದಿ ನೀಡಿದ್ದು, ಅದರ ಆಧಾರದ ಮೇಲೆ ಹೊಸ ಶಿಕ್ಷಣ ನೀತಿಯನ್ನು ರಚಿಸಲಾಗಿದೆ. ಗುಣಮಟ್ಟದ ಶಿಕ್ಷಣ ನೀಡಲು ಅಡ್ಡಿಯಾಗುತ್ತಿರುವ ಲೋಪದೋಷಗಳಿಗೂ ರಾಷ್ಟ್ರೀಯ ಶಿಕ್ಷಣ ನೀತಿಯಿಂದ ಪರಿಹಾರ ಕಂಡುಕೊಳ್ಳಬಹುದು.

ಸಮಾಜದಲ್ಲಿ ಪ್ರತಿಯೊಬ್ಬ ನಾಗರಿಕರಿಗೂ ತಮ್ಮ ಭವಿಷ್ಯವನ್ನು ರೂಪಿಸಿಕೊಳ್ಳಲು ಹಾಗೂ ದೇಶದ ಅಭಿವೃದ್ಧಿಗೆ ಗುಣಮಟ್ಟದ ಶಿಕ್ಷಣದ ಅಗತ್ಯವಿದ್ದು, ಇದರಲ್ಲಿ ಸಾಕಷ್ಟು ಬದಲಾವಣೆಯನ್ನು ತರಬೇಕು ಎನ್ನುವ ಉದ್ದೇಶದಿಂದ ಹಾಗೂ ಸಾಮಾಜಿಕವಾಗಿ, ಆರ್ಥಿಕವಾಗಿ ಸಮಾಜವನ್ನು ಸದೃಢವನ್ನಾಗಿಸಲು ಶಿಕ್ಷಣ ಮತ್ತು ಕೌಶಲ್ಯತೆಯಿಂದ ಮಾತ್ರ ಸಾಧ್ಯ. ಇದಕ್ಕೆ ಎಷ್ಟು ಆದ್ಯತೆ ನೀಡಿದರೂ ಸಾಕಾಗುವುದಿಲ್ಲ. ವಿಶ್ವಮಟ್ಟದಲ್ಲಿ ಸ್ಥಾನ ಪಡೆಯಲು ಹಾಗೂ ಆರ್ಥಿಕವಾಗಿ ಶಕ್ತಿ ಪಡೆಯಲು ಉನ್ನತ ಶಿಕ್ಷಣಕ್ಕೆ ಹೆಚ್ಚಿನ ಮಹತ್ವ ನೀಡುವ ಉದ್ದೇಶದಿಂದ ಕೋವಿಡ್–19ರ ಸಾಂಕ್ರಾಮಿಕರೋಗದಿಂದ ನಲುಗಿ, ಆರ್ಥಿಕ ಸಂಕಷ್ಟ ಎದುರಿಸುತ್ತಿರುವ ಸಂದರ್ಭದಲ್ಲಿಯು ಶಿಕ್ಷಣಕ್ಕೆ ಒತ್ತು ನೀಡಿ ಸರ್ಕಾರವು ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಜಾರಿಗೊಳಿಸಿದೆ. ಮುಂದೆಯೂ ಶಿಕ್ಷಣಕ್ಕೆ ಅಗತ್ಯವಿರುವ ಅನುದಾನವನ್ನು ಬಿಡುಗಡೆ ಮಾಡಲು ನಮ್ಮ ರಾಜ್ಯ ಸರ್ಕಾರವು ಮುಂದಾಗಿದೆ.

ರಾಷ್ಟ್ರೀಯ ಶಿಕ್ಷಣ ನೀತಿ ಜಾರಿಯಿಂದ ಯಾವುದೇ ಗೊಂದಲ, ಸಮಸ್ಯೆಯಾಗಬಾರದು ಎನ್ನುವ ಕಾರಣಕ್ಕೆ ಸರ್ಕಾರವು ಸಹಾಯವಾಣಿ (080–24486666) ಯನ್ನು ಆರಂಭಿಸಿದೆ. ಈ ಸಹಾಯವಾಣಿಯನ್ನು ಸಂಪರ್ಕಿಸಿ ನಾಗರಿಕರು ತಮ್ಮ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಬಹುದು. ■

### ಸಮರ್ಪಕ ಅನುಷ್ಠಾನಕ್ಕಾಗಿ ಐದು ಯೋಜನೆಗಳು

ಕರ್ನಾಟಕ ಸಂಶೋಧನೆ ಮತ್ತು ಅಭಿವೃದ್ಧಿ ನೀತಿ, ಹೊಸ ಡಿಜಿಟಲೀಕರಣ ನೀತಿ, ಕಲಬುರುಗಿಯಲ್ಲಿ ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಪರಿಷತ್ ಸ್ಥಾಪನೆ, 8ನೇ ತರಗತಿಯಿಂದ ವಿದ್ಯಾರ್ಥಿಗಳಿಗೆ ಕಡ್ಡಾಯ ವೃತ್ತಿ ಬುನಾದಿ ತರಬೇತಿ, 2021–22ನೇ ಸಾಲಿಗೆ ಪದವಿ ಸೇರುವ ವಿದ್ಯಾರ್ಥಿಗಳಿಗೆ ಐ–ಪ್ಯಾಡ್ ವಿತರಣೆ, ಇವು ರಾಜ್ಯದಲ್ಲಿ ಹೊಸ ಶಿಕ್ಷಣ ನೀತಿಯನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸಲು ಮುಖ್ಯಮಂತ್ರಿ ಬಸವರಾಜ ಎಸ್. ಬೊಮ್ಮಾಯಿ ಅವರು ಪ್ರಕಟಿಸಿರುವ ಐದು ಯೋಜನೆಗಳು.



Download From : www.kpscvaani.com




# ಬಾಪೂಜಿ ಜೀವನ ಗಾಥೆ ಸಾರುವ ಗಾಂಧಿ ಭವನ

**ಗಾಂಧಿ ಹುಟ್ಟಿದ ನಾಡಿನವರಾದ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರಿಂದ ಬಾಪೂಜಿ ಜೀವನಗಾಥೆ ಸಾರುವ ದಾವಣಗೆರೆ ಜಿಲ್ಲೆಯ ಗಾಂಧಿ ಭವನ ಉದ್ಘಾಟನೆಗೊಂಡು ಸಾರ್ವಜನಿಕ ಕಾರ್ಯಕ್ರಮಗಳನ್ನು ನಡೆಸಲು ಸಿದ್ಧವಾಗಿದೆ.**

ತುಕಾರಾಂರಾವ್ ಬಿ.ವಿ.

ದಾವಣಗೆರೆಗೂ ಮಹಾತ್ಮ ಗಾಂಧೀಜಿಗೂ ವಿಶೇಷ ನಂಟು. ಸ್ವಾತಂತ್ರ್ಯಕ್ಕಾಗಿ ನಡೆಯುತ್ತಿದ್ದ ಹೋರಾಟ ಉತ್ತುಂಗ ಸ್ಥಿತಿಯಲ್ಲಿದ್ದ ಕಾಲವದು. 1934ರ ಮಾರ್ಚ್ 02 ರಂದು ದಾವಣಗೆರೆಗೆ ಬಂದ ಮಹಾತ್ಮ ಗಾಂಧಿಯವರು, ಇಲ್ಲಿನ ಸ್ವಾತಂತ್ರ್ಯ ಹೋರಾಟಗಾರರಲ್ಲಿ ಸ್ಫೂರ್ತಿ ತುಂಬಿ, ಹುರಿದುಂಬಿಸಿದ್ದರು. ಅಲ್ಲದೆ ಅಸ್ಪೃಷ್ಯತೆ ನಿವಾರಣೆ ಶಿಕ್ಷಣದಿಂದ ಮಾತ್ರ ಸಾಧ್ಯ ಎನ್ನುವುದನ್ನು ಇಲ್ಲಿನ ಜನರಲ್ಲಿ ಮನದಟ್ಟು ಮಾಡಿಕೊಟ್ಟಿದ್ದರು. ಗಾಂಧೀಜಿಯವರ ಜೀವನಾದರ್ಶಗಳು, ಮಾನವೀಯ ಮೌಲ್ಯಗಳನ್ನು ನಿರಂತರವಾಗಿ ಇಂದಿನ ಯುವ ಪೀಳಿಗೆಗೆ ಪರಿಚಯಿಸುವುದು ಅಗತ್ಯವಾಗಿದೆ.

ಈ ನಿಟ್ಟಿನಲ್ಲಿ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ವತಿಯಿಂದ ದಾವಣಗೆರೆ ನಗರದ ಶ್ರೀರಾಮನಗರ ಬಳಿ 03 ಕೋಟಿ ರೂ. ವೆಚ್ಚದಲ್ಲಿ ನಗರದ ಎಸ್.ಎಸ್. ಆಸ್ಪತ್ರೆಯ ಬಳಿ ಇರುವ ಆವರಗೆರೆ ಗ್ರಾಮದ ಸರ್ವೆ ನಂಬರ್ 213ರಲ್ಲಿ (ರಾಮನಗರ) 01 ಎಕರೆ ವಿಸ್ತೀರ್ಣದಲ್ಲಿ ನೂತನ ವಿನ್ಯಾಸದೊಂದಿಗೆ ನಿರ್ಮಾಣವಾಗಿರುವ ಭವ್ಯ ಹಾಗೂ ಆಕರ್ಷಕ ಗಾಂಧಿ ಭವನ 2021 ರ ಸೆಪ್ಟೆಂಬರ್ 02 ರಂದು ಉದ್ಘಾಟನೆಗೊಂಡಿದೆ. ಭವನವು ಹಲವು ಸುಂದರ ಕಲಾಕೃತಿಗಳೊಂದಿಗೆ



Download From : www.kpscvaani.com




**ಅಮೃತ ಯೋಜನೆಗಳನ್ನು ಕಾಲಮಿತಿಯಲ್ಲಿ ಕೈಗೆತ್ತಿಕೊಂಡು ಪೂರ್ಣಗೊಳಿಸುವ ಬಗ್ಗೆಯೂ ಸರ್ಕಾರ ತೀರ್ಮಾನ ಮಾಡಿದೆ. ಸ್ವಾತಂತ್ರ್ಯೋತ್ಸವದ ಅಮೃತ ಮಹೋತ್ಸವವನ್ನು ಎರಡು ವರ್ಷಗಳ ಕಾಲ ಆಚರಿಸುವ ನಿರ್ಧಾರವನ್ನು ಪ್ರಕಟಿಸಿದ ಬೊಮ್ಮಾಯಿ ಅವರು, ಆ ಹೊತ್ತಿಗೆ ರಾಜ್ಯದ ಸಮಗ್ರ ಅಭಿವೃದ್ಧಿಯನ್ನು ಸಾಕಾರಗೊಳಿಸುವುದು ಅವರ ಸಂಕಲ್ಪವಾಗಿದೆ.**

**ಗಾಂಧಿ ಭವನವನ್ನು ಗಾಂಧಿ ಜಯಂತಿ ಮತ್ತು ಗಾಂಧಿ ಪುಣ್ಯಸ್ಮರಣೆಗೆ ಮಾತ್ರ ಸೀಮಿತವಾಗಿಸದೆ, ವರ್ಷವಿಡಿ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಇಂದಿನ ಯುವಪೀಳಿಗೆಗೆ ಗಾಂಧೀಜಿಯವರ ಜೀವನಾದರ್ಶಗಳನ್ನು, ವಿಚಾರಧಾರೆಗಳನ್ನು ತಿಳಿಸುವ ನಿಟ್ಟಿನಲ್ಲಿ ಸೂಕ್ತ ವೇದಿಕೆ ಕಲ್ಪಿಸಲು ಉದ್ದೇಶಿಸಲಾಗಿದೆ. ಗಾಂಧೀಜಿಯವರಿಗೆ ಸಂಬಂಧಿಸಿದಂತೆ ಹಲವಾರು ಪುಸ್ತಕಗಳನ್ನು ಸಂಗ್ರಹಿಸಿಡಲು ಯೋಜಿಸಲಾಗಿದೆ.**

ಆಕರ್ಷಿಸುತ್ತಿದೆ. ನಿರ್ಮಿತಿ ಕೇಂದ್ರ ಗಾಂಧಿ ಭವನವನ್ನು ನಿಗದಿತ ಕಾಲಮಿತಿಯಲ್ಲಿ ಉತ್ತಮವಾಗಿ ನಿರ್ಮಿಸಿಕೊಟ್ಟಿದೆ.

ಗಾಂಧೀಜಿಯವರು ಹುಟ್ಟಿದ ನಾಡು ಅಂದರೆ, ಗುಜರಾತ್ ರಾಜ್ಯದವರೇ ಆಗಿರುವ ಭಾರತ ಸರ್ಕಾರದ ಕೇಂದ್ರ ಗೃಹ ಖಾತೆ ಹಾಗೂ ಸಹಕಾರ ಮಂತ್ರಿಗಳಾದ ಅಮಿತ್ ಶಾ ಅವರು ದಾವಣಗೆರೆಯ ನೂತನ ಗಾಂಧಿ ಭವನದ ಉದ್ಘಾಟನೆ ನೆರವೇರಿಸಿದ್ದು ವಿಶೇಷ. ಉದ್ಘಾಟನಾ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಮುಖ್ಯಮಂತ್ರಿ ಬಸವರಾಜ ಎಸ್. ಬೊಮ್ಮಾಯಿ ಅವರು, 'ಸರ್ ಆಪ್ ಗಾಂಧೀಜಿ ಕೆ ಭೂಮಿ ಸೆ ಆಯೇ ಹೈ, ಆಪ್ ಕೆ ಹಾತ್ ಸೇ ಹಿ ಗಾಂಧಿ ಭವನ್ ಉದ್ಘಾಟನ್ ಹೋ ರಹಾ ಹೈ. ಯೆ ಯೋಗಾಯೋಗ್ ಹೈ, ಹಮ್ ಖುಷ್ ನಸೀಬ್ ಹೈ' ಎಂಬುದಾಗಿ ಬಣ್ಣಿಸಿದರು. ನಗರಾಭಿವೃದ್ಧಿ ಹಾಗೂ ದಾವಣಗೆರೆ ಜಿಲ್ಲಾ ಉಸ್ತುವಾರಿ ಸಚಿವರಾದ ಭೈರತಿ ಬಸವರಾಜ್, ಗೃಹ ಸಚಿವ ಅರಗ ಜ್ಞಾನೇಂದ್ರ, ಕೃಷಿ ಸಚಿವ ಬಿ.ಸಿ.ಪಾಟೀಲ್, ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವ ಮುರುಗೇಶ್ ನಿರಾಣಿ, ಪ್ರವಾಸೋದ್ಯಮ ಸಚಿವ ಆನಂದ್‌ಸಿಂಗ್, ಸಂಸದ ಡಾ.ಜಿ.ಎಂ. ಸಿದ್ದೇಶ್ವರ ಸೇರಿದಂತೆ ಹಲವು ಶಾಸಕರುಗಳು ಹಾಗೂ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಆಯುಕ್ತರಾದ ಡಾ. ಪಿ.ಎಸ್. ಹರ್ಷ ಅವರು ಗಾಂಧಿ ಭವನ ಉದ್ಘಾಟನಾ ಸಮಾರಂಭಕ್ಕೆ ಸಾಕ್ಷಿಯಾದರು.

ಕೆಂಪು ಹಂಚಿನ ಭವನದ ಸುತ್ತಲು ಹಸಿರು ಹೊದಿಕೆಯ ಭವ್ಯ ಉದ್ಯಾನವನ, ಇದರ ಮಧ್ಯೆ ಬಾಪೂಜಿ ಧ್ಯಾನದಲ್ಲಿ ಮಗ್ನರಾಗಿರುವ ಕಲಾಕೃತಿ, ಒಳಭಾಗದಲ್ಲಿ ಗ್ರಾನೈಟ್ ಕಲ್ಲಿನ ಏಕ ಶಿಲೆಯಲ್ಲಿ ಸಿದ್ಧಪಡಿಸಿರುವ ಬಾಪೂಜಿ ಪ್ರತಿಮೆ, ಗಾಂಧಿ ನಡೆಸಿದ ದಂಡಿ ಯಾತ್ರೆ ಹೀಗೆ ವಿವಿಧ ಬಗೆಯ ಸುಂದರ ಕಲಾಕೃತಿಗಳ ವೈಭವದೊಂದಿಗೆ ಸುಮಾರು 3 ಕೋಟಿ ರೂ. ವೆಚ್ಚದಲ್ಲಿ ದಾವಣಗೆರೆಯಲ್ಲಿ ನಿರ್ಮಾಣಗೊಂಡಿರುವ ಗಾಂಧಿ ಭವನ ಸತ್ಯ ಮೇವ ಜಯತೇ ಎಂಬ ಬರಹದಿಂದ ಸ್ವಾಗತಿಸುತ್ತಿದೆ.

ಕರಾವಳಿ ಪ್ರದೇಶದ ಶೈಲಿಯಲ್ಲಿ ಗಾಂಧಿಭವನ ನಿರ್ಮಿಸಿದ್ದು, ಒಳಗಡೆ ಪ್ರವೇಶಿಸುತ್ತಿದ್ದಂತೆಯೇ ಕೆಂಪು ಹಂಚಿನ ಭವನದ ಸುತ್ತಲು ಹಸಿರು ಹೊದಿಕೆಯ ಭವ್ಯ ಉದ್ಯಾನವಿದೆ. ಹೊರಾಂಗಣದಲ್ಲಿ ಚರಕ ಜನರನ್ನು ಸ್ವಾಗತಿಸಿದರೆ, ಒಳಗೆ ಕಾಲಿಡುತ್ತಿದ್ದಂತೆ ಗಾಂಧಿ ಪ್ರತಿಮೆ ಎದುರುಗೊಳ್ಳುತ್ತದೆ. ಜಿಲ್ಲೆಯಲ್ಲಿ ಗಾಂಧಿ ಭೇಟಿ ನೀಡಿದ ಸ್ಥಳಗಳು ಹಾಗೂ ದಾವಣಗೆರೆಯೊಂದಿಗೆ ಗಾಂಧಿಯ ನಂಟು, ಶಾಶ್ವತ ಗಾಂಧಿ ಸಾಹಿತ್ಯ ಕಲಾ ವಸ್ತು ಪ್ರದರ್ಶನ ಕೊಠಡಿ, ಮ್ಯೂಸಿಯಂ, ಸುಮಾರು 120 ಜನ ಕುಳಿತುಕೊಳ್ಳಬಲ್ಲ ಸುಂದರ ಸಭಾಂಗಣ, ಆಡಳಿತ ಕಚೇರಿ, ಇದರೊಂದಿಗೆ ಗಾಂಧಿಜಿಯವರ ಸ್ವಾತಂತ್ರ್ಯ ಹೋರಾಟದ ಹೆಜ್ಜೆಗಳು,



Download From : www.kpscvaani.com



ವಿಚಾರಧಾರೆಗಳನ್ನು ಪ್ರತಿಬಿಂಬಿಸುವ ವಿಷಯಗಳು, ಅವರ ಜೀವನ ಚರಿತ್ರೆ ತಿಳಿದುಕೊಳ್ಳಬಯಸುವವರಿಗೆ ಅಲ್ಲಿರುವ ಸುಂದರ ಕಲಾಕೃತಿಗಳು ಗಮನ ಸೆಳೆಯುತ್ತಿವೆ. ಕಟ್ಟಡದ ಹಿಂಭಾಗದಲ್ಲಿ ಆಕರ್ಷಕ ಉದ್ಯಾನವನ ನಿರ್ಮಾಣಗೊಂಡಿದ್ದು, ಅಂಗವಿಕಲರಿಗೆ ರ್‍ಯಾಂಪ್ ವ್ಯವಸ್ಥೆ, ಮಹಿಳೆಯರಿಗೆ, ಪುರುಷರಿಗೆ ಮತ್ತು ಅಂಗವಿಕಲರಿಗೆ ಪ್ರತ್ಯೇಕ ಶೌಚಾಲಯ ವ್ಯವಸ್ಥೆ ಮಾಡಲಾಗಿದೆ.

ಶಿವಮೊಗ್ಗ ಮೂಲದ ಕಲಾವಿದರಾದ ಪರಶುರಾಮ ಹಾಗೂ ಹೊನ್ನಮ್ಮನವರ್ ಅವರ ತಂಡ, ಗಾಂಧೀಜಿ ಧ್ಯಾನದಲ್ಲಿ ಮಗ್ನರಾಗಿರುವ ಕಲಾಕೃತಿ, ಭವನದ ಒಳ ಹೋಗುತ್ತಿದ್ದಂತೆ ಗ್ರಾನೈಟ್ ಕಲ್ಲಿನಿಂದ ಭವ್ಯ ಪ್ರತಿಮೆಯುಳ್ಳ ಗಾಂಧೀಜಿ, ಗಾಂಧಿ ನಡೆಸಿದ ದಂಡಿ ಯಾತ್ರೆ, ಮಕ್ಕಳನ್ನು ಓದಿಸುತ್ತಿರುವುದು, ರಾಷ್ಟ್ರದ ನೇತಾರರನ್ನು ಪುಟ್ಟ ಮಕ್ಕಳು ನಡೆಸುತ್ತಿರುವುದು, ಗಾಂಧಿಜಿ ತಮ್ಮ ಮಡದಿ ಕಸ್ತೂರಿ ಬಾ ಅವರೊಂದಿಗೆ ಜೊತೆಯಲ್ಲಿ ಕೂತಿರುವುದು, ಸಹಾಯಕಿಯರೊಂದಿಗೆ ನಡೆದು ಸಾಗುತ್ತಿರುವುದು, ಗಾಂಧೀಜಿ ಚರಕ ತಿರುಗಿಸುತ್ತಿರುವ ಕಲಾಕೃತಿಗಳನ್ನು ಸುಂದರ ಹಾಗೂ ಆಕರ್ಷಕವಾಗಿ ತಯಾರಿಸಿದ್ದು, ಕಲಾಕೃತಿಗಳು ಜನರನ್ನು ಸೂಜಿಗಲ್ಲಿನಂತೆ ಸೆಳೆಯುತ್ತವೆ. ಹೀಗಾಗಿ ಬರುವ ದಿನಗಳಲ್ಲಿ ಗಾಂಧಿ ಭವನ ನೋಡುಗರನ್ನು ಸೆಳೆಯುವ ಆಕರ್ಷಕ ತಾಣವಾಗುವುದರಲ್ಲಿ ಸಂಶಯವಿಲ್ಲ.

ಗಾಂಧಿ ಭವನವನ್ನು ಗಾಂಧಿ ಜಯಂತಿ ಮತ್ತು ಗಾಂಧಿ ಪುಣ್ಯಸ್ಮರಣೆಗೆ ಮಾತ್ರ ಸೀಮಿತವಾಗಿಸದೆ, ವರ್ಷವಿಡಿ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಇಂದಿನ ಯುವಪೀಳಿಗೆಗೆ ಗಾಂಧೀಜಿಯವರ ಜೀವನಾದರ್ಶಗಳನ್ನು, ವಿಚಾರಧಾರೆಗಳನ್ನು ತಿಳಿಸುವ ನಿಟ್ಟಿನಲ್ಲಿ ಸೂಕ್ತ ವೇದಿಕೆ ಕಲ್ಪಿಸಲು ಉದ್ದೇಶಿಸಲಾಗಿದೆ. ಗಾಂಧೀಜಿಯವರಿಗೆ ಸಂಬಂಧಿಸಿದಂತೆ ಹಲವಾರು ಪುಸ್ತಕಗಳನ್ನು ಸಂಗ್ರಹಿಸಿಡಲು ಯೋಜಿಸಲಾಗಿದೆ.

**ಗಾಂಧೀಜಿ ಹಾಗೂ ದಾವಣಗೆರೆಗೆ ಇರುವ ನಂಟು:**

ಮಹಾತ್ಮಾ ಗಾಂಧೀಜಿ 1934ರ ಮಾರ್ಚ್ 2 ರಂದು ದಾವಣಗೆರೆಗೆ ಬಂದಿದ್ದರು. ಸ್ವಾತಂತ್ರ್ಯ ಹೋರಾಟಗಾರರಲ್ಲಿ ಸ್ಫೂರ್ತಿ ತುಂಬಿ ತಮ್ಮ ಕಾರ್ಯಕ್ರಮ ಮುಗಿಸಿ ಹೊರಡಲು ಅಣಿಯಾಗುತ್ತಿದ್ದ ಅವರನ್ನು ಇನ್ನೊಂದು ದಿನ ಇರಲೇಬೇಕೆಂದು ಮುಖಂಡರು ಒತ್ತಾಯಿಸಿದರು. ಅದಕ್ಕೆ ಪ್ರತಿಕ್ರಿಯಿಸಿದ ಗಾಂಧೀಜಿ, ಇನ್ನೊಂದು ದಿನ ದಾವಣಗೆರೆಯಲ್ಲಿ ಉಳಿದುಕೊಳ್ಳಬೇಕೆಂದರೆ, ನಗರದಲ್ಲಿ ಹರಿಜನ ವಿದ್ಯಾರ್ಥಿಗಳಿಗಾಗಿ ಹಾಸ್ಟೆಲ್‌ವೊಂದನ್ನು ನಿರ್ಮಾಣ ಮಾಡಬೇಕು. ಅದಕ್ಕೆ ದಾನಿಗಳು ಸ್ಥಳ ದಾನ ಮಾಡಬೇಕು. ಕಟ್ಟಡ ನಿರ್ಮಾಣಕ್ಕೆ ಹಣ ಸಂಗ್ರಹಿಸಬೇಕು. ಹೀಗೆ ಮಾಡಿದಲ್ಲಿ ಮಾತ್ರ ಉಳಿದುಕೊಳ್ಳುವೆ ಎಂಬ ಷರತ್ತನ್ನು ವಿಧಿಸಿದರು. ಇದು ಕಷ್ಟದ ಸವಾಲು, ತಕ್ಷಣಕ್ಕೆ ತಮ್ಮ ಷರತ್ತನ್ನು







ಇವರು ಒಪ್ಪಿಕೊಳ್ಳುವುದಿಲ್ಲ ಎಂದುಕೊಂಡಿದ್ದರು ಗಾಂಧೀಜಿ.


ಆದರೆ, ದಾನಿಗಳ ಊರು ದೇವನಗಿರಿಯ ಮಂದಿ, ಗಾಂಧಿಜಿಯವರ ಷರತ್ತನ್ನು ದೈವಾಜ್ಞೆಯಂತೆ ಸ್ವೀಕರಿಸಿ, ಅಂದಿನ ಮುಖಂಡರಾದ ಕಾಸಲ್ ಶ್ರೀನಿವಾಸ ಶೆಟ್ಟಿ ಮತ್ತು ಚನ್ನಗಿರಿಯ ರಂಗಪ್ಪ ಅವರು ಹಾಸ್ಟೆಲ್ ನಿರ್ಮಾಣಕ್ಕೆ ತಯಾರಿ ನಡೆಸಿ, ವಿದ್ಯಾರ್ಥಿನಿಲಯದ ಸ್ಥಳದ ಜತೆಗೆ ಅಡಿಗಲ್ಲು ಸಮಾರಂಭಕ್ಕೂ ವ್ಯವಸ್ಥೆ ಮಾಡಿದರು. ಗಾಂಧೀಜಿ ಅವರೇ ಇನ್ನೂರು ಹೆಜ್ಜೆಗಳನ್ನು ಚೌಕಾಕಾರದಲ್ಲಿ ಅಳೆದು ಕೊಟ್ಟು ನಿವೇಶನ ಗುರುತಿಸಿ ಅಡಿಗಲ್ಲು ಹಾಕಿದರು. ಮುಂದೆ ವಿದ್ಯಾರ್ಥಿನಿಲಯ ಲಕ್ಷಾಂತರ ವಿದ್ಯಾರ್ಥಿಗಳಿಗೆ ಬದುಕು ಕಟ್ಟಿಕೊಟ್ಟಿತು. ಗಾಂಧೀಜಿ ಅವರ ನೆನಪಾಗಿ ಅದು ಇಂದಿಗೂ ಸಾಕ್ಷಿಯಾಗಿದೆ.



Download From : www.kpscvaani.com

**"ನಮ್ಮ ಮಕ್ಕಳ ಶಿಕ್ಷಣವು ಮಾತೃ ಭಾಷೆಯಲ್ಲಿ ಇರಬೇಕೆಂದು ಪ್ರತಿಪಾದಿಸಿದವರಲ್ಲಿ ಮಹಾತ್ಮ ಗಾಂಧಿ ಪ್ರಥಮರು. ಇಂಗ್ಲೀಷ್ ಮಾಧ್ಯಮದ ವ್ಯಾಮೋಹದಿಂದ ಬಳಲುತ್ತಿರುವ ಇಂದಿನ ಪೋಷಕರಿಗೆ ಹಾಗೂ ಇಂಗ್ಲೀಷ್ ಮಾಧ್ಯಮದ ಶಿಕ್ಷಣವನ್ನು ಉದ್ಯಮವಾಗಿಸಿಕೊಂಡ ಶಿಕ್ಷಣ ಸಂಸ್ಥೆಗಳಿಗೆ ಮಹಾತ್ಮರ ಈ ಅರ್ಥಪೂರ್ಣ ಚಿಂತನೆಗೆ ಕೈ ದೀವಿಗೆಯಾಗಬಲ್ಲದು. ಗಾಂಧಿ ಜಯಂತಿ ನಿಮಿತ್ತ ಶ್ರೀ ವೆಂಕಟೇಶ್ ಅವರು ಅನುವಾದಿಸಿರುವ "ಗಾಂಧೀಜಿ ನಿರೀಕ್ಷೆಗಳು" ಕೃತಿಯಿಂದ ಆಯ್ದ ಲೇಖನವನ್ನು ಓದುಗರಿಗೆ ಇಲ್ಲಿ ನೀಡಲಾಗಿದೆ."**

ಈ ವಿದೇಶಿ ಭಾಷಾ ಮಾಧ್ಯಮದ ಶಿಕ್ಷಣದಿಂದ ನಮ್ಮ ಮಕ್ಕಳ ಮೆದುಳುಗಳಿಗೆ ದಣಿವಾಗಿದೆ. ನಮ್ಮ ಮಕ್ಕಳು ವಿದೇಶಿ ಭಾಷೆಯ ಪಾಠ ಪ್ರವಚನಗಳನ್ನು ಬಾಯಿಪಾಠ ಮಾಡುವುದರ ಮೂಲಕ ತಮ್ಮ ಸ್ವಂತ ವಿಚಾರ ವಂತಿಕೆಯಿಂದ ವಂಚಿತರಾಗುತ್ತಿದ್ದಾರೆ. ಒಂದು ರೀತಿಯಲ್ಲಿ ಈಗಿನ ಮಕ್ಕಳು ವಿದೇಶಿ ಭಾಷಾ ಮಾಧ್ಯಮದ ಕಲಿಕೆಯಿಂದ ಅಂಗವಿಕಲರಾಗುತ್ತಿದ್ದಾರೆ. ವಿದೇಶಿ ಮಾಧ್ಯಮದಿಂದ ನಮ್ಮ ಭಾಷಾ ಅಕ್ಷರ ಜ್ಞಾನವು ನಶಿಸಿ ಹೋಗುತ್ತಿದೆ. ನನಗೇನಾದರೂ ನಿರಂಕುಶ ಅಧಿಕಾರ ಹೊಂದಿದ್ದರೆ ಈ ದಿನವೇ ನಮ್ಮ ಬಾಲಕ ಬಾಲಕಿಯರು ವಿದೇಶಿ ಭಾಷಾ ಕಲಿಕೆಯನ್ನು ತಕ್ಷಣದಿಂದಲೇ ನಿಲ್ಲಿಸಲು ಆದೇಶ ಮಾಡುತ್ತೇನೆ. ವಿದೇಶಿ ಭಾಷಾ ಕಲಿಸುವ ಉಪಾಧ್ಯಾಯರನ್ನು ಹಾಗೂ ಪ್ರೊಫೆಸರ್‌ಗಳನ್ನು ಕರ್ತವ್ಯದಿಂದ ಬಿಡುಗಡೆ ಮಾಡುತ್ತೇನೆ. ನಾನು ಪಠ್ಯಪುಸ್ತಕ ತಯಾರಿಯ ಕಾಯ್ದೆ, ಸ್ವದೇಶಿ ಮಾಧ್ಯಮದಲ್ಲಿ ಶಿಕ್ಷಣವನ್ನು ಕಲಿಸುವ ವಾತಾವರಣ ಎಲ್ಲವೂ ಬದಲಾಗಬೇಕೆಂದು ತಿಳಿಸುತ್ತೇನೆ.



# ಗಾಂಧೀಜಿ ನಿರೀಕ್ಷೆಗಳು ಮತ್ತು ಭಾಷಾ ಮಾಧ್ಯಮ

ಕನ್ನಡಕ್ಕೆ :
ಕೆ. ವೆಂಕಟೇಶ್



Download From : www.kpscvaani.com



> ವಿದೇಶಿ ಮಾಧ್ಯಮದಿಂದ ನಮ್ಮ ಭಾಷಾ ಅಕ್ಷರ ಜ್ಞಾನವು ನಶಿಸಿಹೋಗುತ್ತಿದೆ. ನನಗೇನಾದರೂ ನಿರಂಕುಶ ಅಧಿಕಾರ ಹೊಂದಿದ್ದರೆ ಈ ದಿನವೇ ನಮ್ಮ ಬಾಲಕ ಬಾಲಕಿಯರು ವಿದೇಶಿ ಭಾಷಾ ಕಲಿಕೆಯನ್ನು ತಕ್ಷಣದಿಂದಲೇ ನಿಲ್ಲಿಸಲು ಆದೇಶ ಮಾಡುತ್ತೇನೆ. ಹಾಗೆಯೇ ವಿದೇಶಿ ಭಾಷಾ ಕಲಿಸುವ ಉಪಾಧ್ಯಾಯರನ್ನು ಹಾಗೂ ಪ್ರೊಫೆಸರ್‌ಗಳನ್ನು ಕರ್ತವ್ಯದಿಂದ ಬಿಡುಗಡೆ ಮಾಡುತ್ತೇನೆ.
>
> –ಮಹಾತ್ಮಾ ಗಾಂಧೀಜಿ

ವಿದೇಶಿ ಭಾಷಾ ಮಾಧ್ಯಮದಿಂದ ನಮ್ಮ ಮಕ್ಕಳಿಗೆ ಬೌದ್ಧಿಕ ಮತ್ತು ನೈತಿಕತೆಯ ಅದಃ ಪತನವಾಗಿದೆ. ಇದರಿಂದ ಅಪಾರ ಹಾನಿಯು ನಮ್ಮ ಜನರಿಗಾಗಿದೆ. ಪ್ರತಿನಿತ್ಯ ವಿದೇಶಿ ಭಾಷಾ ಮಾಧ್ಯಮದಿಂದ ಲಕ್ಷಾಂತರ ಜನರು ಸ್ವದೇಶಿ ಪ್ರೀತಿಯಿಂದ ವಂಚಿತರಾಗುತ್ತಿದ್ದಾರೆ.

ನನ್ನ ಅನೇಕ ಗೆಳೆಯರು ತಮ್ಮ ಅನೇಕ ಅಂತರಂಗದ ಅಭಿಪ್ರಾಯಗಳನ್ನು ಹಂಚಿಕೊಳ್ಳುವಾಗ ತಬ್ಬಿಬ್ಬಾಗುತ್ತಾರೆ. ನಮ್ಮ ಮನೆಯಲ್ಲಿ ನಾವು ಪರಕೀಯರಂತೆ ಕಾಣುತ್ತಿದ್ದೇವೆ. ನಮ್ಮ ಭಾಷಾ ಹಿಡಿತ ಎಷ್ಟು ಕ್ಲಿಷ್ಟವಾಗಿದೆಯೆಂದರೆ ನಮ್ಮ ಮಾತೃ ಭಾಷೆಯಲ್ಲಿ ಸರಳವಾಗಿ ಮಾತನಾಡಲು ಸಾಧ್ಯವಾಗುತ್ತಿಲ್ಲ. ಪ್ರತಿಯೊಂದು ವಾಕ್ಯಗಳ ಮಧ್ಯೆ ವಿದೇಶಿ ಭಾಷೆಯ ಪದಪ್ರಯೋಗ ಮಾಡುತ್ತೇವೆ. ಕೆಲವು ವಾಕ್ಯಗಳನ್ನು ಬರೆಯುವಾಗ ಮಧ್ಯೆ ಮಧ್ಯೆ ಇಂಗ್ಲೀಷ್ ಪದಗಳನ್ನು ಜೋಡಿಸಿ ಬರೆಯುತ್ತಿದ್ದೇವೆ. ನಮ್ಮ ಕೆಲವು ಸ್ನೇಹಿತರಲ್ಲಿ ಈ ರೀತಿಯ ಭಾಷಾ ಪ್ರಯೋಗವನ್ನು ನೋಡಿದ ಮೇಲೆ ಅವುಗಳನ್ನು ಸರಿಪಡಿಸಿಕೊಳ್ಳಲು ಪ್ರಯತ್ನಿಸುತ್ತಿದ್ದೇವೆ.

ಈ ಕೆಟ್ಟ ಪರಿಣಾಮವನ್ನು ಕೂಡಲೆ ನಿಯಂತ್ರಣಕ್ಕೆ ತರಬೇಕು. ಈ ವಿದೇಶಿ ಭಾಷಾ ಮಾಧ್ಯಮದ ಹಾವಳಿಯನ್ನು ಕಿತ್ತು ಹಾಕಲು ಸಾಧ್ಯವಾಗದಿದ್ದರೂ ನಿಯಂತ್ರಣಕ್ಕೆ ತರಲು ಪ್ರಯತ್ನಿಸಬೇಕು.

ವಿಶ್ವವಿದ್ಯಾಲಯಗಳು ಸ್ವಾವಲಂಬಿಗಳಾಗಬೇಕು. ಆಯಾ ರಾಜ್ಯಗಳು ಅವರ ವಿಶ್ವವಿದ್ಯಾಲಯಗಳಿಗೆ ಬೇಕಾಗುವ ಸಿಬ್ಬಂದಿ ಸೇವಾ ವರ್ಗಗಳನ್ನು ತಯಾರು ಮಾಡಿಕೊಳ್ಳಬೇಕು. ಭಾಷಾ ಮಾಧ್ಯಮವನ್ನು ಒಂದೇ ಸಾರಿ ಬದಲಾಯಿಸಿಕೊಳ್ಳಬೇಕು. ಪ್ರಾಂತೀಯ ಭಾಷೆಗಳು ಸೊರಗುವುದನ್ನು ತಡೆಗಟ್ಟಬೇಕು.

ವಿಶ್ವವಿದ್ಯಾಲಯಗಳ ಶಿಕ್ಷಣವನ್ನು ನಿಯಂತ್ರಿಸಿ ಅರಾಜಕತೆಯನ್ನು ತಡೆಗಟ್ಟಬೇಕು. ಪ್ರಾಂತೀಯ ಭಾಷೆಗಳ ಪ್ರಾಮುಖ್ಯತೆಯನ್ನು ಬೆಳೆಸಲು ನ್ಯಾಯಾಲಯಗಳಲ್ಲಿ ಪ್ರಾಂತೀಯ ಭಾಷೆಯ ಬಳಕೆಯನ್ನು ಜಾರಿಗೆ ತರಬೇಕು. ಪ್ರಾಂತೀಯ ಶಾಸನ ಸಭೆಗಳ ನಡಾವಳಿಗಳನ್ನು ಆಯಾ ಪ್ರಾಂತೀಯ ಭಾಷೆಗಳಲ್ಲಿ ನಡೆಸಬೇಕು.

ಈಗ ಸುಧಾರಣೆಗಳನ್ನು ತರಲು ಸರಿಯಾದ ಕಾಲ. ಭಾಷಾ ಮಾಧ್ಯಮದ ಆದೇಶವನ್ನು ಜಾರಿಗೆ ತಂದಲ್ಲಿ ಬೇಕಾಗುವ ಉಪಾಧ್ಯಾಯರುಗಳು, ಪಠ್ಯಪುಸ್ತಕಗಳು ತಯಾರಾಗುವುದರಲ್ಲಿ ಸಂಶಯವಿಲ್ಲ. ವಿದೇಶಿ ಭಾಷಾ ಮಾಧ್ಯಮದ ಹಾವಳಿಯನ್ನು ತಪ್ಪಿಸಬೇಕಾದರೆ ನಮ್ಮ ಸಮಾಜ ಮತ್ತು ಸಂಸ್ಕೃತಿ ಪ್ರಾಂತೀಯ ಭಾಷೆಗಳ ಬಳಕೆಯನ್ನು ಒಂದೇ ಹಂತದಲ್ಲಿ ಸರ್ಕಾರಿ ಕಚೇರಿಗಳಲ್ಲಿ ಹಾಗೂ ನ್ಯಾಯಾಲಯಗಳಲ್ಲಿ ಅನುಷ್ಠಾನಗೊಳಿಸಬೇಕು. ಪ್ರಾಂತೀಯ ಸರ್ಕಾರಗಳು ಈ ಕ್ರಮಗಳನ್ನು ತೆಗೆದುಕೊಳ್ಳಲು ಅಧಿಕಾರ ಹೊಂದಿ ಚಲಾಯಿಸಿದರೆ ನಾವು ಗುರಿಯನ್ನು ಸಾಧಿಸುವುದರಲ್ಲಿ ಸಂಶಯವಿಲ್ಲ.

ಇದು ಆ ದಿನಗಳಲ್ಲಿ ಗಾಂಧೀಜಿ ಅವರು ಮಾತೃ ಭಾಷಾ ಮಾಧ್ಯಮದ ಬಗ್ಗೆ ಹೊಂದಿದ್ದ ಸ್ಪಷ್ಟ ನಿಲುವಾಗಿತ್ತು. ■



Download From : www.kpscvaani.com

## ಇಪ್ಪತ್ತು ಲಕ್ಷ ಮಂದಿಗೆ ಉಚಿತ ವೈದ್ಯಕೀಯ ಚಿಕಿತ್ಸೆ ಒದಗಿಸಿರುವ ಅಪರೂಪದ ವೈದ್ಯ



# ಡಾ|| ಬಿ. ರಮಣ ರಾವ್

ವೈದ್ಯಕೀಯ ಶಿಕ್ಷಣ ಎಂಬುದು ಶ್ರೀಮಂತರಿಗೆ ಮಾತ್ರ ಸೀಮಿತವಾಗಬೇಕೇ ಅಥವಾ ಬಡವರಿಗೂ ದೊರೆಯಬೇಕೇ? ಬಡ ಕುಟುಂಬದ ಹಿನ್ನೆಲೆಯ ಮಕ್ಕಳಿಗೆ ವೈದ್ಯಕೀಯ ಶಿಕ್ಷಣ ದೊರೆತರೆ ಸಮಾಜಕ್ಕೆ ಏನು ಲಾಭ ? ವೈದ್ಯಕೀಯ ಶಿಕ್ಷಣ ಎಂಬುದು ನಗರ ಕೇಂದ್ರಿತವಾಗದೆ, ಗ್ರಾಮಾಂತರ ಪ್ರದೇಶದ ಮಕ್ಕಳಿಗೂ ಲಭಿಸಿದರೆ ಗ್ರಾಮೀಣ ಜನತೆಗೆ ಅನುಕೂಲವಾದೀತೇ ?

ಇತರೆ ಪದವಿಗಳಿಗೆ ಹೋಲಿಸಿದರೆ ವೈದ್ಯಕೀಯ ಪದವಿಯ ಅವಧಿ ಸುದೀರ್ಘ. ಪದವಿಪೂರ್ವ ಪರೀಕ್ಷೆಯಲ್ಲಿ ಉತ್ತೀರ್ಣಗೊಂಡವರು ಕಲೆ, ವಿಜ್ಞಾನ ಮತ್ತು ವಾಣಿಜ್ಯ ಪದವಿಗಳನ್ನು ಮೂರು ವರ್ಷಗಳಲ್ಲಿ ಪಡೆಯಬಹುದು. ಇಂಜಿನಿಯರಿಂಗ್ ಪದವಿ ಪಡೆಯಲು ನಾಲ್ಕು ವರ್ಷಗಳು ಬೇಕಾಗುತ್ತದೆ. ಆದರೆ, ವೈದ್ಯಕೀಯ ಶಿಕ್ಷಣದಲ್ಲಿ ಮೂಲ ಪದವಿ ಅಂದರೆ ಎಂ ಬಿ ಬಿ ಎಸ್ ಎಂದೇ ಕರೆಯಲ್ಪಡುವ ಬ್ಯಾಚುಲರ್ ಆಫ್ ಮೆಡಿಸಿನ್ ಅಂಡ್ ಬ್ಯಾಚುಲರ್ ಆಫ್ ಸರ್ಜರಿ ಪದವಿಯನ್ನು ಪಡೆಯಬೇಕಾದರೆ ಐದೂವರೆ ವರ್ಷಗಳಿಗೂ ಹೆಚ್ಚು ಕಾಲ ಅಭ್ಯಸಿಸಬೇಕು ಹಾಗೂ ವ್ಯಾಸಂಗ ಮಾಡಬೇಕು.

ವೈದ್ಯಕೀಯ ಶಿಕ್ಷಣದಲ್ಲಿ ಮೂಲ ಪದವಿ ಪಡೆದ ನಂತರ ಒಂದು ವಿಷಯದಲ್ಲಾದರೂ ತಜ್ಞತೆ ಸಾಧಿಸುವುದು ಅತ್ಯಾವಶ್ಯಕ. ಎಂ ಬಿ ಬಿ ಎಸ್ ಪೂರ್ಣಗೊಳಿಸಿದ ಮೇಲೂ ಎರಡು ಅಥವಾ ಮೂರು ವರ್ಷಗಳ ಡಿಪ್ಲೋಮಾ ಅಥವಾ ಸ್ನಾತಕ ಪದವಿಯ ಉನ್ನತ ವ್ಯಾಸಂಗ ಅನಿವಾರ್ಯ. ಹೀಗಿರುವಾಗ ಕೈಗೆಟುಕುವ ಬೆಲೆಗೆ ಖಾಸಗೀ





**ವೈದ್ಯಕೀಯ ಶಿಕ್ಷಣ ಎಂದರೆ ದುಬಾರಿ ಅಲ್ಲವೇ ? ವೈದ್ಯಕೀಯ ಶಿಕ್ಷಣ ದುಬಾರಿಯಾದರೆ, ವೈದ್ಯಕೀಯ ಚಿಕಿತ್ಸೆಯೂ ದುಬಾರಿಯಾಗುವುದು ಸಹಜವಲ್ಲವೇ ? ಆದರೆ ಅಪರೂಪದ ವೈದ್ಯರೊಬ್ಬರು ಇದುವರೆಗೆ ಇಪ್ಪತ್ತು ಲಕ್ಷ ಮಂದಿಗೆ ಉಚಿತ ವೈದ್ಯಕೀಯ ಚಿಕಿತ್ಸೆಯನ್ನು ಒದಗಿಸಿದ್ದಾರೆ.**

ಡಿ. ಪಿ. ಮುರಳೀಧರ್



Download From : www.kpscvaani.com



### ಮಕ್ಕಳಿಗೆ ಮಾತ್ರವಲ್ಲ, ತಂದೆ-ತಾಯಿ ಹೆಸರಲ್ಲೂ ಉಳಿತಾಯ ಮಾಡಿ...

ನಮ್ಮ ಹೆಂಡತಿ ಮತ್ತು ಮಕ್ಕಳ ಭವಿಷ್ಯದತ್ತ ಗಮನಹರಿಸುವ ನಾವು ಅವರ ಹೆಸರಿನಲ್ಲಿ ಉಳಿತಾಯ ಖಾತೆಗಳನ್ನು ತೆರೆಯುತ್ತೇವೆ. ಹಣವನ್ನು ಠೇವಣಿ ಇಡುತ್ತೇವೆ. ಆದರೆ, ನಮ್ಮನ್ನು ಹೆತ್ತ ತಂದೆ-ತಾಯಿಯ ಬಗ್ಗೆ ಏಕೆ ಚಿಂತಿಸುವುದಿಲ್ಲ ? ಎಂಬುದು ಡಾ: ರಮಣ ರಾವ್ ಅವರ ಪ್ರಶ್ನೆ.

ಹೆಂಡತಿ ಮತ್ತು ಮಕ್ಕಳಿಗಿಂತಲೂ, ನಮ್ಮನ್ನು ಸಾಕಿ-ಬೆಳೆಸಿದ ತಂದೆ-ತಾಯಿಯ ಆರೋಗ್ಯದತ್ತ ಗಮನಹರಿಸುವ ಅವಶ್ಯಕತೆ ಇದೆ. ಆದ ಕಾರಣ, ಅವರ ಹೆಸರಲ್ಲೂ ಉಳಿತಾಯ ಖಾತೆಗಳನ್ನು ತೆರೆಯಿರಿ, ಅವರ ಹೆಸರಲ್ಲಿ ಹಣ ಠೇವಣಿ ಇರಿಸಿ ಹಾಗೂ ಅವರ ಹೆಸರಲ್ಲಿ ಆರೋಗ್ಯ ವಿಮೆ ಮಾಡಿಸಿ. ಅವರ ಪ್ರೀತಿಗೆ ಪಾತ್ರರಾಗಿ. ಮಾತಾ-ಪಿತೃಗಳ ಋಣ ತೀರಿಸಿ ಎಂಬುದು ಇಂದಿನ ಯುವ ಜನತೆಗೆ ಡಾ: ಬಿ. ರಮಣ ರಾವ್ ಅವರ ಅಕ್ಕರೆಯ ಸಲಹೆ.

ವಲಯದಲ್ಲಿ ವೈದ್ಯಕೀಯ ಚಿಕಿತ್ಸೆ ಲಭಿಸುವುದು ಸಾಧ್ಯವೇ ?

ದುಬಾರಿ ಶುಲ್ಕ ಪಾವತಿಸಿ, ವೈದ್ಯಕೀಯ ಶಿಕ್ಷಣ ಪಡೆದವರಲ್ಲಿ ಸೇವಾ ಮನೋಧರ್ಮ ಇರುತ್ತದೆಯೇ ? ನಗರಗಳಲ್ಲೇ ಹುಟ್ಟಿ ಬೆಳೆದವರಲ್ಲಿ ಗ್ರಾಮೀಣ ಪ್ರದೇಶದ ಜನರ ನೋವಿಗೆ ಸ್ಪಂದಿಸುವ ಮನೋಭಾವ ಇರಲು ಸಾಧ್ಯವೇ ? ಎಲ್ಲವನ್ನೂ ವ್ಯಾವಹಾರಿಕ ದೃಷ್ಟಿಯಲ್ಲಿ ನೋಡುವ ಶ್ರೀಮಂತರಲ್ಲಿ ಬಡವರ ಬಗ್ಗೆ ಕಾಳಜಿ ಇರುವುದು ಅಪರೂಪವಲ್ಲವೇ ? ಇಂತಹ ಎಲ್ಲಾ ಪ್ರಶ್ನೆಗಳಿಗೂ ಒಂದೇ ಉತ್ತರ ಡಾ: ಬಿ. ರಮಣ ರಾವ್ !

ಸರ್ಕಾರಕ್ಕಿಂತಲೂ ದೊಡ್ಡದಾದ ಸಂಸ್ಥೆ ಮತ್ತೊಂದಿಲ್ಲ. ಸರ್ಕಾರ ಎಂಬುದು ಮಾತೃ ಹೃದಯಿ. ಪ್ರಜಾಪ್ರಭುತ್ವದಲ್ಲಿ ಎಲ್ಲಾ ಸರ್ಕಾರಗಳು ಬಡವರ ಪರ ದುಡಿಯುತ್ತವೆ, ಬಡವರ ಪರ ಮಿಡಿಯುತ್ತವೆ ಮತ್ತು ಬಡವರ ಧ್ವನಿಯಾಗಿರುತ್ತವೆ.

ಸರ್ಕಾರಿ ವೈದ್ಯಕೀಯ ಮಹಾವಿದ್ಯಾಲಯಗಳು ಇಲ್ಲದಿದ್ದಲ್ಲಿ, ಪ್ರತಿಭಾವಂತರಾಗಿದ್ದರೂ ಬಡವರ ಮಕ್ಕಳು ವೈದ್ಯರಾಗುತ್ತಿರಲಿಲ್ಲ. ಸರ್ಕಾರಿ ಆಸ್ಪತ್ರೆಗಳು ಹಾಗೂ ಸರ್ಕಾರಿ ವೈದ್ಯರು ಇಲ್ಲದಿದ್ದಲ್ಲಿ, ಬಹುತೇಕ ಬಡವರು ಹಾಗೂ ಗ್ರಾಮೀಣ ಪ್ರದೇಶದ ಜನರಿಗೆ ವೈದ್ಯಕೀಯ ಚಿಕಿತ್ಸೆ ಲಭಿಸುತ್ತಿರಲಿಲ್ಲ ಹಾಗೂ ವೈದ್ಯಕೀಯ ಸೌಲಭ್ಯಗಳು ದೊರೆಯುತ್ತಿರಲಿಲ್ಲ.

ಖಾಸಗೀ ಕ್ಷೇತ್ರದಲ್ಲೂ ಕೆಲವು ವೈದ್ಯಕೀಯ ಸಂಸ್ಥೆ ಹಾಗೂ ಸಂಘಟನೆಗಳಿವೆ. ಕೆಲವು ಸ್ವಯಂ ಸೇವಾ ಸಂಸ್ಥೆಗಳಿವೆ. ಬಡ ಜನರು ಅನಾರೋಗ್ಯ ಪೀಡಿತರಾದಾಗ ಅವರ ಸಂಕಷ್ಟದ ಸಮಯದಲ್ಲಿ ಅವರಿಗೆ ಸಕಾಲಿಕ ನೆರವು ಕಲ್ಪಿಸುತ್ತಿವೆ. ಅಂತೆಯೇ, ನಮ್ಮಲ್ಲಿ ಕೆಲವು ವೈದ್ಯರಿದ್ದಾರೆ. ಬಡವರ ನೋವಿಗೆ ಸ್ಪಂದಿಸುತ್ತಿದ್ದಾರೆ. ವೈದ್ಯಕೀಯ ಚಿಕಿತ್ಸೆ ಮಾತ್ರವಲ್ಲ, ಔಷಧಿಗಳನ್ನೂ ಉಚಿತವಾಗಿ ನೀಡುತ್ತಿದ್ದಾರೆ. ಬಡವರ ಬದುಕಿಗೆ ಬೆಳಕಾಗಿದ್ದಾರೆ. ಅಂಹವರಲ್ಲೊಬ್ಬರು ಡಾ: ಬಿ. ರಮಣ ರಾವ್.

**ಪ್ರತಿ ಭಾನುವಾರ ಸಂತೆಯಲ್ಲ !! ಆರೋಗ್ಯ ಮೇಳ !!**

ಹೌದು! ಬೆಂಗಳೂರು ಗ್ರಾಮಾಂತರ ಜಿಲ್ಲೆಯ ನೆಲಮಂಗಲ ತಾಲ್ಲೂಕಿನ ಟಿ. ಬೇಗೂರು ಗ್ರಾಮದಲ್ಲಿ ಪ್ರತಿ ಭಾನುವಾರವೂ ಸಂತೆಯಲ್ಲ, ಆರೋಗ್ಯ ಮೇಳ ನಡೆಯುತ್ತದೆ. ಬೇಗೂರಿನ ದಿ ವಿಲೇಜ್ ಕ್ಲಿನಿಕ್‌ನ ವಿಶಾಲ ಪ್ರಾಂಗಣದಲ್ಲಿ ಪ್ರತಿ ಭಾನುವಾರ ಬೆಳಿಗ್ಗೆ ಐದು ಗಂಟೆಗೆ ನೂರಾರು ಜನರು ತಮ್ಮ ಆರೋಗ್ಯ ಚಿಕಿತ್ಸೆಗೆ, ತಮ್ಮ ಮಕ್ಕಳ ಆರೋಗ್ಯ ತಪಾಸಣೆಗೆ ಅಥವಾ ತಮ್ಮ ಬಂಧು-ಮಿತ್ರರ ಆರೋಗ್ಯ ಸುಧಾರಣೆ ಕುರಿತು ವೈದ್ಯಕೀಯ ಸಲಹೆ ಪಡೆಯಲು ಸರದಿಯಲ್ಲಿ ಸಾಲುಗಟ್ಟಿ ನಿಂತಿರುತ್ತಾರೆ.

ಇದಕ್ಕೆ ಎರಡು ಕಾರಣಗಳಿವೆ. ಮೊದಲನೆಯದಾಗಿ ದಿ ವಿಲೇಜ್ ಕ್ಲಿನಿಕ್‌ನಲ್ಲಿ ಚಿಕಿತ್ಸೆ, ಔಷಧಿ ಹಾಗೂ ಸಲಹೆ ಎಲ್ಲವೂ ಉಚಿತ ! ಎರಡನೆಯದಾಗಿ ಚಿಕಿತ್ಸಾಲಯದಿಂದ ಮನೆಗೆ ಮರಳುವ ಮುನ್ನ ಊಟವೂ ಉಚಿತ !!





Download From : www.kpscvaani.com

**ಜಗತ್ತಿನ ಹಳೆಯ ಹಾಗೂ ಉಚಿತ ಚಿಕಿತ್ಸಾಲಯ**

ಕಳೆದ ನಲವತ್ತೇಳು ವರ್ಷಗಳಿಂದ ದಿ ವಿಲೇಜ್ ಕ್ಲಿನಿಕ್ ಈ ಭಾಗದ ಜನರಿಗೆ ಉಚಿತ ಸೇವೆ ಒದಗಿಸುತ್ತಿದೆ ಎಂಬುದು ಒಂದು ಪ್ರಮುಖ ಅಂಶವಾದರೆ, ಸತತ 47 ವರ್ಷಗಳಿಂದ ದಿ ವಿಲೇಜ್ ಕ್ಲಿನಿಕ್ ಅನ್ನು ಮುನ್ನಡೆಸುತ್ತಿರುವುದು ಯಾವುದೇ ಸಂಸ್ಥೆ ಅಥವಾ ಸಂಘಟನೆಯಲ್ಲ, ಓರ್ವ ವ್ಯಕ್ತಿ. ಅದುವೇ ಡಾ: ಬಿ. ರಮಣ ರಾವ್ ಎಂಬುದು ಏಕಕಾಲಕ್ಕೆ ಅಚ್ಚರಿ ಮತ್ತು ಆನಂದ ಮೂಡಿಸುವ ವಿಚಾರವಾಗಿದೆ. ಎಲ್ಲಕ್ಕಿಂತಲೂ ಮಿಗಿಲಾಗಿ ದಿ ವಿಲೇಜ್ ಕ್ಲಿನಿಕ್, ಇದೀಗ ಜಗತ್ತಿನ ಅತ್ಯಂತ ಹಳೆಯ ಹಾಗೂ ಉಚಿತ ಚಿಕಿತ್ಸಾಲಯ ಎಂದೂ ಖ್ಯಾತಿ ಗಳಿಸಿದೆ.

**ಡಾ ಬಿ. ರಮಣ ರಾವ್ ಯಾರು ?**

ಅವಿಭಜಿತ ಆಂಧ್ರ ಪ್ರದೇಶದ ಹೈದರಾಬಾದ್‌ನಲ್ಲಿ ಮಧ್ಯಮ ವರ್ಗದ ಕುಟುಂಬದಲ್ಲಿ 1951 ರ ಆಗಸ್ಟ್ 31 ರಂದು ಭೋಗರಾಜು ರಮಣ ರಾವ್ ಅವರು ಜನಿಸಿದರು. ತಂದೆ ಬಿ. ಎಸ್. ರಾಮರಾವ್ ಅವರು ಇಂಜಿನಿಯರ್. ತಾಯಿ ಬಿ. ಎಸ್. ಶಕುಂತಲ ಅವರು ಗೃಹಿಣಿ. ತಂದೆಗೆ ಬೆಂಗಳೂರಿಗೆ ವರ್ಗಾವಣೆಯಾದ ಹಿನ್ನೆಲೆಯಲ್ಲಿ ಇಡೀ ಕುಟುಂಬ ಬೆಂಗಳೂರಿನ ವೈಯ್ಯಾಲಿಕಾವಲ್‌ನಲ್ಲಿ ಬಂದು ನೆಲೆಸುತ್ತದೆ.

ಬೆಂಳೂರಿನ ಸೇಂಟ್ ಜೋಸೆಫ್ ಇಂಡಿಯನ್ ಹೈಸ್ಕೂಲ್ ಹಾಗೂ ಸೇಂಟ್ ಜೋಸೆಫ್ ಕಾಲೇಜ್‌ನಲ್ಲಿ ಕಲಿಕೆ. ವ್ಯಾಸಂಗದಲ್ಲಿ ಪದವಿಪೂರ್ವ ತರಗತಿಯವರೆಗೂ ರಮಣ ರಾವ್ ಅವರು ಸಾಧಾರಣ ವಿದ್ಯಾರ್ಥಿ. ನಂತರ, ಎಂ. ಬಿ. ಬಿ. ಎಸ್ ಪದವಿ ಪಡೆಯಲು ಮಣಿಪಾಲದ ಕಸ್ತೂರಬಾ ಮೆಡಿಕಲ್ ಕಾಲೇಜ್‌ನಲ್ಲಿ ಪ್ರವೇಶ.

ಮಣಿಪಾಲದ ಆಸ್ಪತ್ರೆಯ ಮುಂದೆ ರಮಣ ರಾವ್ ಅವರು ಒಮ್ಮೆ ನಡೆದು ಹೋಗುತ್ತಿದ್ದಾಗ, ಆಸ್ಪತ್ರೆಯ ಮುಂಭಾಗದಲ್ಲಿನ ಸೂಚನಾ ಫಲಕ ಅವರ ಗಮನ ಸೆಳೆಯುತ್ತದೆ. ಆ ಸೂಚನಾ ಫಲಕದಲ್ಲಿ, " ಚಿಂತಾಜನಕ ಸ್ಥಿತಿಯಲ್ಲಿರುವ ರೋಗಿಯೋರ್ವರಿಗೆ ಓ ಪಾಸಿಟೀವ್ ಗುಂಪಿನ ರಕ್ತದ ಅವಶ್ಯಕತೆ ಇದೆ. ದಾನಿಗಳು ಸಹಾಯಮಾಡಿ " ಎಂದು ಕೆಂಪು ಅಕ್ಷರಗಳಲ್ಲಿ (ಕೆಂಪು ಬಣ್ಣದ ಚಾಕ್‌ಪೀಸ್‌ನಲ್ಲಿ) ಬರೆದದ್ದು ಕಣ್ಣಿಗೆ ಬೀಳುತ್ತದೆ.

ಅದನ್ನು ಕಂಡ ರಮಣ ರಾವ್ ಅವರು ಆಸ್ಪತ್ರೆಯ ಒಳಗೆ ಹೋಗಿ, ತನ್ನದೂ ಓ ಪಾಸಿಟೀವ್ ಗುಂಪಿನ ರಕ್ತ ಎಂಬುದನ್ನು ತಿಳಿಸಿ, ರಕ್ತ ದಾನ ಮಾಡಲು ತಾನು ಸಿದ್ಧ ಎಂದು ಹೇಳುತ್ತಾರೆ. ರಕ್ತ ದಾನ ಮಾಡಿ ತಮ್ಮ ವಸತಿನಿಲಯಕ್ಕೆ ಮರಳುತ್ತಾರೆ. ಅದಾದ ಕೆಲವೇ ಗಂಟೆಗಳಲ್ಲಿ ರಮಣ ರಾವ್ ಅವರಿಗೆ ದೂರವಾಣಿ ಕರೆ ಬಂದಿದೆ ಎಂದು ಹಾಸ್ಟೆಲ್ ವಾರ್ಡನ್ ತಿಳಿಸುತ್ತಾರೆ. ಬಹುಶಃ ತಮ್ಮ ತಂದೆ ಅಥವಾ ತಾಯಿಯ ಕರೆ ಇರಬಹುದು ಎಂದು ದೂರವಾಣಿ ಕರೆ ಸ್ವೀಕರಿಸಿದ ರಮಣ ರಾವ್ ಅವರಿಗೆ ಅಚ್ಚರಿ ಕಾದಿರುತ್ತದೆ. ಆ ಕರೆ ಮಣಿಪಾಲ ಸಮೂಹ ಸಂಸ್ಥೆಗಳ ಮುಖ್ಯಸ್ಥ ಡಾ: ಟಿ. ಎಂ. ಎ. ಪೈ ಅವರದ್ದಾಗಿರುತ್ತದೆ.

ರಕ್ತದಾನ ಮಾಡಿದ ತಮ್ಮ ಶಿಕ್ಷಣ ಸಂಸ್ಥೆಯಲ್ಲಿ ವ್ಯಾಸಂಗ ಮಾಡುತ್ತಿರುವ ಹುಡುಗನಿಗೆ ಡಾ ಪೈ ಅವರು ಅಭಿನಂದಿಸಿ, ಮನದುಂಬಿ ಹಾರೈಸುತ್ತಾರೆ. ಈ ಘಟನೆಯು ಶ್ರದ್ಧೆಯಿಂದ ವ್ಯಾಸಂಗ ಮಾಡಬೇಕು ಹಾಗೂ ಜನಸೇವೆ ಮಾಡಬೇಕು ಎಂದು ರಮಣ ರಾವ್ ಅವರಿಗೆ ಪ್ರೇರಣೆ ನೀಡುತ್ತದೆ. ಅಷ್ಟೇ ಅಲ್ಲ ! ಜೀವನದಲ್ಲಿ ಅತೀ ದೊಡ್ಡ ತಿರುವನ್ನೇ ನೀಡುತ್ತದೆ. ವ್ಯಾಸಂಗದಲ್ಲಿ ರಮಣ ರಾವ್ ಚುರುಕಾಗುತ್ತಾರೆ.

ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಹೌಸ್ ಸರ್ಜನ್ಸಿಯ ತರಬೇತಿಯಲ್ಲಿದ್ದ ಸಂದರ್ಭದಲ್ಲಿ ಮುಂಜಾನೆ ನಸುಕಿನಲ್ಲೇ ಎದ್ದು ಬೆಂಗಳೂರು ಹೊರ ವಲಯದ ಆಲೂರು ಬಳಿಯ ತಮ್ಮ ತೋಟದಲ್ಲಿ ಬೆಳೆದ ಸೊಪ್ಪು-ತರಕಾರಿಗಳನ್ನು ಟ್ರಾಕ್ಟರ್‌ನಲ್ಲಿ ತುಂಬಿಕೊಂಡು, ಕೃಷ್ಣ ರಾಜೇಂದ್ರ ಮಾರುಕಟ್ಟೆಯಲ್ಲಿ ಮಾರಾಟ ಮಾಡಿ, ಹಣವನ್ನು ಕಿಸೆಯಲ್ಲಿರಿಸಿಕೊಂಡು ತರಬೇತಿಗೆ ಹೋಗುತ್ತಿದ್ದ ದಿನಗಳನ್ನು ಡಾ: ರಮಣ ರಾವ್ ಅವರು ಇಂದಿಗೂ ಸಂತಸದಿಂದ ಸ್ಮರಿಸುತ್ತಾರೆ.

ತದ ನಂತರ, ಡಾ: ರಮಣ ರಾವ್ ಅವರು ಬೆಂಗಳೂರು ವೈದ್ಯಕೀಯ ಮಹಾವಿದ್ಯಾಲಯದಲ್ಲಿ ಮೆಡಿಸಿನ್ ಮತ್ತು ಕಾರ್ಡಿಯೋಲಜಿ ವಿಷಯಗಳಲ್ಲಿ ಎಂ.ಡಿ. ಅಂದರೆ ಡಾಕ್ಟರ್ ಅಫ್ ಮೆಡಿಸಿನ್ ವ್ಯಾಸಂಗ ಮುಂದುವರೆಸುತ್ತಾರೆ.

**ರಾಜನಿಂದ ರಾಜ್‌ವರೆಗೆ !**

ಬೆಂಗಳೂರಿನ ವೈಯ್ಯಾಲಿಕಾಲ್







Download From : www.kpscvaani.com



**ಪ್ರಶಸ್ತಿ ಪುರಸ್ಕಾರಗಳು**

**ಡಾ: ಬಿ. ರಮಣ ರಾವ್ ಅವರು ವೈದ್ಯಕೀಯ ಕ್ಷೇತ್ರದಲ್ಲಿ ಸಲ್ಲಿಸಿರುವ ಅನುಪಮ ಸೇವೆಗೆ 1998 ರಲ್ಲಿ "ಕರ್ನಾಟಕ ರಾಜ್ಯೋತ್ಸವ" ಪ್ರಶಸ್ತಿ, 2008 ರಲ್ಲಿ ಬೆಂಗಳೂರಿನ ಭಾರತೀಯ ವೈದ್ಯಕೀಯ ಸಂಘದ "ಬಿ.ಸಿ.ರಾಯ್" ಪ್ರಶಸ್ತಿ ಹಾಗೂ 2010 ರಲ್ಲಿ "ಪದ್ಮಶ್ರೀ" ಪ್ರಶಸ್ತಿ ಸಂದಿದೆ.**

ಬಡಾವಣೆಯ ಸಮೀಪವೇ ಒಂದೆಡೆ ಬೆಂಗಳೂರು ಅರಮನೆ ಇದೆ. ಮತ್ತೊಂದೆಡೆ ಗಣ್ಯಾತಿಗಣ್ಯರು ವಾಸಿಸುವ ಪ್ರತಿಷ್ಠಿತ ಸದಾಶಿವ ನಗರ ಬಡಾವಣೆ ಇದೆ.

ಒಂದು ದಿನ ವ್ಯಕ್ತಿಯೊಬ್ಬರು ಡಾ: ರಮಣ ರಾವ್ ಅವರ ಚಿಕಿತ್ಸಾಲಯಕ್ಕೆ ಬಂದು ತಮ್ಮ ಮಧುಮೇಹ ರೋಗದಿಂದ ಬಳಲುತ್ತಿರುವ ತಮ್ಮ 'ಒಡೆಯರಿಗೆ' ಅವರು ಇರುವಲ್ಲಿಗೇ ಬಂದು ಇಂಜೆಕ್ಷನ್ ನೀಡಲು ವಿನಂತಿಸುತ್ತಾರೆ. ಡಾ: ರಮಣ ರಾವ್ ಸಮ್ಮತಿಸುತ್ತಾರೆ. ಆತ ತಂದ (ಬಂದ) ಕಾರ್‌ನಲ್ಲಿ ಕುಳಿತುಕೊಳ್ಳುತ್ತಾರೆ.

ಓಹ್! ಕಾರು ಬೆಂಗಳೂರು ಅರಮನೆ ಪ್ರವೇಶಿಸುತ್ತಿದೆ. ಕಾರು ಆಗಮಿಸಿದೊಡನೆಯೇ, ಕಾರಿನಲ್ಲಿ ಆಗಮಿಸಿದ ವೈದ್ಯ ಡಾ ರಮಣ ರಾವ್ ಅವರಿಗೆ ರಾಜಭಟನೋರ್ವನಿಂದ ಗೌರವ ವಂದನೆ. ಮತ್ತೋರ್ವ ಭಟನಿಂದ ಅವರು ತಂದಿದ್ದ ಮೆಡಿಕಲ್ ಕಿಟ್ ಸ್ವೀಕಾರ. ಡಾ: ರಮಣ ರಾವ್ ಅವರನ್ನು ಅರಮನೆಯ ಮೊದಲನೇ ಮಹಡಿಗೆ ಕರೆದೊಯ್ಯುತ್ತಾರೆ. ಕೊಠಡಿಯಲ್ಲಿದ್ದ ವ್ಯಕ್ತಿಯ ಅನುಮತಿ ಪಡೆದು ವೈದ್ಯರಿಗೆ ಪ್ರವೇಶ ಕಲ್ಪಿಸುತ್ತಾರೆ. ಆ ವ್ಯಕ್ತಿಯನ್ನು ಕಂಡೊಡನೆಯೇ ಡಾ: ರಮಣ ರಾವ್ ಅವರಿಗೆ ಕೆಲಕ್ಷಣಗಳ ಕಾಲ ಮಾತು ಹೊರಡುವುದಿಲ್ಲ! ಏಕೆಂದರೆ, ಅವರು ಬೇರಾರೂ ಅಲ್ಲ ಮೈಸೂರಿನ ಮಹಾರಾಜರಾದ ಶ್ರೀ ಜಯ ಚಾಮರಾಜೇಂದ್ರ ಒಡೆಯರ್ !

ಅಂದಿನಿಂದ ಮಹಾರಾಜರಿಗೆ ಆಗಾಗ ಚಿಕಿತ್ಸೆ ನೀಡುವ ಮಹಾಭಾಗ್ಯ ಡಾ ರಮಣ ರಾವ್ ಅವರಿಗೆ ದಕ್ಕುತ್ತದೆ. ಅಚ್ಚರಿಯ ಈ ಘಟನೆಯನ್ನು ಡಾ: ರಮಣ ರಾವ್ ಅವರು ಸದಾ ಕಾಲ ಸ್ಮರಿಸುತ್ತಾರೆ.

ಅಂದಿನ ಮುಖ್ಯಮಂತ್ರಿ ವೀರೇಂದ್ರ ಪಾಟೀಲ್, ನಂತರ ಮುಖ್ಯಮಂತ್ರಿಗಳಾದ ಡಿ. ದೇವರಾಜ ಅರಸು ಹಾಗೂ ಎಸ್. ಎಂ. ಕೃಷ್ಣ ಹೀಗೆ ಸದಾಶಿವನಗರ ಬಡಾವಣೆಯಲ್ಲಿ ವಾಸಿಸುತ್ತಿದ್ದ ಅನೇಕ ಗಣ್ಯರು ತಮ್ಮ ಆರೋಗ್ಯದಲ್ಲಿ ಏರುಪೇರಾದಾಗ ಡಾ: ರಮಣ ರಾವ್ ಅವರಲ್ಲಿ ಚಿಕಿತ್ಸೆ ಪಡೆದು, ತಮ್ಮ ಆರೋಗ್ಯವನ್ನು ಸುಧಾರಿಸಿಕೊಂಡಿದ್ದಾರೆ.

ಅದೇ ರೀತಿ, ಒಂದು ದಿನ ಸಂಜೆ ತೀವ್ರ ಜ್ವರದಿಂದ ಬಳಲುತ್ತಿದ್ದ ನಟಸಾರ್ವಭೌಮ ರಾಜ್‌ಕುಮಾರ್ ಅವರು ಚಿಕಿತ್ಸಾಲಯಕ್ಕೆ ಆಗಮಿಸಿ, ವೈದ್ಯೋ ನಾರಾಯಣೋ ಹರಿಃ ಎಂದು ಹೇಳಿ, ಡಾ: ರಮಣ ರಾವ್ ಅವರ ಪಾದವನ್ನು ಸ್ಪರ್ಶಿಸಿ ನಮಸ್ಕಾರ ಮಾಡಿದಾಗ, ರಾಜ್ ಕುಮಾರ್ ಅವರ ವಿನಮ್ರತೆಗೆ ಮಂತ್ರ ಮುಗ್ಧರಾಗುತ್ತಾರೆ. ಅಂತೆಯೇ, ವೃತ್ತಿ ಜೀವನದಲ್ಲಿ ಸಂತೃಪ್ತಿ ಮತ್ತು ಸಾರ್ಥಕತೆಯ ಕಾಣುವಂತೆ ಮಾಡುವ ಈ ಘಟನೆಯಿಂದ ಡಾ: ರಮಣ ರಾವ್ ಅವರ ಆನಂದಕ್ಕೆ ಪಾರವೇ ಇಲ್ಲದಂತಾಗುತ್ತದೆ. ಆ ಕ್ಷಣದಲ್ಲೇ ವೈದ್ಯ ವೃತ್ತಿಯ ಪಾವಿತ್ರ್ಯತೆ ಮತ್ತು ಮಹತ್ವವನ್ನು ಮನಗಾಣುವ ಡಾ: ರಮಣ ರಾವ್ ಅವರು ಗ್ರಾಮೀಣ ಪ್ರದೇಶದ ಜನರಿಗೆ ಉಚಿತ ವೈದ್ಯಕೀಯ ಚಿಕಿತ್ಸೆ ಒದಗಿಸಲು ಸಂಕಲ್ಪ ಮಾಡುತ್ತಾರೆ.

**ಸ್ಥಳ ಮಹಿಮೆ !**

ಒಮ್ಮೆ ಬೆಂಗಳೂರಿನಿಂದ ತುಮಕೂರು ಕಡೆಗೆ ಕಾರಿನಲ್ಲಿ ಪ್ರಯಾಣಿಸುವಾಗ, ವೃದ್ಧೆಯೊಬ್ಬರನ್ನು ಆಕೆಯ ಮಗ ಹೊತ್ತೊಯ್ಯುತ್ತಿರುವುದನ್ನು ಕಂಡ ಡಾ: ರಮಣ ರಾವ್ ಅವರು ಕಾರು ನಿಲ್ಲಿಸುತ್ತಾರೆ. ಆಕೆಯನ್ನು ಪರೀಕ್ಷಿಸಿದಾಗ, ಆಕೆ ತೀವ್ರ ಉಸಿರಾಟದ ತೊಂದರೆಯಿಂದ ಬಳಲುತ್ತಿರುವುದು ಕಂಡು ಬರುತ್ತಾರೆ. ಡಾ ರಮಣ ರಾವ್ ಅವರು ಆಕೆಗೆ ಆಸ್ತಮಾಕ್ಕೆ ಸಂಬಂಧಿಸಿದ ಪ್ರತಿರೋಧದ ಇಂಜೆಕ್ಷನ್ ನೀಡುತ್ತಾರೆ. ಕೆಲವೇ ನಿಮಿಷಗಳಲ್ಲಿ ಆಕೆ ಚೇತರಿಸಿಕೊಳ್ಳುತ್ತಾರೆ. ಆ ಮಹಾ ತಾಯಿ ಡಾ: ರಮಣ ರಾವ್ ಅವರನ್ನು ಬಾಯಿ ತುಂಬಾ ಹರಸುತ್ತಾರೆ.

ಆ ಸ್ಥಳವೇ ಟಿ. ಬೇಗೂರು ! ಅಲ್ಲೇ ಜಾಗ ಖರೀದಿಸಿ, ಡಾ: ರಮಣ ರಾವ್ ಅವರು ಗ್ರಾಮೀಣ ಜನರಿಗೆ ಉಚಿತ ವೈದ್ಯಕೀಯ ಚಿಕಿತ್ಸೆ ಒದಗಿಸುವ ತಮ್ಮ ದಿ ವಿಲೇಜ್ ಕ್ಲಿನಿಕ್ ಅನ್ನು 1974 ರ ಆಗಸ್ಟ್ 15 ರ ಸ್ವಾತಂತ್ರ್ಯ ದಿನಾಚರಣೆಯ ದಿನದಂದು ಪ್ರಾರಂಭಿಸುತ್ತಾರೆ. ಪ್ರತಿ ಭಾನುವಾರ ಬಡ ಜನರಿಗೆ ಉಚಿತ ವೈದ್ಯಕೀಯ ಚಿಕಿತ್ಸೆ ಒದಗಿಸುವ ಈ ಮಹತ್ತರ ಕಾರ್ಯ ಇಂದಿಗೂ ನಡೆಯುತ್ತಿದೆ.

ಡಾ: ರಮಣ ರಾವ್ ಅವರ ಮಕ್ಕಳಾದ ಡಾ: ಚರಿತ್ ಮತ್ತು ಡಾ: ಅಭಿಜಿತ್ ಕೂಡಾ ಪ್ರತಿವಾರವೂ ತಮ್ಮ ತಂದೆಗೆ ಜೊತೆಯಾಗಿ ದಿ ವಿಲೇಜ್ ಕ್ಲಿನಿಕ್‌ನಲ್ಲಿ ಉಚಿತ ಸೇವೆ ಸಲ್ಲಿಸುತ್ತಿದ್ದಾರೆ. ಡಾ: ರಮಣ ರಾವ್ ಅವರ ಪತ್ನಿ ಹೇಮಾ ಅವರು ವೈದ್ಯರ ಸೇವೆ ಸಮರ್ಪಕವಾಗಿದೆಯೇ ? ಎಂಬುದನ್ನು ಪರಿಶೀಲಿಸಿ ಖಾತರಿಪಡಿಸಿಕೊಳ್ಳುತ್ತಾರೆ.

ಸಾಮಾನ್ಯ ವೈದ್ಯಕೀಯ ಚಿಕಿತ್ಸೆಯ ಜೊತೆ ಜೊತೆಗೆ ನೇತ್ರ ತಪಾಸಣೆ, ಹೃದ್ರೋಗ ತಪಾಸಣೆ, ದಂತವೈದ್ಯ ಚಿಕಿತ್ಸೆ, ಚರ್ಮರೋಗ ಚಿಕಿತ್ಸೆ ಹೀಗೆ ಎಲ್ಲಾ ಸೌಲಭ್ಯಗಳೂ ಇದೀಗ ದಿ ವಿಲೇಜ್ ಕ್ಲಿನಿಕ್‌ನಲ್ಲಿ ಲಭ್ಯ.

ಅರ್ಧ ಶತಮಾನದತ್ತ ಮುನ್ನಡೆಯುತ್ತಿರುವ ದಿ ವಿಲೇಜ್ ಕ್ಲಿನಿಕ್‌ನಲ್ಲಿ ಈವರೆಗೂ ಇಪ್ಪತ್ತು ಲಕ್ಷ ಮಂದಿಗೆ ಉಚಿತ ಚಿಕಿತ್ಸೆ ಒದಗಿಸಿ ಡಾ: ರಮಣ ರಾವ್ ಅವರು ವಿಶ್ವ ದಾಖಲೆ ಸ್ಥಾಪಿಸಿದ್ದಾರೆ. ಅಲ್ಲದೆ, ಇತರೆ ವೈದ್ಯರಿಗೂ ಮಾದರಿ ಹಾಗೂ ಸ್ಫೂರ್ತಿಯ ಸೆಲೆಯಾಗಿ ಅಪರೂಪದ ವೈದ್ಯ ಎನಿಸಿದ್ದಾರೆ. ■



Download From : www.kpscvaani.com

**ಯೋಜನೆಗಳನ್ನು ಜನರ ಮನೆ ಬಾಗಿಲಿಗೆ ತಲುಪಿಸುವುದು ಸರ್ಕಾರದ ಸಂಕಲ್ಪ. ಈ ನಿಟ್ಟಿನಲ್ಲಿ ಕರ್ನಾಟಕ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮ ನಿಯಮಿತ ವತಿಯಿಂದ ಅನುಗ್ರಹ ಕೊಡುಗೆ ಯೋಜನೆಯಡಿ ಆಕಸ್ಮಿಕವಾಗಿ ಮರಣ ಹೊಂದಿದ ಕುರಿ-ಮೇಕೆಗಳಿಗೆ ನೀಡಲಾಗುವ ಪರಿಹಾರಧನವನ್ನು ಸಾಕಣಿದಾರರ ಖಾತೆಗೆ ನೇರವಾಗಿ ಡಿಬಿಟಿ ಮೂಲಕ ಜಮೆ ಮಾಡಲಾಗುತ್ತಿದೆ.**









# ಅನುಗ್ರಹ ಕೊಡುಗೆ ಯೋಜನೆಯಡಿ

## ಫಲಾನುಭವಿಗಳಿಗೆ ಡಿಬಿಟಿ ಮೂಲಕ ಪರಿಹಾರಧನ ವಿತರಣೆ

ಶ್ರೀನಾಥ ಮರಕುಂಬಿ

ಕರ್ನಾಟಕ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮ ನಿಯಮಿತ ವತಿಯಿಂದ ಕೊಪ್ಪಳದಲ್ಲಿ ಸೆಪ್ಟೆಂಬರ್ 1 ರಂದು ಏರ್ಪಡಿಸಲಾಗಿದ್ದ ಕಾರ್ಯಕ್ರಮದಲ್ಲಿ ಪಶುಸಂಗೋಪನೆ ಇಲಾಖೆಯ ಸಚಿವರಾದ ಪ್ರಭು ಚವ್ಹಾಣ್ ಅವರು 'ಅನುಗ್ರಹ ಕೊಡುಗೆ ಯೋಜನೆ'ಯಡಿ ಕುರಿ / ಮೇಕೆ ಸಾಕಾಣಿಕೆ ಫಲಾನುಭವಿಗಳಿಗೆ ಪರಿಹಾರ ವಿತರಣೆ ಹಾಗೂ ಕುರಿ ಮತ್ತು ಉಣ್ಣೆ ಉತ್ಪಾದಕರ ಸಹಕಾರ ಸಂಘಕ್ಕೆ ಒಂದಾವರ್ತಿ ಪ್ರೋತ್ಸಾಹಧನದ ಚೆಕ್ ವಿತರಣೆ ಮಾಡಿದರು. ಕಾರ್ಯಕ್ರಮದಲ್ಲಿ ಸಂಸದರಾದ ಸಂಗಣ್ಣ ಕರಡಿ, ಕರ್ನಾಟಕ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮದ ಅಧ್ಯಕ್ಷರಾದ ಶರಣು ತಳ್ಳಿಕೇರಿ ಅವರು ಉಪಸ್ಥಿತರಿದ್ದರು.

ರಾಜ್ಯದಲ್ಲಿ ಒಟ್ಟು 172 ಲಕ್ಷ ಕುರಿ, ಮೇಕೆಗಳಿವೆ. ಅದರಲ್ಲಿ 110 ಲಕ್ಷ ಕುರಿಗಳು ಮತ್ತು 62 ಲಕ್ಷ ಮೇಕೆಗಳಿದ್ದು, ಸುಮಾರು 12 ಲಕ್ಷ ಕುಟುಂಬಗಳು ಕುರಿ–ಮೇಕೆ ಸಾಕಾಣಿಕೆಯಲ್ಲಿ ತೊಡಗಿಸಿಕೊಂಡಿವೆ. ಇನ್ನು



Download From : www.kpscvaani.com



ಕೊಪ್ಪಳ ಜಿಲ್ಲೆಯಲ್ಲಿ 6,26,282 ಕುರಿಗಳು, 1,72,941 ಮೇಕೆಗಳಿದ್ದು, 8 ಲಕ್ಷ ಕುರಿ, ಮೇಕೆಗಳಿವೆ. ಜಿಲ್ಲೆಯಲ್ಲಿ ಶೇ. 97 ರಷ್ಟು ಕುರಿ ಸಾಕಾಣಿಕೆದಾರರು ಗ್ರಾಮೀಣ ಭಾಗದವರೇ ಆಗಿದ್ದು, ಅವರ ಜೀವನಾಧಾರಕ್ಕೆ ಕುರಿ ಸಾಕಾಣಿಕೆ ಮಹತ್ವದ ಪಾತ್ರ ವಹಿಸಿದೆ.

ಕೊರೊನಾ ಸಂಕಷ್ಟದಲ್ಲಿ ತಾತ್ಕಾಲಿಕವಾಗಿ ಸ್ಥಗಿತಗೊಂಡಿದ್ದ ಅನುಗ್ರಹ ಕೊಡುಗೆ ಯೋಜನೆಯನ್ನು ಮುಂದುವರೆಸಲು ಸರ್ಕಾರ ಸಹಕಾರ ನೀಡಿದೆ. ಮಧ್ಯವರ್ತಿಗಳ ಹಾವಳಿಯನ್ನು ತಪ್ಪಿಸಲು ಫಲಾನುಭವಿಗಳಿಗೆ ಡಿ.ಬಿ.ಟಿ ಮೂಲಕ ನೇರವಾಗಿ ಅವರ ಖಾತೆಗೆ ಹಣವನ್ನು ಜಮಾವಣೆ ಮಾಡಲಾಗುತ್ತಿದೆ. ಮತ್ತು ಕರ್ನಾಟಕ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮ ನಿಯಮಿತದ ವತಿಯಿಂದ ಕುರಿ ಮತ್ತು ಉಣ್ಣೆ ಉತ್ಪಾದಕರ ಸಹಕಾರ ಸಂಘಗಳಿಗೆ ಒಂದಾವರ್ತಿ ಪ್ರೋತ್ಸಾಹ ಧನ, ನೂತನ ತಳಿ ಸಂವರ್ಧನಾ ಕೇಂದ್ರಗಳ ಸ್ಥಾಪನೆ, ವಿಶೇಷ ಘಟಕಗಳ ಯೋಜನೆ, ಗಿರಿಜನ ಉಪ ಯೋಜನೆ, ಸಂಚಾರಿ ಮಾಂಸ ಮಾರಾಟ ಮಳಿಗೆ, ರೈತ ಉತ್ಪಾದಕರ ಸಂಸ್ಥೆ (ಎಫ್.ಪಿ.ಒ), ವಲಸೆ ಕುರಿಗಾರರಿಗೆ ಪರಿಕರ ಕಿಟ್ ವಿತರಣೆಯಂತಹ ಸವಲತ್ತುಗಳನ್ನು ಒದಗಿಸಲಾಗಿದೆ.

2020–21 ನೇ ಸಾಲಿನಲ್ಲಿ ಆಕಸ್ಮಿಕವಾಗಿ ಮರಣ ಹೊಂದಿದ ಕುರಿ, ಮೇಕೆಗಳಿಗೆ ಒಟ್ಟು ರೂ. 39.18 ಕೋಟಿ ಬಿಡುಗಡೆಗೊಳಿಸಿದ್ದು, ಕೊಪ್ಪಳ ಜಿಲ್ಲೆಗೆ

**ಅನುಗ್ರಹ ಕೊಡುಗೆ ಯೋಜನೆಯಡಿ ಆಕಸ್ಮಿಕ ಮರಣ ಹೊಂದಿದ 3 ರಿಂದ 6 ತಿಂಗಳ ಕುರಿ ಮತ್ತು ಮೇಕೆ ಮರಿಗಳಿಗೆ ರೂ. 2500 ಹಾಗೂ 6 ತಿಂಗಳ ಮೇಲ್ಪಟ್ಟ ಕುರಿ, ಮೇಕೆಗಳಿಗೆ ರೂ. 5000 ಗಳನ್ನು 2013–14 ನೇ ಸಾಲಿನಿಂದ ನೀಡಲಾಗುತ್ತಿದ್ದು, 2019–20 ನೇ ಸಾಲಿನವರೆಗೆ ರೂ. 87.67 ಕೋಟಿಗಳ ಪರಿಹಾರಧನ ನೀಡಲಾಗಿದೆ. 2020–2021ನೇ ಸಾಲಿನಲ್ಲಿ ಒಂದೇ ವರ್ಷದಲ್ಲಿ ಸರ್ಕಾರ ರೂ. 39.18 ಕೋಟಿಗಳನ್ನು ಪರಿಹಾರಧನ ನೀಡಲು ಬಿಡುಗಡೆ ಮಾಡಿರುತ್ತದೆ.**

ಇಲ್ಲಿಯವರೆಗೆ ಒಟ್ಟು ರೂ. 4.52 ಕೋಟಿ ಮಂಜೂರಾತಿ ನೀಡಲಾಗಿದೆ. ಕುರಿ,ಮೇಕೆ ಸಾಕಣೆಯಲ್ಲಿ ರಾಜ್ಯವು 5 ನೇ ಸ್ಥಾನದಲ್ಲಿದ್ದು, ಕುರಿಗಾಹಿಗಳಿಗೆ ತಮ್ಮ ಕಾರ್ಯದಲ್ಲಿ ತೊಡಗಲು ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮದ ವತಿಯಿಂದ ಸರ್ಕಾರ ಪ್ರೋತ್ಸಾಹ ನೀಡುತ್ತಿದೆ.

ಅನುಗ್ರಹ ಕೊಡುಗೆ ಯೋಜನೆಯಡಿ ಆಕಸ್ಮಿಕ ಮರಣ ಹೊಂದಿದ 3 ರಿಂದ 6 ತಿಂಗಳ ಕುರಿ ಮತ್ತು ಮೇಕೆ ಮರಿಗಳಿಗೆ ರೂ. 2500 ಹಾಗೂ 6 ತಿಂಗಳ ಮೇಲ್ಪಟ್ಟ ಕುರಿ, ಮೇಕೆಗಳಿಗೆ ರೂ. 5000 ಗಳನ್ನು 2013–14 ನೇ ಸಾಲಿನಿಂದ ನೀಡಲಾಗುತ್ತಿದ್ದು, 2019–20 ನೇ ಸಾಲಿನವರೆಗೆ ರೂ. 87.67 ಕೋಟಿಗಳ ಪರಿಹಾರಧನ ನೀಡಲಾಗಿದೆ. 2020–





Download From : www.kpscvaani.com

**ರಾಜ್ಯ ಸರ್ಕಾರವು ಪ್ರಸಕ್ತ ಸಾಲಿನಲ್ಲಿ ಕುರಿ ಮತ್ತು ಮೇಕೆ ತಳಿಗಳ ಅಭಿವೃದ್ಧಿಗಾಗಿ ಒಂದು ಕೋಟಿ ರೂ ಅನುದಾನದಲ್ಲಿ ಕೊಪ್ಪಳ ಜಿಲ್ಲೆಯಲ್ಲಿ 'ನಾರಿ ಸುವರ್ಣ ತಳಿ' ಮತ್ತು ಚಿತ್ರದುರ್ಗ ಜಿಲ್ಲೆಯಲ್ಲಿ 'ನಂದಿದುರ್ಗ' ಮೇಕೆ ಸಂವರ್ಧನಾ ಕೇಂದ್ರವನ್ನು ಪಿ.ಪಿ.ಪಿ ಮಾದರಿಯಲ್ಲಿ ಸ್ಥಾಪನೆ ಮಾಡಲು ಕ್ರಮವಹಿಸುತ್ತಿದೆ.**



2021ನೇ ಸಾಲಿನಲ್ಲಿ ಒಂದೇ ವರ್ಷದಲ್ಲಿ ಸರ್ಕಾರ ರೂ. 39.18 ಕೋಟಿಗಳನ್ನು ಪರಿಹಾರಧನ ನೀಡಲು ಬಿಡುಗಡೆ ಮಾಡಿರುತ್ತದೆ. ಹಾಗಾಗಿ 70 ಸಾವಿರ ಫಲಾನುಭವಿಗಳಿಗೆ ರೂ. 39.18 ಕೋಟಿಗಳನ್ನು ನೇರವಾಗಿ ಫಲಾನುಭವಿಗಳ ಖಾತೆಗೆ ಡಿ.ಬಿ.ಟಿ ಮುಖಾಂತರ ಜಮಾ ಮಾಡಲಾಗುತ್ತಿದೆ.

**ಕುರಿ ಮತ್ತು ಉಣ್ಣೆ ಉತ್ಪಾದಕರ ಸಹಾಕರ ಸಂಘಗಳಿಗೆ ಒಂದಾವರ್ತಿ ಪ್ರೋತ್ಸಾಹಧನ:**

ನಿಗಮದಲ್ಲಿ ಸಂಯೋಜನೆಗೊಂಡಿರುವ 647 ಸಂಘಗಳಲ್ಲಿ, ಇಲ್ಲಿಯವರೆಗೆ 348 ಸಂಘಗಳಿಗೆ ಪ್ರತಿ ಸಂಘಕ್ಕೆ ಅವುಗಳ ಬಲವರ್ಧನೆಗಾಗಿ ರೂ.5 ಲಕ್ಷಗಳ ಒಂದಾವರ್ತಿ ಪ್ರೋತ್ಸಾಹಧನ ನೀಡಲಾಗುತ್ತಿದೆ. ಇಲ್ಲಿಯವರೆಗೆ ಒಟ್ಟು ರೂ. 17.40 ಕೋಟಿ ನೀಡಲಾಗಿದೆ.

**ನೂತನ ತಳಿ ಸಂವರ್ಧನಾ ಕೇಂದ್ರಗಳ ಸ್ಥಾಪನೆ:**

ಕುರಿ, ಮೇಕೆ ತಳಿಗಳ ಅಭಿವೃದ್ಧಿಗಾಗಿ ಕೊಪ್ಪಳ ಜಿಲ್ಲೆಯಲ್ಲಿ 'ನಾರಿ ಸುವರ್ಣ ತಳಿ' ಸಂವರ್ಧನಾ ಕೇಂದ್ರವನ್ನು ಪಿ.ಪಿ.ಪಿ ಮಾದರಿಯಲ್ಲಿ ಹಾಗೂ ಚಿತ್ರದುರ್ಗ ಜಿಲ್ಲೆಯಲ್ಲಿ 'ನಂದಿದುರ್ಗ' ಮೇಕೆ ಸಂವರ್ಧನಾ ಕೇಂದ್ರ ಸ್ಥಾಪನೆ ಮಾಡಲಾಗುತ್ತಿದ್ದು, ಇದಕ್ಕೆ ರೂ. 1 ಕೋಟಿ ಅನುದಾನವನ್ನು ನಿಗದಿಪಡಿಸಲಾಗಿದ್ದು, ಪ್ರಸಕ್ತ ಸಾಲಿನಲ್ಲಿ ಕೇಂದ್ರಗಳನ್ನು ಸ್ಥಾಪಿಸಲಾಗುವುದು.

**ವಿಶೇಷ ಘಟಕ ಯೋಜನೆ, ಗಿರಿಜನ ಉಪಯೋಜನೆ:**

ಪ್ರಸಕ್ತ ಸಾಲಿನಲ್ಲಿ ಕುರಿ, ಮೇಕೆಗಳ (6+1) ಘಟಕಗಳನ್ನು ಸ್ಥಾಪಿಸಲು ಪ್ರತಿ ಫಲಾನುಭವಿಗಳಿಗೆ ರೂ. 40,500 ಸಹಾಯಧನದಲ್ಲಿ 400 ಫಲಾನುಭವಿಗಳಿಗೆ ಒಟ್ಟು ರೂ. 1.62 ಕೋಟಿ ಸಹಾಯಧನ ನೀಡಲಾಗುತ್ತಿದೆ.

**ಆರ್.ಕೆ.ವಿ.ವೈ (ರಾಷ್ಟ್ರೀಯ ಕೃಷಿ ವಿಕಾಸ್ ಯೋಜನೆ) ಯೋಜನೆ:**

ಪ್ರಸಕ್ತ ಸಾಲಿನಲ್ಲಿ ಕುರಿ, ಮೇಕೆಗಳ (10+1) ಘಟಕಗಳನ್ನು ಸ್ಥಾಪಿಸಲು ಪ್ರತಿ ಫಲಾನುಭವಿಗಳಿಗೆ ರೂ. 35,000 ಗಳಂತೆ, 1500 ಫಲಾನುಭವಿಗಳಿಗೆ ಒಟ್ಟು ರೂ. 5.25 ಕೋಟಿ ಸಹಾಯಧನವನ್ನು ನೀಡಲಾಗುತ್ತಿದೆ.

**ಸಂಚಾರಿ ಮಾಂಸ ಮಾರಾಟ ಮಳಿಗೆ:**

ಮಾಂಸ ಮತ್ತು ಮಾಂಸದಿಂದ ತಯಾರಾದ ಖಾದ್ಯ ಪದಾರ್ಥಗಳಿಗೆ ಮಾರುಕಟ್ಟೆ ಒದಗಿಸುವ ಉದ್ದೇಶಕ್ಕಾಗಿ 200 ಕುರಿ ಮತ್ತು ಉಣ್ಣೆ ಉತ್ಪಾದಕರ ಸಹಕಾರ ಸಂಘಗಳಿಗೆ ಸುಸಜ್ಜಿತ ಸಂಚಾರಿ ವಾಹನವನ್ನು ಖರೀದಿಸಲು ಪ್ರತಿ ಸಂಘಕ್ಕೆ ರೂ.55 ಲಕ್ಷಗಳ ಸಹಾಯಧನ ನೀಡಲಾಗುತ್ತಿದ್ದು, ಒಟ್ಟು ಆರ್.ಕೆ.ವಿ.ವೈ ಯೋಜನೆಯಡಿ ರೂ. 11 ಕೋಟಿಗಳ ಅನುದಾನವನ್ನು ಒದಗಿಸಲಾಗಿದೆ.

**ರೈತ ಉತ್ಪಾದಕ ಸಂಸ್ಥೆ:**

ಕುರಿ, ಮೇಕೆಗಳ ಅಭಿವೃದ್ಧಿ ಸಂಬಂಧ 20 ರೈತ ಉತ್ಪಾದಕ ಸಂಸ್ಥೆಗಳನ್ನು ಪ್ರಾರಂಭಿಸಲು ಕುರಿಗಾರರಿಗೆ ಪ್ರತಿ ಸಂಸ್ಥೆಗೆ ರೂ. 26.52 ಲಕ್ಷಗಳ ಪ್ರೋತ್ಸಾಧನ ನೀಡಲಾಗುತ್ತಿದ್ದು, ರೂ. 5.30 ಕೋಟಿಗಳ ಅನುದಾನ ನೀಡಲಾಗುತ್ತಿದೆ.

**ವಲಸೆ ಕುರಿಗಾರರಿಗೆ ಪರಿಕರ ಕಿಟ್ ವಿತರಣೆ:**

ವಲಸೆ ಕುರಿಗಾರರ ರಕ್ಷಣೆಗಾಗಿ ಸಂಚಾರಿ ಟೆಂಟ್, ಸೋಲಾರ್ ಟಾರ್ಚ್, ಜರ್ಕಿನ್, ರಬ್ಬರ್ ಮ್ಯಾಟ್ ಒಳಗೊಂಡ ಪರಿಕರಗಳ ಕಿಟ್‌ಗಳನ್ನು ವಿತರಿಸಲಾಗುತ್ತಿದೆ. (ಪ್ರಸಕ್ತ ಸಾಲಿನಲ್ಲಿ 300 ಕಿಟ್‌ಗಳ ವಿತರಣೆ ಮಾಡಲಾಗುತ್ತಿದೆ)

ರೈತರು ಕುರಿಗಳ ಗೊಬ್ಬರವನ್ನು ಉಪಯೋಗಿಸಿದರೆ ಭೂಮಿಯು ಫಲವತ್ತತೆಯಿಂದ ಕೂಡಿರುತ್ತದೆ. ಆದರೆ, ಇಂದಿನ ದಿನಮಾನದಲ್ಲಿ ಜಾನುವಾರು ಸಾಕಾಣಿಕೆ ಪ್ರಮಾಣ ಇಳಿಕೆಯಾಗಿದೆ. ರೈತರ ಹಿತದೃಷ್ಟಿಯಿಂದ ಕುರಿಗಾಹಿಗಳಿಗೆ ಡಿಬಿಟಿ ಮೂಲಕ ಹಣ ಜಮಾವಣೆಗೆ ಚಾಲನೆ ನೀಡಿರುವುದು ಸಂತಸದ ಸಂಗತಿಯಾಗಿದೆ. ಸೌಲಭ್ಯಗಳನ್ನು ಜನರ ಮನೆ ಬಾಗಿಲಿಗೆ ತಲುಪಿಸಬೇಕು ಎನ್ನುವುದು ಸರ್ಕಾರದ ಧ್ಯೇಯ ಮತ್ತು ಸಂಕಲ್ಪವಾಗಿದೆ. ಆದರೆ ಸರ್ಕಾರದ ವಿವಿಧ ಯೋಜನೆಗಳನ್ನು ಸೂಕ್ತ ರೀತಿಯಲ್ಲಿ ಬಳಸಿಕೊಂಡು ಕುರಿ ಸಾಕಾಣೆಗಾರರು ತಮ್ಮ ಬದುಕನ್ನು ಹಸನು ಮಾಡಿಕೊಳ್ಳಬೇಕಿದೆ.



Download From : www.kpscvaani.com



# ಕೃಷಿ ಜಮೀನಿನಲ್ಲಿ ಅರಣ್ಯ ಕೃಷಿ ಮಾಡಲು ಪ್ರೋತ್ಸಾಹ ಧನ

ಸಂಧ್ಯಾ .ಪಿ



Download From : www.kpscvaani.com

**ಪ್ರಕೃತಿ ವಿಕೋಪದಿಂದ ಮತ್ತು ಮಣ್ಣಿನ ಸವಕಳಿಯಿಂದ ಕೃಷಿ ಜಮೀನು ಹಾಳಾಗುವುದನ್ನು ತಡೆಗಟ್ಟುವ ಸಲುವಾಗಿ ಸಾಮಾಜಿಕ ಅರಣ್ಯ ಯೋಜನೆಯಡಿ ಅರಣ್ಯ ಇಲಾಖೆಯು ರೈತರಿಗೆ 'ಕೃಷಿ ಅರಣ್ಯ ಪ್ರೋತ್ಸಾಹ' ಯೋಜನೆಯಡಿ ಪ್ರೋತ್ಸಾಹ ಧನವನ್ನು ನೀಡುವ ಮೂಲಕ ಅರಣ್ಯ ಕೃಷಿಯನ್ನು ಮಾಡಲು ಅನುಕೂಲ ಮಾಡಿಕೊಡುತ್ತಿದೆ.**

ಅರಣ್ಯ ರಕ್ಷಣೆ ಹಾಗೂ ಹಸಿರೀಕರಣ ಪರಿಕಲ್ಪನೆಯನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ ದೇಶದ ಕೆಲವೆಡೆ ಉತ್ತಮ ಪ್ರಯತ್ನಗಳು ನಡೆಯುತ್ತಿರುವುದು ಸ್ತುತ್ಯರ್ಹ. ಸಾಮಾಜಿಕ ಅರಣ್ಯ ಯೋಜನೆಯಡಿ ಅರಣ್ಯ ಇಲಾಖೆಯು ಕೃಷಿ ಪ್ರೋತ್ಸಾಹ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದು, ರೈತರು ತಮ್ಮ ಜಮೀನಿನಲ್ಲಿ ಸಸಿಗಳನ್ನು ನೆಟ್ಟು ಬೆಳೆಸಲು ಪ್ರೋತ್ಸಾಹ ಧನವನ್ನು ನೀಡುತ್ತಿದೆ. ರಾಜ್ಯದ ಹಲವು ರೈತರು ಇದರ ಪ್ರಯೋಜನ ಪಡೆದುಕೊಂಡು ಯಶಸ್ವಿಯಾಗಿ ತಮ್ಮ ಜಮೀನಿನಲ್ಲಿ ಅರಣ್ಯ ಕೃಷಿಯನ್ನು ಕೈಗೊಂಡಿದ್ದಾರೆ.

ಹಾಗಾಗಿ ರೈತರು ತಮ್ಮ ಜಮೀನಿನಲ್ಲಿ ಅರಣ್ಯ ಕೃಷಿ ಮಾಡಲು ಪ್ರೋತ್ಸಾಹ ಧನ ಪಡೆಯುವುದು ಹೇಗೆ? ಎಂಬುದರ ಕುರಿತು ಇಲ್ಲಿದೆ ಮಾಹಿತಿ.

ರೈತರು ತಮ್ಮ ಕೃಷಿ ಜಮೀನಿನಲ್ಲಿ ಬೆಳೆಗಳೊಂದಿಗೆ ಕಾಡು ಜಾತಿಯ ಗಿಡ ಮರಗಳನ್ನು ಬೆಳೆಸುವ ಪದ್ಧತಿಗೆ ಅರಣ್ಯ ಕೃಷಿ ಎಂದು ಕರೆಯಲಾಗುತ್ತದೆ. ಬೆಳೆಯೊಂದಿಗೆ ರೈತರು ಗಿಡ ಮರಗಳನ್ನು ಬೆಳೆಸಲು ರಿಯಾಯಿತಿ ದರದಲ್ಲಿ ಅಂದರೆ 1, 3, 5 ಲೆಕ್ಕಾಚಾರದಲ್ಲಿ ಸಸಿಗಳನ್ನು ನೀಡಲಾಗುತ್ತದೆ. ಈ ಸಸಿಗಳನ್ನು ಜಮೀನಿನಲ್ಲಿ ನೆಟ್ಟು ಪೋಷಿಸಬೇಕು. ಪೋಷಣೆಯಲ್ಲಿ ಬದುಕುಳಿದ ಸಸಿಗಳಿಗೆ ಸಹಾಯಧನ ನೀಡಲಾಗುತ್ತದೆ.

ರೈತರು ಮಳೆಗಾಲದಲ್ಲಿ ತಮ್ಮ ಕೃಷಿ ಚಟುವಟಿಕೆಗಳ ಜತೆಗೆ ಸಸಿ ಬೆಳೆಸಲು ಕೃಷಿ ಅರಣ್ಯ ಪ್ರೋತ್ಸಾಹ ಯೋಜನೆ ಸಹಕಾರಿಯಾಗಲಿದೆ. ಅರಣ್ಯ ಕೃಷಿ ಮಾಡಲು ಆಸಕ್ತಿ ಇರುವ ರೈತರು, ಅರಣ್ಯ ಇಲಾಖೆಯನ್ನು ಸಂಪರ್ಕಿಸಿ ಸಸಿಗಳನ್ನು ಪಡೆದು ತಮ್ಮ ಜಮೀನಿನಲ್ಲಿ ನೆಡಬೇಕು. ಸಸಿ ನೆಟ್ಟ ನಂತರ ನಿರ್ಲಕ್ಷ್ಯವಹಿಸದೆ ನೆಟ್ಟ ಗಿಡಗಳನ್ನು ಪೋಷಣೆ ಮಾಡುವುದು ರೈತರ ಕರ್ತವ್ಯವಾಗಿರುತ್ತದೆ.

**ರೈತರಿಗೆ ಭಾರೀ ಅನುಕೂಲ:**

ವೃಕ್ಷ ಮೂಲದ ಅವಶ್ಯಕತೆಗಳನ್ನು ತಮ್ಮ ಜಮೀನಿನಿಂದಲೇ ಪಡೆಯುವುದರಿಂದ ಅರಣ್ಯದ ಮೇಲಿನ ಒತ್ತಡ ಕಡಿಮೆ ಆಗುತ್ತದೆ. ಮರ ಬೆಳೆಸುವುದರಿಂದ ಪರಿಸರ ಸಂರಕ್ಷಣೆಯಲ್ಲಿ ಭಾಗಿಯಾಗುವ ಸಂತೃಪ್ತಿಯೂ ಸಿಗುತ್ತದೆ. ಜಮೀನು ಸುತ್ತಲೂ ಮರಗಳನ್ನು ಬೆಳೆಸುವುದರಿಂದ ರಭಸವಾಗಿ ಬೀಸುವ ಗಾಳಿಯನ್ನು ತಡೆಯುವುದರಿಂದ ಜಮೀನಿನಲ್ಲಿ ತೇವಾಂಶವನ್ನು ದೀರ್ಘಕಾಲ





> ಕೃಷಿ ಅರಣ್ಯ ಪ್ರೋತ್ಸಾಹ ಯೋಜನೆಯಡಿ ಸಸಿಯನ್ನು ಪಡೆದು ತಮ್ಮ ಜಮೀನಿನಲ್ಲಿ ಬೆಳೆಸಿ ಪೋಷಣೆ ಮಾಡಬೇಕು. ಪೋಷಣೆಯಲ್ಲಿ ಬದುಕಿದ ಸಸಿಗಳಿಗೆ ಮಾತ್ರ ಪ್ರೋತ್ಸಾಹ ಧನ ಸಿಗಲಿದೆ. ಅರಣ್ಯ ಕೃಷಿ ಕೈಗೊಳ್ಳಲು ಮಳೆಗಾಲವು ಅತ್ಯಂತ ಪ್ರಸಕ್ತ ಕಾಲವಾಗಿರುತ್ತದೆ.



Download From : www.kpscvaani.com

ಕಾಪಾಡಿಕೊಂಡು ಅಧಿಕ ಇಳುವರಿ ಪಡೆಯಲು ಸಹಕಾರಿಯಾಗುತ್ತದೆ. ಅಲ್ಲದೆ ಅಂತರ್ಜಲ ಹೆಚ್ಚುವುದಲ್ಲದೆ, ಮಣ್ಣಿನ ಸವಕಳಿ ತಡೆಯುತ್ತದೆ. ಗಿಡಮರಗಳು ಪ್ರಾಣಿ ಪಕ್ಷಿಗಳನ್ನು ಆಕರ್ಷಿಸಿ ಪರಾಗ ಸ್ಪರ್ಶಕ್ರಿಯೆಯಿಂದ ಹೆಚ್ಚಿನ ಇಳುವರಿ ಸಾಧ್ಯವಾಗುತ್ತದೆ.

**ಕೃಷಿಕರಿಗೆ ಗಿಡ ಬೆಳೆಸಿದರೆ ಪ್ರೋತ್ಸಾಹ ಧನ:**

ಕೃಷಿ ಅರಣ್ಯ ಯೋಜನೆಯಡಿ ರೈತರನ್ನು ಪ್ರೇರೆಪಿಸುವ ಸಲುವಾಗಿ ಪ್ರೋತ್ಸಾಹಗಳನ್ನು ನೀಡಲಾಗುತ್ತಿದೆ. ಸಸಿ ನೆಟ್ಟ ರೈತರಿಗೆ ವರ್ಷದ ನಂತರದಲ್ಲಿ ಸಸಿ ಬದುಕುಳಿದಲ್ಲಿ ಪ್ರತಿ ಸಸಿಗೆ ಮೊದಲ ವರ್ಷದಲ್ಲಿ 40 ರೂ., 2ನೇ ವರ್ಷದಲ್ಲಿ 30 ರೂ, 3ನೇ ವರ್ಷದಲ್ಲಿ 30 ರೂ. ಸಹಾಯಧನ ನೀಡಲಾಗುತ್ತದೆ. ಲಭ್ಯವಿರುವ ಭೂಮಿಗೆ ಸಂಬಂಧಿಸಿದಂತೆ ಕೃಷಿಕರು ಪಹಣಿ ಪತ್ರ ಹಾಗೂ ಇತರೆ ದಾಖಲೆಗಳನ್ನು ಹಾಜರು ಪಡಿಸಬೇಕು.

ಸಸಿ ಬೆಳೆಸಲು ಆಸಕ್ತಿ ಇರುವ ರೈತರು ತಮ್ಮ ಹೆಸರನ್ನು ಆಯಾ ತಾಲೂಕು ವಲಯ ಅರಣ್ಯಾಧಿಕಾರಿಗಳ ಕಚೇರಿಗಳಲ್ಲಿ ನೋಂದಾಯಿಸಿಕೊಳ್ಳಬೇಕು. ನಂತರ ಸಹಾಯಕ ಅರಣ್ಯಾಧಿಕಾರಿ ಮತ್ತು ವಲಯ ಅರಣ್ಯಾಧಿಕಾರಿಗಳ ಕಚೇರಿಯಲ್ಲಿ ಹಾಗೂ ಆಯಾ ಗ್ರಾಮ ಪಂಚಾಯತಿ ಕಚೇರಿಗಳಲ್ಲೂ ಸಸಿಗಳನ್ನು ವಿತರಿಸುವ ವ್ಯವಸ್ಥೆ ಮಾಡಲಾಗುತ್ತದೆ. ಕೃಷಿ ಚಟುವಟಿಕೆಯೊಂದಿಗೆ ಗಿಡ ಮರ ಬೆಳೆಸುವ ಇಂಥ ಉತ್ತಮ ಯೋಜನೆಗೆ ರೈತರು ಮುಂದಾದರೆ ಇಲಾಖೆಯ ಉದ್ದೇಶ ಸಾಕಾರಗೊಂಡು ನಿಸರ್ಗದ ಅಭಿವೃದ್ಧಿಗೆ ಉತ್ತಮ ಕೊಡುಗೆ ನೀಡಿದಂತಾಗುತ್ತದೆ.

> **ಸಸಿ ಬೆಳೆಸಲು ಆಸಕ್ತಿ ಇರುವ ರೈತರು ತಮ್ಮ ಹೆಸರನ್ನು ಆಯಾ ತಾಲೂಕು ವಲಯ ಅರಣ್ಯಾಧಿಕಾರಿಗಳ ಕಚೇರಿಗಳಲ್ಲಿ ನೋಂದಾಯಿಸಿಕೊಳ್ಳಬೇಕು. ನಂತರ ಸಹಾಯಕ ಅರಣ್ಯಾಧಿಕಾರಿ ಮತ್ತು ವಲಯ ಅರಣ್ಯಾಧಿಕಾರಿಗಳ ಕಚೇರಿಯಲ್ಲಿ ಹಾಗೂ ಆಯಾ ಗ್ರಾಮ ಪಂಚಾಯತಿ ಕಚೇರಿಗಳಲ್ಲೂ ಸಸಿಗಳನ್ನು ವಿತರಿಸುವ ವ್ಯವಸ್ಥೆ ಮಾಡಲಾಗುತ್ತದೆ.**

**ವಿವಿಧ ಜಾತಿಯ ಸಸ್ಯಗಳು ಲಭ್ಯ:**

ಬಹುಮುಖ್ಯವಾಗಿ ನೇರಳೆ, ಬೆತ್ತ, ಸಾಗುವಾನಿ, ರಕ್ತಚಂದನ, ಮಹಾಗನಿ, ದಾಲಿಛಿನ್ನಿ, ಹಲಸು, ಬಾದಾಮಿ, ಕಿರಾಲು ಭೋಗಿ, ರಾಂಪತ್ರೆ, ಹೆಬ್ಬೇವು, ಅಂಟುವಾಳ, ಬೇಂಗ, ಹೊಂಗೆ, ನಾಗಲಿಂಗ ಪುಷ್ಪ, ಹೊಳೆ ದಾಸವಾಳ, ಕಕ್ಕೆ, ಬೀಟೆ, ನಾಟಿ ಮಾವು, ಅಶೋಕ, ಬಿಲ್ವಪತ್ರೆ, ನೆಲ್ಲಿ, ಪುನರ್ಪುಳಿ, ಮುತ್ತುಗ, ಶ್ರೀಗಂಧ, ಸಂಪಿಗೆ, ಶಿವಾನಿ, ಬೊಲ್ದಾರ, ಮುರಿಯ, ಸಳ್ಳೆ, ರೆಂಜ ಜಾತಿಯ ವಿವಿಧ ಸಸ್ಯಗಳು ಅರಣ್ಯ ಇಲಾಖೆಯಲ್ಲಿ ಅರಣ್ಯಾಭಿವೃದ್ಧಿಗಾಗಿ ಲಭ್ಯವಿರುತ್ತದೆ.

**ವನಮಹೋತ್ಸವ:**

ಪ್ರತಿ ವರ್ಷದಂತೆ ಈ ಬಾರಿಯೂ ಶಿಕ್ಷಣ ಸಂಸ್ಥೆಗಳು, ಸಂಘ ಸಂಸ್ಥೆಗಳ ಸಹಯೋಗದಲ್ಲಿ ವನಮಹೋತ್ಸವ ಹಮ್ಮಿಕೊಳ್ಳಲು ಅರಣ್ಯ ಇಲಾಖೆ ಉದ್ದೇಶಿಸಿದೆ. ಹಿಂದೆ ಮನೆಗೊಂದು ಮರ ಎಂದು ಇದ್ದುದನ್ನು ಈಗ ಮಗುವಿಗೊಂದು ಮರ, ಶಾಲೆಗೊಂದು ವನ, ಎಂದು ಹೇಳುವ ಮೂಲಕ ಹಸಿರು ಕರ್ನಾಟಕ ಯೋಜನೆಯಡಿ ಸರಕಾರಿ ಸ್ಥಳಗಳಲ್ಲಿ ಸಸಿ ನೆಡಲು ಅರಣ್ಯ ಇಲಾಖೆ ಸಿದ್ಧತೆಯನ್ನು ಮಾಡಿಕೊಂಡಿದೆ. ಮತ್ತಷ್ಟು ಯೋಜನೆಗಳನ್ನು ಮುಂದಿನ ದಿನಗಳಲ್ಲಿ ರೂಪಿಸುವುದು ಇಲಾಖೆಯ ಉದ್ದೇಶವಾಗಿದೆ.

**ಮನೆ ಪರಿಸರದಲ್ಲೂ ಬೆಳೆಸಿರಿ :**

ಸಸಿಗಳನ್ನು ಗಾತ್ರದ ಅನುಸಾರ 3-5 ರೂ.ವರೆಗೆ ಮಾರಾಟ ಮಾಡಲಾಗುತ್ತದೆ. ಸಾರ್ವಜನಿಕರೂ ಕೂಡ ತಮ್ಮ ಮನೆ ಸುತ್ತ ನೆಡಲು ಅರಣ್ಯ ಇಲಾಖೆಯ ನರ್ಸರಿಯಿಂದ ಸಸಿಗಳನ್ನು ಪಡೆಯಬಹುದು.

**ರೈತರು ಕೊಡಬೇಕಾದ ದಾಖಲಾತಿಗಳು:**

ಈ ಯೋಜನೆಯಡಿ ಪ್ರೋತ್ಸಾಹ ಧನವನ್ನು ಪಡೆಯಲು ದಾಖಲೆಗಾಗಿ ಕೃಷಿಕರು ತಮ್ಮ ಆಧಾರ್ ಕಾರ್ಡ್ ಜೆರಾಕ್ಸ್, ಬ್ಯಾಂಕ್ ಖಾತೆ ಮಾಹಿತಿ, ಪಹಣಿ ಪತ್ರದ ನಕಲು ಪ್ರತಿ, ಎರಡು ಪಾಸ್‌ಪೋರ್ಟ್ ಅಳತೆಯ ಫೋಟೊ ನೀಡಬೇಕು. ಈ ಪ್ರೋತ್ಸಾಹ ಧನದಿಂದ ರೈತರು ಸಸಿಗಳನ್ನು ಪಡೆಯಲು ಹಾಗೂ ನೆಡಲು ತಗಲುವ ಖರ್ಚು ಅನ್ನು ತುಂಬಿಕೊಳ್ಳಬಹುದು. ಅಲ್ಲದೆ, ರೈತರು ಈ ಯೋಜನೆಯಿಂದ ಬೆಳೆಸಿದ ಮರಗಳಿಂದ ಸಿಗುವಂತಹ ಹಣ್ಣು, ಬೀಜ, ಮೇವು, ಉರುವಲು, ಮರಮಟ್ಟು, ಇತ್ಯಾದಿಗಳನ್ನು ಪಡೆಯಲು ಅರ್ಹರಿರುತ್ತಾರೆ.

ತಮ್ಮ ಕೃಷಿ ಭೂಮಿಯಲ್ಲಿ ಅರಣ್ಯಾಭಿವೃದ್ಧಿ ಕೈಗೊಳ್ಳಲು ಆಸಕ್ತಿ ಇರುವ ಕೃಷಿಕರು ಹೆಚ್ಚಿನ ಮಾಹಿತಿಗೆ ಆಯಾ ತಾಲೂಕು ವಲಯ ಅರಣ್ಯಾಧಿಕಾರಿಗಳ ಕಚೇರಿಯನ್ನು ಸಂಪರ್ಕಿಸಬಹುದು.

**ಕೃಷಿಕರಿಗೆ ಕೃಷಿ ಅರಣ್ಯ ಪ್ರೋತ್ಸಾಹ ಯೋಜನೆಯು ಒಂದು ರೀತಿಯಲ್ಲಿ ಬೋನಸ್ ರೂಪದಲ್ಲಿ ಆದಾಯಕ್ಕೆ ದಾರಿ ಮಾಡಿಕೊಡುತ್ತದೆ. ಆದ್ದರಿಂದ ಈ ಯೋಜನೆಯಡಿ ಪ್ರತಿ ವರ್ಷ ಅರಣ್ಯ ಇಲಾಖೆಯಿಂದ ಪ್ರೋತ್ಸಾಹಧನ ಪಡೆದುಕೊಂಡು ಪ್ರಮುಖ ಕೃಷಿಯ ಜೊತೆಗೆ ಅರಣ್ಯ ಕೃಷಿಯನ್ನು ಮಾಡುವ ಮೂಲಕ ಪ್ರಕೃತಿ ವಿಕೋಪ ಮತ್ತು ಮಣ್ಣಿನ ಸವಕಳಿಯಿಂದ ತಮ್ಮ ಜಮೀನು ಹಾಳಾಗದಂತೆ ಕಾಪಾಡಿಕೊಳ್ಳಬಹುದು.**

**ರಾಜ್ ಕಿಶೋರ್ ಸಿಂಗ್**
ರಾಜ್ಯ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಅಭಿವೃದ್ಧಿ)



Download From : www.kpscvaani.com

# ಯುವ ಕೃಷಿಕನ ಕೈ ಹಿಡಿದ ಸಮಗ್ರ ಬೇಸಾಯ ಪದ್ಧತಿ

**ಕೃಷಿತೋ ನಾಸ್ತಿ ದುರ್ಭಿಕ್ಷಂ ಎನ್ನುವಂತೆ ಕೃಷಿಯನ್ನು ಮನಃಪೂರ್ವಕವಾಗಿ ಸ್ವೀಕರಿಸಿದರೆ ಎಂದೂ ಬರಗಾಲ ಎದುರಾಗದು ಎನ್ನುವುದಕ್ಕೆ ಸಮಗ್ರ ಬೇಸಾಯದಲ್ಲಿ ತೊಡಗಿರುವ ಯುವ ಕೃಷಿಕ ಎಲ್ಲರಿಗೂ ಪ್ರೇರಣೆಯಾಗುತ್ತಾರೆ.**






ಸಾಗರ ಎಮ್. ಬಾಗೇವಾಡಿ

ಮಾನವನ ಉಳಿವಿಗಾಗಿ ಮತ್ತು ದನಕರುಗಳ ಉಳಿವಿಗಾಗಿ ಅಂದರೆ, ಒಟ್ಟಾರೆ ಜೀವಸಂಕುಲ ಸಂಪತ್ತು ಭರಿತವಾಗಿರಬೇಕೆಂದರೇ ವ್ಯವಸಾಯ, ನೀರು, ಭೂಮಿ, ಬೆಳಕು ಮತ್ತು ಇತರೆ ಸಂಪನ್ಮೂಲಗಳ ಪಾತ್ರ ಬಹಳ ಮುಖ್ಯವಾಗಿದೆ. ಮಾನವನ ಆರ್ಥಿಕತೆ ಸುಧಾರಿಸುವಲ್ಲಿ ಏಕಬೆಳೆ ಒಂದೇ ಅಲ್ಲದೆ ಬಹುಬೆಳೆ ಪದ್ಧತಿ, ಹೈನುಗಾರಿಕೆ, ರೇಷ್ಮೆಸಾಕಾಣಿಕೆ, ಮೀನುಸಾಕಾಣಿಕೆ, ಇತರ ಉಪಕಸಬುಗಳು ಮುಖ್ಯವಾದ ಪಾತ್ರವಹಿಸುತ್ತವೆ. ಮತ್ತು ರಾಸಾಯನಿಕ ಕೀಟನಾಶಕಗಳ ಬಳಕೆ ಕಡಿಮೆಗೊಳಿಸಿ ಸಾವಯವ ಜನ್ಯ ಕೀಟನಾಶಕ ಬಳಕೆಯಿಂದ ಉತ್ತಮ ಪರಿಸರ ನಿರ್ಮಿಸಬಹುದು.

ವಿಜಯಪುರ ಜಿಲ್ಲೆ ಬಸವನಬಾಗೇವಾಡಿ ತಾಲ್ಲೂಕಿನ ಮನಗೂಳಿ ಗ್ರಾಮದ ಯುವ ಕೃಷಿಕ ರಾಜು ಶಿವಪ್ಪ ಜೋಗಿ ಇವರು ಕೃಷಿಯಲ್ಲಿ ತುಂಬಾ ಆಸಕ್ತಿವುಳ್ಳವರಾಗಿದ್ದಾರೆ.

ಇವರು ಒಟ್ಟು 7 ಎಕರೆ 33 ಗುಂಟೆ ಜಮೀನು ಹೊಂದಿದ್ದು, ಈ ಜಮೀನಿನಲ್ಲಿ 3 ಎಕರೆ ರೇಷ್ಮೇ ಬೆಳೆ, 2 ಗೋವಿನ ಜೋಳ, 1 ಎಕರೆ ತೊಗರಿ ಮತ್ತು ಔಷಧೀಯ ಸಸ್ಯವಾದ 'ಲಕ್ಷ್ಮಣಫಲ' ಮಿಶ್ರ ಬೆಳೆಯಾಗಿ 20ಗುಂಟೆ ಪ್ರದೇಶದಲ್ಲಿ ಸುಗಂಧರಾಜ ಉಳಿದ ಜಮೀನಿನಲ್ಲಿ 100 ಮಾವು ಮತ್ತು 100 ಪೇರಲ ಇದರ ಜೊತೆಗೆ ತರಕಾರಿ ಬೆಳೆ ಬೆಳೆದಿದ್ದಾರೆ.

ಇದಲ್ಲದೇ ಸ್ವತಃ ವಿನೂತನ ಮಾದರಿಯಲ್ಲಿ ಕೃಷಿ ಉಪಕರಣಗಳನ್ನು ತಯಾರಿಸಿ ತಮ್ಮ ಜಮೀನಿನಲ್ಲಿ ಬಳಸುತ್ತಿದ್ದಾರೆ. ಅವುಗಳೆಂದರೇ, ಪೆಟ್ರೋಲ್ ಪಂಪ್ ಸ್ಪ್ರೇಯರ್ ಅನ್ನು ಕಚ್ಚಾ ವಸ್ತುಗಳಾದ ಸೈಕಲ್ ರಿಮ್ ಮತ್ತು ಪೈಪ್ ಫ್ರೇಮ್‌ನಿಂದ ತಯಾರಿಸಿದ್ದಾರೆ. ಡ್ರಿಪ್ ಪೈಪ್ ಸುತ್ತುವ ಯಂತ್ರ ಮತ್ತು ವೈಜ್ಞಾನಿಕ ಮಾದರಿಯಲ್ಲಿ ಸೈಕಲ್‌ನಿಂದ ತಯಾರಿಸಿದ ಬಿತ್ತುವ ಕೂರಿಗೆ ಬಳಸುತ್ತಿದ್ದಾರೆ. ಇದರೊಂದಿಗೆ ಐದರಿಂದ ಆರು ಜಾನುವಾರುಗಳನ್ನು ಹೊಂದಿದ್ದು ಇದರಿಂದ ಸಿಗುವ ಕಚ್ಚಾವಸ್ತುಗಳಾದ ಮೂತ್ರದಿಂದ ಜೀವಾಮೃತ ತಯಾರಿಸಿ ಬೆಳೆಗಳಿಗೆ ಸೂಕ್ತ ಪ್ರಮಾಣದಲ್ಲಿ ಸಿಂಪರಣೆ ಮಾಡುತ್ತಾರೆ. ಇದರಿಂದ ರೋಗ ಮತ್ತು ಕೀಟಗಳ ನಿರ್ವಹಣೆಯನ್ನು ಮಾಡಲಾಗುತ್ತದೆ. ಸಗಣಿಯಿಂದ ಕಾಂಪೋಸ್ಟ್ ಗೊಬ್ಬರ, ತಿಪ್ಪೆಗೊಬ್ಬರಗಳನ್ನು ಬೆಳೆಗಳಿಗೆ ಪೂರೈಸುತ್ತಾರೆ. ಮಣ್ಣು ಸಂರಂಕ್ಷಣೆಗಾಗಿ, ಮಣ್ಣಿನ ಸವಕಳಿ ತಡೆಗಟ್ಟಲು ಜಮೀನಿನ ಬದುವಿನ ಸುತ್ತ ಹಸಿರೆಲೆ ಗೊಬ್ಬರದ ಗಿಡಗಳನ್ನು ಬೆಳೆಸಿದ್ದಾರೆ. ಬೆಳೆಗಳ ರಾಶಿಯಾದ ನಂತರ ಉಳಿದ ಕಸ-ಕಡ್ಡಿ, ಬುಡಚಿ ಬಳಸಿಕೊಂಡು ಬೆಳೆಗಳಿಗೆ "ಮೆಲುಹೊದಿಕೆ"ಯಾಗಿ ಉಪಯೋಗಿಸಿಕೊಂಡು ಬೆಳೆಗಳಿಗೆ ಸೂಕ್ತ ತೇವಾಂಶ ಒದಗುವಂತೆ ಮಾಡಿದ್ದಾರೆ.

ನೀರು ಸಂರಕ್ಷಣೆಗಾಗಿ ಕೃಷಿ ಇಲಾಖೆಯ ಯೋಜನೆಯಾದ "ಕೃಷಿ ಭಾಗ್ಯ" ಯೋಜನೆಯಡಿ ಕೃಷಿಹೊಂಡ ನಿಮಿಸಿಕೊಂಡು ನೀರಿನ ಸಮರ್ಪಕ ನಿರ್ವಹಣೆ ಮಾಡುತ್ತಿದ್ದಾರೆ. ಇದರ ಜೊತೆ ಸೂಕ್ತ ಮಾರುಕಟ್ಟೆ ವ್ಯವಸ್ಥೆ ಮಾಡಿಕೊಂಡಿದ್ದಾರೆ. ವಾರ್ಷಿಕ ಸರಾಸರಿ 4.5 ಲಕ್ಷ ರೂ ಆದಾಯ ಹೊಂದಿದ್ದಾರೆ. ಮತ್ತು ರೇಷ್ಮೆ ಸಾಕಾಣಿಕೆಯಿಂದ ಉತ್ತಮ ಆದಾಯ ಪಡೆಯುತ್ತಿದ್ದಾರೆ.

ಕೃಷಿ ಇಲಾಖೆ ಆತ್ಮ ಯೋಜನೆ ಮತ್ತು ಕೃಷಿ ವಿಶ್ವವಿದ್ಯಾಲಯಗಳು ಏರ್ಪಡಿಸುವ ತರಬೇತಿ ಮತ್ತು ಚರ್ಚಾಗೋಷ್ಠಿಗಳ ಮೂಲಕ ದೊರೆಯುವ ವೈಜ್ಞಾನಿಕ ಪದ್ಧತಿಗಳ ಮಾಹಿತಿಯನ್ನು ತಮ್ಮ ಜಮೀನಿನಲ್ಲಿ ಅಳವಡಿಸಿಕೊಂಡಿದ್ದಾರೆ. ಇವರು ಕೃಷಿಯಲ್ಲಿ ಮಾಡಿದ ಅಪಾರ ಸಾಧನೆಯನ್ನು ಗುರುತಿಸಿ 2018ನೇ ಸಾಲಿನ "ಆತ್ಮ ಶ್ರೇಷ್ಠ ಕೃಷಿಕ ಪ್ರಶಸ್ತಿ" ದೊರೆತಿದೆ. ಹೀಗೆ "ಸಮಗ್ರ ಬೇಸಾಯ ಪದ್ಧತಿ" ಅಳವಡಿಸಿಕೊಂಡು ಎಲ್ಲಾ ಕುಟುಂಬ ಸದಸ್ಯರು ಸಹಬಾಳ್ವೆಯಿಂದ ಜೀವನ ನಡೆಸುತ್ತಿದ್ದಾರೆ. ರಾಜು ಶಿವಪ್ಪ ಜೋಗಿ ಅವರನ್ನು ಮೊಬೈಲ್ ನಂಬರ್ 9986354861ರ ಮೂಲಕ ಸಂಪರ್ಕಿಸಬಹುದು.



Download From : www.kpscvaani.com

# ಅಕ್ಕಡಿ ಬೇಸಾಯದಿಂದ ಅನ್ನದಾತನ ಬದುಕು ಹಸನು





**ಆಹಾರ ಉತ್ಪಾದನೆಯಲ್ಲಿ ದೇಶವು ಸ್ವಾವಲಂಬನೆ ಸಾಧಿಸಲು, ರೈತರು ತಮ್ಮ ಆದಾಯವನ್ನು ಹೆಚ್ಚಿಸಿಕೊಂಡು ಕೃಷಿಯಲ್ಲಿ ಖುಷಿ ಕಾಣಲು ಮತ್ತೆ ಪುರಾತನ ಕೃಷಿಗೆ ಮರಳಬೇಕಾದ ಅನಿವಾರ್ಯತೆಯಿದೆ. ಈ ನಿಟ್ಟಿನಲ್ಲಿ ತುಮಕೂರು ಭಾಗದ ರೈತರು ಅಕ್ಕಡಿ ಬೇಸಾಯದಿಂದ ತಮ್ಮ ಬದುಕನ್ನು ಹಸನು ಮಾಡಿಕೊಂಡಿದ್ದಾರೆ.**

ಚೈತ್ರ ಹೆಚ್.ಬಿ ಹೆಸರಹಳ್ಳಿ

ಅತಿವೃಷ್ಟಿ, ಅನಾವೃಷ್ಟಿಯಿಂದ ಅನ್ನದಾತನ ಬದುಕು ನಲುಗುತ್ತಿದೆ. ರೈತನ ಆತ್ಮಹತ್ಯೆ, ಅವೈಜ್ಞಾನಿಕ ಕೃಷಿ ಪದ್ಧತಿಗಳು, ಬೆಲೆ ಕುಸಿತ, ಮಧ್ಯವರ್ತಿಗಳ ಹಾವಳಿ... ಹೀಗೆ ನಾನಾ ಸವಾಲುಗಳಿಂದ ರೈತನ ಕೃಷಿ ಬದುಕು ದಿನದಿಂದ ದಿನಕ್ಕೆ ಕಮರುತ್ತಿದೆ. ಕೃಷಿಯಲ್ಲಿ ಆದಾಯವಿಲ್ಲ ಎಂಬ ಕಾರಣಕ್ಕೆ ಕೃಷಿ ಕಾಯಕದಿಂದ ರೈತರು ವಿಮುಖರಾಗುತ್ತಿದ್ದಾರೆ.

ನಿಜಕ್ಕೂ, ಕೃಷಿಯಿಂದ ರೈತರು ಹಿಂದೆ ಸರಿಯಲು ಪ್ರಮುಖ ಕಾರಣ ಆದಾಯದ ದೃಷ್ಟಿಕೋನವಲ್ಲ. ನಾವು ಅನುಸರಿಸುತ್ತಿರುವ ಅವೈಜ್ಞಾನಿಕ ಪದ್ಧತಿ ಎನ್ನುವುದು ಕೃಷಿ ತಜ್ಞರ ಬಲವಾದ ವಾದ.

ಹೌದು, ಪುರಾತನ ಕಾಲದಲ್ಲಿ ಕೃಷಿಯಲ್ಲಿಯೇ ರೈತರು ನೆಮ್ಮದಿ ಬದುಕು ಕಟ್ಟಿಕೊಂಡಿದ್ದರು. ಕೃಷಿಯಲ್ಲಿ ಅಂದಿನ ಕಾಲದ ರೈತರು ಅಳವಡಿಸಿಕೊಂಡಿದ್ದ ವೈಜ್ಞಾನಿಕ ಕೃಷಿ ಪದ್ಧತಿ. ಅದರಲ್ಲೂ ಪ್ರಮುಖವಾಗಿ 'ಅಕ್ಕಡಿ' ಪದ್ಧತಿ ರೈತರ ಬದುಕನ್ನು ಹಸನಾಗಿಸಿತ್ತು.

ಪ್ರಕೃತಿ ಮುನಿಸಿಕೊಂಡರೂ, ಮಳೆರಾಯ ಧರೆಗೆ ಇಳಿಯದಿದ್ದರೂ, ಅಕ್ಕಡಿ ಬೇಸಾಯ ರೈತನ ಬದುಕಿಗೆ ಆಸರೆಯಾಗಿ ನಿಲ್ಲುತ್ತಿತ್ತು. ಈ ಹಿಂದೆ ಬಹುತೇಕ ಮಳೆಯಾಶ್ರಿತ ಬೇಸಾಯವೇ ಪ್ರಮುಖವಾಗಿತ್ತು. ಮಳೆಯಾಶ್ರಿತ ಬೇಸಾಯದಲ್ಲಿ ಮುಖ್ಯ ಆಹಾರ ಬೆಳೆಗಳ ಜೊತೆ ಪೂರಕ ಆಹಾರ ಬೆಳೆಗಳನ್ನು ಬೆಳೆಯುವುದು ಸಾಂಪ್ರದಾಯಿಕ ಕೃಷಿಯ ಒಂದು ಭಾಗವಾಗಿತ್ತು. ಹೊಲದಲ್ಲಿ ಮುಖ್ಯ ಬೆಳೆಗಳ ಮಧ್ಯೆ ಅಕ್ಕಡಿ ಬೆಳೆಗಳನ್ನು ಸಹ ಬೆಳೆಯಲಾಗುತ್ತಿತ್ತು. ತುಮಕೂರು ಜಿಲ್ಲೆ ಸೇರಿದಂತೆ ರಾಜ್ಯದ ಇತರೆ ಪ್ರದೇಶದಲ್ಲೂ ಈ



Download From : www.kpscvaani.com



ಪದ್ಧತಿ ರೂಢಿಯಲ್ಲಿತ್ತು. ಆದರೆ, ಆಧುನಿಕ ಕೃಷಿಗೆ ಒಗ್ಗಿಕೊಂಡಂತೆ ಅಕ್ಕಡಿ ಬೇಸಾಯ ಕಣ್ಮರೆಯಾಗುತ್ತಿದೆ. ಅಕ್ಕಡಿ ಪದ್ಧತಿ ಕ್ಷೀಣಿಸುತ್ತಿರುವ ಪರಿಣಾಮ ಕೃಷಿ ಕ್ಷೇತ್ರದಲ್ಲಿ ಯಶಸ್ಸು ಕಾಣುವುದು ಅನ್ನದಾತರಿಗೆ ಸವಾಲಾಗಿ ಪರಿಣಮಿಸಿದೆ.

ವೈಜ್ಞಾನಿಕ ಪಾರಂಪರಿಕವಾಗಿ ಹೇಳುವುದಾದರೆ ನಿಜಕ್ಕೂ ಕೃಷಿಯಲ್ಲಿ ಆದಾಯವಿಲ್ಲ ಎನ್ನುವ ಮಾತು ಸತ್ಯಕ್ಕೆ ದೂರ. ಪುರಾತನ ಕಾಲದ ಕೃಷಿಯಲ್ಲಿ ತೊಡಗಿಕೊಂಡರೆ ಕೃಷಿಯಲ್ಲಿಯೇ ಉತ್ತಮ ಬದುಕು ಕಟ್ಟಿಕೊಳ್ಳಬಹುದು. ಆಧುನಿಕತೆಯೊಂದಿಗೆ ಪುರಾತನ ವೈಜ್ಞಾನಿಕ

ಮುಖ್ಯ ಬೆಳೆಗಳೊಂದಿಗೆ ಅಕ್ಕಡಿ ಬೆಳೆದರೆ ಮಣ್ಣು ತನ್ನೊಡಲಿನಲ್ಲಿ ತುಂಬಿಟ್ಟುಕೊಂಡಿರುವ ಅಸಂಖ್ಯ ಜೀವರಾಶಿಯನ್ನು ಸಲುಹಲು ಸಮರ್ಥವಾಗುತ್ತದೆ. ಮಣ್ಣಿನ ಫಲವತ್ತತೆ ಹಾಗೂ ಮುಖ್ಯ ಬೆಳೆಗಳ ಇಳುವರಿಯೂ ಹೆಚ್ಚಲಿದೆ. ಮಣ್ಣಿನಲ್ಲಿ ಸಾರಜನಕ ಉತ್ಪಾದಿಸುವ ದ್ವಿದಳ ಬೆಳೆಗಳು ಮತ್ತು ಸಾರಜನಕ ಬಯಸುವ ಧಾನ್ಯ ಬೆಳೆಗಳ ನಡುವೆ ಸಮತೋಲನ ಸಾಧಿಸಲು ಸಾಧ್ಯವಾಗುತ್ತದೆ.

**ಅಕ್ಕಡಿ ಬೆಳೆಯಿಂದಾಗುವ ಪ್ರಯೋಜನಗಳು:**

- ಮಣ್ಣಿನಲ್ಲಿ ಏಕದಳ ಮತ್ತು ದ್ವಿದಳ ಧಾನ್ಯ ಬೆಳೆಗಳ ಬೇರುಗಳ ಆಳ, ಅಂತರ ಬೇರೆಯಾಗಿರುವುದರಿಂದ ಅಕ್ಕಡಿ/ಅಂತರ ಬೆಳೆ ಪದ್ಧತಿಯಲ್ಲಿ ಪೋಷಕಾಂಶಗಳಿಗೆ ಪೈಪೋಟಿ ಇರುವುದಿಲ್ಲ.
- ವಾತಾವರಣದಲ್ಲಿರುವ ಅಲಭ್ಯ ಸಾರಜನಕವನ್ನು ದ್ವಿದಳ ಧಾನ್ಯ ಬೇರಿನ ಗಂಟುಗಳಲ್ಲಿ ರೈಝೋಬಿಯಂ ಬ್ಯಾಕ್ಟೀರಿಯಾ ಸಹಾಯದಿಂದ ಸಾರಜನಕವನ್ನು ಸ್ಥಿರೀಕರಿಸಿ ಬೆಳೆಗಳಿಗೆ ಲಭ್ಯರೂಪಕ್ಕೆ ಮಾರ್ಪಡಿಸಿ ಮಣ್ಣಿನ ಫಲವತ್ತತೆ ಹೆಚ್ಚಿಸುತ್ತದೆ.
- ಆಹಾರ ಪೋಷಕಾಂಶದಲ್ಲಿ ಪ್ರೋಟಿನ್ ಕೊರತೆ ನೀಗಿಸಲು ಸಹಾಯಕವಾಗಿದೆ.
- ಕಾರಣಾಂತರದಿಂದ ಮುಖ್ಯ ಬೆಳೆಯಲ್ಲಿ ಇಳುವರಿ ಕುಂಠಿತವಾದರೆ ಅಕ್ಕಡಿಯಿಂದ ಲಾಭ ಪಡೆಯಬಹುದು.
- ಶುಂಠಿ, ಮೆಕ್ಕೆಜೋಳ, ರಾಗಿ, ಮಾವು, ಬಾಳೆ ಇನ್ನಿತರೆ ಬೆಳೆಗಳ ಮಧ್ಯೆ ಅಕ್ಕಡಿ ಬೆಳೆಯಲು ಸಾಧ್ಯ.
- ಏಕದಳ ಬೆಳೆಗಳಾದ ರಾಗಿ ಮತ್ತು ಮುಸುಕಿನ ಜೋಳ ಬೆಳೆಗಳಲ್ಲಿ ದ್ವಿದಳ ಧಾನ್ಯಗಳನ್ನು ಅಕ್ಕಡಿಯಾಗಿ ಬೆಳೆಯುವುದರಿಂದ ಮಣ್ಣಿನ ಫಲವತ್ತತೆಯನ್ನು ಹೆಚ್ಚಿಸಲು ಸಹಕಾರಿಯಾಗುತ್ತದೆ.
- ರೋಗ ಮತ್ತು ಕೀಟಗಳ ಹರಡುವಿಕೆಯನ್ನು ಹತೋಟಿ ಮಾಡಬಹುದು.
- ಒಂದು ಬೆಳೆ ನಷ್ಟವಾದಲ್ಲಿ ಮತ್ತೊಂದು ಬೆಳೆಯಿಂದ ಇಳುವರಿ/ಆದಾಯವನ್ನು ಪಡೆಯಬಹುದು.
- ಮಣ್ಣಿನ ಸವಕಳಿಯನ್ನು ತಡೆಯಬಹುದು.
- ಅಧಿಕ ಇಳುವರಿಯಿಂದ ಹೆಚ್ಚು ಆದಾಯವನ್ನು ಪಡೆಯಬಹುದು.



Download From : www.kpscvaani.com

ಕೃಷಿ ಪದ್ಧತಿ ಅನುಸರಿಸಿದರೆ ಕೃಷಿಯಲ್ಲಿ ಸಕ್ಕರೆಯಂತಹ ಸಿಹಿ ಕಾಣಬಹುದು.

**ಅಕ್ಕಡಿ ಬೇಸಾಯದಿಂದಾಗುವ ಅನುಕೂಲಗಳು:**

ಮುಖ್ಯ ಬೆಳೆಗಳೊಂದಿಗೆ ಅಕ್ಕಡಿ ಬೆಳೆದರೆ ಮಣ್ಣು ತನ್ನೊಡಲಿನಲ್ಲಿ ತುಂಬಿಟ್ಟುಕೊಂಡಿರುವ ಅಸಂಖ್ಯ ಜೀವರಾಶಿಯನ್ನು ಸಲುಹಲು ಸಮರ್ಥವಾಗುತ್ತದೆ. ಮಣ್ಣಿನ ಫಲವತ್ತತೆ ಹಾಗೂ ಮುಖ್ಯ ಬೆಳೆಗಳ ಇಳುವರಿಯೂ ಹೆಚ್ಚಲಿದೆ. ಮಣ್ಣಿನಲ್ಲಿ ಸಾರಜನಕ ಉತ್ಪಾದಿಸುವ ದ್ವಿದಳ ಬೆಳೆಗಳು ಮತ್ತು ಸಾರಜನಕ ಬಯಸುವ ಧಾನ್ಯ ಬೆಳೆಗಳ ನಡುವೆ ಸಮತೋಲನ ಸಾಧಿಸಲು ಸಾಧ್ಯವಾಗುತ್ತದೆ. ಇತರೆ ಮುಖ್ಯ ಬೆಳೆಗಳ ಜೊತೆಗೆ ಅಕ್ಕಡಿ ಸಾಲಿನ ಪದ್ಧತಿಯಲ್ಲಿ ರಾಗಿ ಮತ್ತು ಭತ್ತ ಬೆಳೆದಾಗ ಆಶ್ರಯ ಸಸ್ಯಗಳ ಪ್ರಮಾಣ ಹೆಚ್ಚಿ ಆಹಾರ ಅರಸಿ ಬರುವ ಪಕ್ಷಿಗಳ ಸಂಖ್ಯೆಯೂ ಕೂಡ ಹೆಚ್ಚುತ್ತದೆ. ಪ್ರಾಣಿ ಮತ್ತು ಮನುಷ್ಯ ಜೀವಿಗಳ ಆಹಾರ ಬುಟ್ಟಿಯ ವೈವಿಧ್ಯತೆ ಬಹುಗುಣಗೊಳ್ಳುತ್ತದೆ.

**ರೋಗ ಹತೋಟಿ:**

ಆಧುನಿಕ ಕೃಷಿ ಪದ್ಧತಿಯಲ್ಲಿ ಹೊಸ ತಳಿಗಳಿಗೆ ಒಗ್ಗಿಕೊಂಡಂತೆ ರೋಗ, ಕೀಟಗಳ ಬಾಧೆ ಕಾಡುವ ಪ್ರಮಾಣ ಹೆಚ್ಚುತ್ತಿದೆ. ರೋಗಗಳ ಹತೋಟಿಗಾಗಿ ರೈತರು ಔಷಧ ಸಿಂಪಡಣೆ ಮೊರೆ ಹೋಗುತ್ತಿದ್ದಾರೆ. ಇದರಿಂದ ಮಣ್ಣು ತನ್ನ ಸತ್ವವನ್ನು ಕಳೆದುಕೊಳ್ಳುತ್ತಿದೆ. ಮಣ್ಣು ಸತ್ವ ಕಳೆದುಕೊಂಡಂತೆ ಇಳುವರಿ ಕಡಿಮೆಯಾಗುತ್ತಿದೆ. ಇಂತಹ ಕೀಟಬಾಧೆ ನಿವಾರಣೆಗೆ ಅಕ್ಕಡಿ ಪದ್ಧತಿ ಅನಿವಾರ್ಯ.



> ಮುಖ್ಯ ಬೆಳೆಗಳಿಗೆ ತಗಲುವ ಕೀಟಬಾಧೆ, ರೋಗಗಳನ್ನು ತಡೆಗಟ್ಟಲು ಅಕ್ಕಡಿ ಬೆಳೆ ಪದ್ಧತಿಯು ಪರಿಣಾಮಕಾರಿಯಾಗಿದೆ. ಕೀಟಬಾಧೆ ಮತ್ತು ರೋಗ ಬರದಿದ್ದರೆ ಬೆಳೆಗೆ ಔಷಧ ಸಿಂಪಡಣೆ ಮಾಡುವ ಅವಶ್ಯಕತೆಯೇ ಇರುವುದಿಲ್ಲ. ಅಲ್ಲದೆ ಈ ಪದ್ಧತಿಯಿಂದ ಮುಖ್ಯ ಬೆಳೆಯ ಇಳುವರಿ ಹೆಚ್ಚುವುದಲ್ಲದೆ, ಮಣ್ಣಿನ ತೇವಾಂಶ ಮತ್ತು ಪೋಷಕಾಂಶಗಳನ್ನು ಕಾಪಾಡಿಕೊಳ್ಳಬಹುದು. ಸರ್ಕಾರವು ಅಕ್ಕಡಿ ಬೇಸಾಯ ಪದ್ಧತಿಯನ್ನು ಪ್ರೋತ್ಸಾಹಿಸಲು ಸಬ್ಸಿಡಿ ದರದಲ್ಲಿ ವಿವಿಧ ಬಿತ್ತನೆ ಬೀಜಗಳನ್ನು ರೈತರಿಗೆ ವಿತರಣೆ ಮಾಡುತ್ತಿದೆ. ಈ ಸೌಲಭ್ಯವನ್ನು ರೈತರು ಉಪಯೋಗಿಸಿಕೊಂಡು ಕೃಷಿಯಲ್ಲಿ ಅಕ್ಕಡಿ ಬೇಸಾಯ ಪದ್ಧತಿಯನ್ನು ಅಳವಡಿಸಿಕೊಳ್ಳಬಹುದು.

**ಅಕ್ಕಡಿ ಬೆಳೆ ಪದ್ಧತಿ ಈ ರೀತಿ ಬೆಳೆದರೆ ಹೆಚ್ಚು ಪರಿಣಾಮಕಾರಿ:**

ತುಮಕೂರು ಜಿಲ್ಲೆಯಲ್ಲಿ ರಾಗಿ ಮತ್ತು ನೆಲಗಡಲೆ ಬೆಳೆಗಳು ಮುಖ್ಯ ಬೆಳೆಯಾಗಿದ್ದು, ರಾಗಿ ಬೆಳೆಯಲ್ಲಿ ಅಕ್ಕಡಿಯಾಗಿ ಅವರೆ, ತೊಗರಿ ಮತ್ತು ಜೋಳದ ಬೆಳೆಗಳನ್ನು ಬೆಳೆಯುವುದರಿಂದ ಮಣ್ಣಿನಲ್ಲಿರುವ ತೇವಾಂಶ ಮತ್ತು ಪೋಷಕಾಂಶಗಳನ್ನು ಪರಿಣಾಮಕಾರಿಯಾಗಿ ಕಾಪಾಡಿಕೊಳ್ಳಬಹುದು.

ರಾಗಿ ಮತ್ತು ನೆಲಗಡಲೆಯಲ್ಲಿ ತೊಗರಿಯನ್ನು ಅಕ್ಕಡಿಯಾಗಿ ಜೋಡಿ ಸಾಲಿನಲ್ಲಿ (ಎಂಟು ಸಾಲಿಗೆ ಎರಡು ಸಾಲು) ಬಿತ್ತನೆ ಮಾಡಿ, ನಂತರ ತೊಗರಿ ಬೆಳೆಯ ಎರಡು ಸಾಲುಗಳ ಮಧ್ಯೆ ದೋಣಿ ಸಾಲು ತೆಗೆಯುವುದರಿಂದ ಮಳೆ ನೀರು ಶೇಖರಣೆಯಾಗಿ ಪಕ್ಕದ ಸಾಲುಗಳಿಗೆ ತೇವಾಂಶ ದೊರೆತು ಉತ್ತಮ ಬೆಳೆ ಮತ್ತು ಇಳುವರಿಯನ್ನು ಪಡೆಯಬಹುದು.

ಮುಸುಕಿನ ಜೋಳದಲ್ಲಿ ತೊಗರಿಯನ್ನು ಅಕ್ಕಡಿಯಾಗಿ ನಾಲ್ಕು ಸಾಲಿಗೆ ಒಂದು ಸಾಲಿನಂತೆ ಬಿತ್ತನೆ ಮಾಡಬಹುದು. ಹಾಗೆಯೇ ತೊಗರಿ ಬೆಳೆಯಲ್ಲಿ ಕಡಿಮೆ ಅವಧಿಯಲ್ಲಿ ಕಟಾವಿಗೆ ಬರುವ ಅಲಸಂದೆ, ಹೆಸರು, ಉದ್ದು, ಸೋಯಾ ಅವರೆ ಮತ್ತು ಅವರೆ ಬೆಳೆಗಳನ್ನು ಅಕ್ಕಡಿಯಾಗಿ ಬಿತ್ತನೆ ಮಾಡಬಹುದು.

**ಸರ್ಕಾರದಿಂದ ಪ್ರೋತ್ಸಾಹ:**

ಅಕ್ಕಡಿ ಬೆಳೆ ಬೇಸಾಯ ಪದ್ಧತಿಯನ್ನು ಪ್ರೋತ್ಸಾಹಿಸಲು ಸರ್ಕಾರವು ದಿಟ್ಟ ಹೆಜ್ಜೆಯನ್ನಿಟ್ಟಿದೆ. ಅಕ್ಕಡಿ ಬೇಸಾಯ ಪದ್ಧತಿ ಪ್ರೋತ್ಸಾಹ ನೀಡಲು ಪೂರಕವಾಗಿ ಸಬ್ಸಿಡಿ ದರದಲ್ಲಿ ತೊಗರಿ, ಅಲಸಂದೆ, ಉದ್ದು, ಹೆಸರು ಸೇರಿದಂತೆ ವಿವಿಧ ಬಿತ್ತನೆ ಬೀಜಗಳನ್ನು ರೈತರಿಗೆ ವಿತರಣೆ ಮಾಡಲಾಗುತ್ತಿದೆ. ಈ ಸಬ್ಸಿಡಿಯನ್ನು ಸದ್ಬಳಕೆ ಮಾಡಿಕೊಂಡು ರೈತರು ಅಕ್ಕಡಿ ಬೇಸಾಯವನ್ನು ಹೆಚ್ಚಾಗಿ ಅಳವಡಿಸಿಕೊಳ್ಳಬೇಕಾಗಿದೆ.

ಮುಖ್ಯ ಬೆಳೆಗಳ ಜೊತೆ ನಿರ್ದಿಷ್ಟ ಅನುಪಾತದಲ್ಲಿ ಒಂದಕ್ಕಿಂತ ಹೆಚ್ಚು ಬೆಳೆಗಳನ್ನು ಬೆಳೆಯುವ ಪದ್ಧತಿ ವಿಧಾನ, ಸಾಮಾನ್ಯವಾಗಿ ಏಕದಳ ಧಾನ್ಯ ಬೆಳೆಗಳಲ್ಲಿ ದ್ವಿದಳ ಧಾನ್ಯ ಬೆಳೆ ಮತ್ತು ಎಣ್ಣೆಕಾಳು ಬೆಳೆಗಳಲ್ಲಿ ದ್ವಿದಳ ಧಾನ್ಯ ಬೆಳೆಗಳನ್ನು ಅಕ್ಕಡಿಯಾಗಿ ಬೆಳೆಯುವುದು ವಾಡಿಕೆಯಲ್ಲಿದೆ. ಈ ಪದ್ಧತಿ ಇತ್ತೀಚಿನ ದಿನಗಳಲ್ಲಿ ಕಡಿಮೆಯಾಗುತ್ತಿದ್ದು, ಅಂತರ ಬೆಳೆ ಪದ್ಧತಿಯಾಗಿ ಅಕ್ಕಡಿ ಬೆಳೆ ಪದ್ಧತಿಯನ್ನು ಅಳವಡಿಸಿಕೊಂಡಲ್ಲಿ ಹೆಚ್ಚು ಇಳುವರಿಯನ್ನು ಪಡೆಯಬಹುದಾಗಿರುತ್ತದೆ ಎಂದು ಕೃಷಿ ಇಲಾಖೆ ಜಂಟಿ ನಿರ್ದೇಶಕಿ ರಾಜಸುಲೋಚನಾ ಅವರು ಅಭಿಪ್ರಾಯಪಡುತ್ತಾರೆ.

ಒಟ್ಟಾರೆ ಮುಖ್ಯ ಬೆಳೆಗಳ ಜೊತೆಗೆ ಅಕ್ಕಡಿ ಬೆಳೆ ಬೇಸಾಯವನ್ನು ಅನುಸರಿಸಿದರೆ ಕೃಷಿಯಲ್ಲಿ ಖುಷಿ ಕಾಣಬಹುದು. ಮುಖ್ಯ ಬೆಳೆಯ ಹೆಚ್ಚು ಇಳುವರಿಯಿಂದಾಗಿ ತಮ್ಮ ಆರ್ಥಿಕ ಆದಾಯವೂ ಹೆಚ್ಚಲಿದೆ.



Download From : www.kpscvaani.com







## ವಿಶ್ವದ ಗಮನ ಸೆಳೆದಿರುವ

# ರಕ್ಷಣಾ ಆಹಾರ ಸಂಶೋಧನಾ ಪ್ರಯೋಗಾಲಯ

**ವರ್ಷಗಟ್ಟಲೇ ಕೆಡದ ಆಹಾರ ಉತ್ಪಾದನೆ ಮಾಡುತ್ತಿರುವ ರಕ್ಷಣಾ ಆಹಾರ ಸಂಶೋಧನಾ ಪ್ರಯೋಗಾಲಯವು ಸೈನಿಕರಿಗೆ, ಪ್ರಕೃತಿ ವಿಕೋಪ ಪೀಡಿತ ಸಂತ್ರಸ್ತರಿಗೆ ಅಲ್ಲದೆ, ಇದೀಗ ಇಸ್ರೋ ಗಗನಯಾತ್ರಿಗಳಿಗೂ ಆಹಾರ ಪೂರೈಕೆ ಮಾಡುವ ಮೂಲಕ ವಿಶ್ವದ ಗಮನ ಸೆಳೆದಿದೆ.**

ಡಾ. ಪಿ ವಿ ವರಪ್ರಸಾದ್ ರಾವ್

ನಾವು ಮಾಡಿರುವ ಆಹಾರ ಪಾದಾರ್ಥಗಳು ಎಷ್ಟು ದಿನ ಹಾಳಾಗದಂತೆ ಇಡಬಹುದು?, ಫ್ರಿಜ್‌ನಲ್ಲಿ ಇಟ್ಟರೆ ಅಬ್ಬಬ್ಬ ಅಂದರೆ ಒಂದು ವಾರ ಇಡಬಹುದು. ನಂತರ ಅದು ಹಾಳಾಗುವುದು ಸಾಮಾನ್ಯ. ಆದರೆ, ಡಿಫೆನ್ಸ್ ಫುಡ್ ರಿಸರ್ಚ್ ಲ್ಯಾಬೋರೇಟರಿ (ಡಿಎಫ್‌ಆರ್‌ಎಲ್) ತಯಾರಿಸುವ ಆಹಾರ ಉತ್ಪನ್ನಗಳು ಬರೋಬ್ಬರಿ ಒಂದು ವರ್ಷ ಕೆಡುವುದಿಲ್ಲ.

ಹಸಿವಿನ ವಿರುದ್ಧ ಕೆಲಸ ಮಾಡಲು ಮತ್ತು ಹಸಿವಿನ ನಿರ್ಮೂಲನೆಗಾಗಿ ಕೆಲಸ ಮಾಡುವ ಸಲುವಾಗಿ ಆಹಾರ ದಿನವನ್ನು ಆಚರಣೆಗೆ ತರಲಾಯಿತು. ಪ್ರತಿಯೊಬ್ಬರೂ ಆಹಾರ ಸೇವಿಸುವುದು ಅವರ ಹಕ್ಕಾಗಿದೆ. ಅಕ್ಟೋಬರ್ 16 ರಂದು ವಿಶ್ವ ಆಹಾರ ದಿನಾಚರಣೆಯಾಗಿರುವ ಹಿನ್ನೆಲೆಯಲ್ಲಿ ಯಾವುದೇ ಮೂಲಭೂತ ಸೌಲಭ್ಯಗಳಿಲ್ಲದ ಗಡಿ ಭಾಗದಲ್ಲಿ ನಮ್ಮೆಲ್ಲರ ರಕ್ಷಣೆಯಲ್ಲಿ ತೊಡಗಿರುವ ಸೈನಿಕರಿಗಾಗಿ ಸಂಸ್ಕರಿತ ಆಹಾರವನ್ನು ಪೂರೈಸುತ್ತಿರುವ ಡಿಎಫ್‌ಆರ್‌ಎಲ್ ಸಂಶೋಧನಾ ಪ್ರಯೋಗಾಲಯದ ಮೇಲೆ ಈ ಲೇಖನ ಬೆಳಕು ಚೆಲ್ಲಿದೆ.

ಡಿಎಫ್‌ಆರ್‌ಎಲ್‌ನಿಂದ ತಯಾರಾಗುವ ಆಹಾರ ಹೆಚ್ಚಿನ ಪ್ರಮಾಣದಲ್ಲಿ ಸೇನೆ, ಚಂಡಮಾರುತ ಹಾಗೂ ಪ್ರವಾಹ ಪೀಡಿತ ಸಂತ್ರಸ್ತರಿಗೆ ಪೂರೈಸಲಾಗುತ್ತಿದೆ. ಜೊತೆಗೆ ಇದೀಗಾ ಬಾಹ್ಯಾಕಾಶದಲ್ಲಿ ಕಾರ್ಯನಿರ್ವಹಿಸುವ ಗಗನಯಾತ್ರಿಗಳಿಗೆ ವಿವಿಧ ಆಹಾರ ಪದಾರ್ಥಗಳನ್ನು ಪೂರೈಸಲು ತಯಾರಿ ನಡೆಸಿದೆ. ಮಾಂಸಾಹಾರವನ್ನು ವಾರಗಟ್ಟಲೆ ಶೀತಲ ಸಂಗ್ರಹದಲ್ಲಿ ಕಾಪಿಡುವ ಸರಳ ತಂತ್ರಜ್ಞಾನವೊಂದನ್ನು ಅದು ಅಭಿವೃದ್ಧಿಪಡಿಸಿದೆ.

ಆಹಾರ ಸಂಶೋಧನೆಯಲ್ಲಿ ದೇಶ ವಿದೇಶದಲ್ಲಿ ಗಮನ ಸೆಳೆದಿರುವ ರಕ್ಷಣಾ ಆಹಾರ ಸಂಶೋಧನಾ ಪ್ರಯೋಗಾಲಯ (ಡಿಎಫ್‌ಆರ್‌ಎಲ್) ತಯಾರಿಸಿದ ಆಹಾರ ಉತ್ಪನ್ನಗಳು ಹಾಗೂ ಆಹಾರ ತಂತ್ರಜ್ಞಾನ ಸೇರಿದಂತೆ



Download From : www.kpscvaani.com




ಸಂಸ್ಥೆ ಮಾಡುತ್ತಿರುವ ಸತ್ಕಾರ್ಯ ಅಮೋಘವಾದುದು.

ಕರ್ನಾಟಕದ ಸಾಂಸ್ಕೃತಿಕ ರಾಜಧಾನಿ ಮೈಸೂರಿನಲ್ಲಿ ಅನೇಕ ಅರಮನೆಗಳಿರುವುದರಿಂದ ಅರಮನೆಗಳ ನಗರ ಎಂದೂ ಹೆಸರು ಇದೆ. ಇದೀಗಾ ಆಹಾರ ನಗರಿಯಾಗಲು ಹೊರಟಿದೆ. ಕಾರಣ ಮೈಸೂರಿನಲ್ಲಿ ಇರುವ ಡಿಆರ್‌ಡಿಒ ಅಧೀನದ, ಡಿಫೆನ್ಸ್ ಫುಡ್ ರಿಸರ್ಚ್ ಲ್ಯಾಬೋರೇಟರಿ (ಡಿಎಫ್‌ಆರ್‌ಎಲ್) ಸಂಸ್ಥೆಯು ವರ್ಷಗಟ್ಟಲೇ ಕೆಡದ ಚಪಾತಿ, ರುಚಿಗೆಡದ ಟೀ ಪುಡಿ, ತರಕಾರಿ ಪಲಾವ್, ಸೂಜಿ ಹಲ್ವಾ, ತರಕಾರಿ ಸಾರು, ಹಣ್ಣಿನ ಚಾಕೊಲೇಟ್, ರವಾ ಉಪ್ಪಿಟ್ಟು, ಅವಲಕ್ಕಿ, ಹೈಪ್ರೋಟಿನ್ ಬಿಸ್ಕೆಟ್, ರಸ್ಕ್, ಟೊಮೆಟೊ ರೈಸ್, ಲೆಮೆನ್ ರೈಸ್, ದಾಲ್ ರೈಸ್, ಪಿಜ್ಜಾ, ಬರ್ಗರ್, ರಾಗಿ ಫ್ಲೇಕ್ಸ್, ಚಾಕೋ ಚಿಪ್ಸ್, ಪಾಯಸ ಮುಂತಾದ ಸ್ವಾದಿಷ್ಟಕರ ಆಹಾರಗಳನ್ನು ತಯಾರಿಸಿ ಸದ್ದು ಇಲ್ಲದೇ ಹೆಸರು ಮಾಡುತ್ತಿದೆ.

ಡಿಫೆನ್ಸ್ ಫುಡ್ ರಿಸರ್ಚ್ ಲ್ಯಾಬೊರೇಟರಿ (DFRL) 28 ಡಿಸೆಂಬರ್ 1961 ರಂದು ಡಿಫೆನ್ಸ್ ರಿಸರ್ಚ್ ಅಂಡ್ ಡೆವಲಪ್ಮೆಂಟ್ ಆರ್ಗನೈಸೇಶನ್ (DFRL), ಭಾರತ ಸರ್ಕಾರದ ರಕ್ಷಣಾ ಸಚಿವಾಲಯದ ಅಡಿಯಲ್ಲಿ ಮೈಸೂರಿನಲ್ಲಿ ವಿಶೇಷವಾಗಿ ಭಾರತೀಯ ಸೇನೆಯ ನೌಕಾಪಡೆ, ವಾಯುಪಡೆ ಮತ್ತು ಇತರ ಅರೆಸೇನಾ ಪಡೆಗಳಿಗಾಗಿ ಪೌಷ್ಟಿಕವಾದ ವಿವಿಧ ಆಹಾರ ತಯಾರಿಸಿ ಪೂರೈಸಲು ಆರಂಭಿಸಿತು.

ಇದೀಗಾ ಈ ಸಂಸ್ಥೆಯು ತಂತ್ರಜ್ಞಾನ ಬಳಸಿ ಸಂಸ್ಕರಿಸಿ ಉತ್ಪಾದಿಸಿದ ಆಹಾರ ಪದಾರ್ಥಗಳು ವರ್ಷಗಟ್ಟಲೆ ಇಟ್ಟರೂ ಕೆಡದ ರೀತಿಯಲ್ಲಿ ಉತ್ಪಾದನೆ ಮಾಡುತ್ತಿದೆ. ಆಹಾರ ಸಂರಕ್ಷಣೆ ವಿಭಾಗವು ಅಭಿವೃದ್ಧಿ ಪಡಿಸಿರುವ ಘನೀಕರಿಸಿ ಒಣಗಿಸಿದ ಆಹಾರ ಪದಾರ್ಥಗಳು, ಆಹಾರ ಕಿಟ್‌ಗಳನ್ನು ತಯಾರಿ ಮಾಡುತ್ತಿದೆ. ಒಣಗಿದ ಅನೇಕ ಏಕದಳ, ದ್ವಿದಳ ಧಾನ್ಯಗಳಾದ ಬೇಳೆ, ಭತ್ತ, ಗೋಧಿ, ಹೆಸರುಕಾಳು ಇವೇ ಅನೇಕ ಬಗೆಯ ಧಾನ್ಯಗಳ ಹಿಟ್ಟುಗಳನ್ನು ತಯಾರು ಮಾಡುತ್ತಿದೆ. ಚಳಿ ಪ್ರದೇಶದಲ್ಲಿ ಮೊಸರಾಗುವುದು ಕಷ್ಟ. ಇದಕ್ಕಾಗಿಯೇ ವಿಶೇಷವಾಗಿ ಮೊಸರನ್ನು ಅಭಿವೃದ್ಧಿ ಪಡಿಸಲಾಗಿದೆ. ಪ್ಯಾಕೆಟ್ ತೆರೆದು ಬಳಸಬಹುದಾದ 'ರೆಡಿಮೇಡ್' ಮೊಸರು ಇದಾಗಿದೆ. ಅಂತೆಯೇ, ಸೈನಿಕರಿಗಾಗಿ ಎತ್ತರದ ರೇಖಾಂಶದ ಪ್ರದೇಶಗಳಲ್ಲಿ ಬಾಳಿಕೆ ಬರುವ ಮಾಂಸದ ತುಂಡು, ಘನೀಕೃತ ಮಾಂಸದ ಸ್ಯಾಂಡ್ವಿಚ್, ಒಣಗಿಸಿರುವ ಮಟನ್ ಬಿರಿಯಾನಿಯನ್ನೂ ತಯಾರಿಸಿ ಸೈನಿಕರಿಗೆ ಕಳುಹಿಸಲಾಗುತ್ತಿದೆ. ಅತಿ ಎತ್ತರದ ಪ್ರದೇಶದಲ್ಲಿರುವ ಸಶಸ್ತ್ರ ಪಡೆಗಳಿಗೆ ಆಹಾರ ಪೂರೈಸುವ ಯಂತ್ರಗಳನ್ನು ಅಭಿವೃದ್ಧಿ ಪಡೆಸಲಾಗಿದೆ. ಸೈನಿಕರ ಆರೋಗ್ಯ ಕಾಪಾಡುವ, ಆಹಾರದ ಗುಣಮಟ್ಟ ಪರೀಕ್ಷಿಸಿ ವಿಷಮುಕ್ತ ಎಂದು ಗುರುತಿಸುವ ಸಾಧನಗಳನ್ನು ಹಾಗೂ ಶತ್ರು ಪಡೆಗಳು ಸೈನಿಕರ ಊಟಕ್ಕೆ ವಿಷ ಬೆರೆಸಿದ್ದರೆ ಅದನ್ನು ಥಟ್ಟನೆ ಪತ್ತೆ ಮಾಡುವ ತಂತ್ರಜ್ಞಾನ ಹೊಂದಿದ ಸಾಧನಗಳನ್ನು ಇಲ್ಲಿ ಅಭಿವೃದ್ಧಿ ಪಡಿಸಲಾಗಿದೆ.

**ಜನ ಸಮಾನ್ಯರಿಗೂ ಪೂರೈಕೆ :**

ಸೈನಿಕರಿಗೆ ಮಾತ್ರ ಆಹಾರ ಪೂರೈಕೆ ಮಾಡುತ್ತಿದ್ದ ಈ ಸಂಸ್ಥೆ ಇದೀಗಾ ಚಂಡಮಾರುತ, ಮಹಾ ಮಳೆಯಿಂದ

> **ಈ ಸಂಸ್ಥೆಯು 15 ದಿನಗಳ ಕಾಲ ಶೇಖರಿಸಿಡಬಹುದಾದ ಉಪ್ಪಿಟ್ಟಿನ ಮಿಕ್ಸ್‌ಅನ್ನು ತಯಾರಿಸಿದೆ. ಇದನ್ನು ತಣ್ಣೀರಿನಲ್ಲಾದರೆ 25 ನಿಮಿಷ ಹಾಗೂ ಬಿಸಿ ನೀರಿನಲ್ಲಾದರೆ 10 ನಿಮಿಷ ನೆನಸಿದರೆ ಉಪ್ಪಿಟ್ಟು ಸಿದ್ಧವಾಗುತ್ತದೆ. ನೀರು ಇಲ್ಲದಿದ್ದ ಪಕ್ಷದಲ್ಲಿ ಹಾಗೆಯೇ ಸೇವಿಸಲೂ ಸಾಧ್ಯವಾಗುವಂತೆಯೂ ಇದನ್ನು ತಯಾರಿಸಿದೆ.**

**ಮಾಂಸ ಕಾಪಿಡುವ ಸೌಲಭ್ಯ:**

ಸಾಮಾನ್ಯವಾಗಿ ಮಾಂಸಾಹಾರವು ಕತ್ತರಿಸಿದ ನಂತರ ಕೇವಲ 5 ರಿಂದ 6 ಗಂಟೆಗಳು ಮಾತ್ರ ತಾಜಾ ಆಗಿ ಇರುತ್ತದೆ. ನಂತರ ಶೀತಲೀಕರಣ ಯಂತ್ರದಲ್ಲಿ ಇಡಬೇಕಾಗುತ್ತದೆ. ಕೇವಲ ಎರಡು ದಿನಗಳವರೆಗೆ ಶೀತಲೀಕರಣ ಯಂತ್ರದಲ್ಲಿ ಇಡಬಹುದು. ನಂತರ ಅದು ಕೆಟ್ಟು ಹೋಗುವುದರಿಂದ ಮಾಂಸ ಮಳಿಗೆಯ ಮಾಲೀಕರಿಗೆ ನಷ್ಟವಾಗುತ್ತದೆ. ಮಾಂಸಾಹಾರಿಗಳಿಗೆ ಮತ್ತು ಮಾಂಸ ಉದ್ಯಮದ ಸಂಗ್ರಹ ವೆಚ್ಚ ಕಡಿಮೆ ಮಾಡುವ ಉತ್ತಮ ಅವಕಾಶ ನೀಡಿದೆ. ಮಾಂಸಾಹಾರವನ್ನು ವಾರಗಟ್ಟಲೆ ಶೀತಲ ಸಂಗ್ರಹ ಸೌಲಭ್ಯದಲ್ಲಿ ಕಾಪಿಡುವ ಸರಳ ತಂತ್ರಜ್ಞಾನವೊಂದನ್ನು ಅದು ಅಭಿವೃದ್ಧಿಪಡಿಸಿದೆ.



Download From : www.kpscvaani.com
















ತತ್ತರಿಸಿರುವ ಪ್ರವಾಹ ಸಂತ್ರಸ್ತರಿಗೂ ಆಹಾರ ಪೂರೈಕೆ ಮಾಡುತ್ತಿದೆ. ನಿತ್ಯ ರವಾ ಉಪ್ಪಿಟ್ಟು, ಅವಲಕ್ಕಿ, ಹೈಪ್ರೋಟಿನ್ ಬಿಸ್ಕೆಟ್, ರಸ್ಕ್, ಟೊಮೊಟೊ ರೈಸ್, ಲೆಮೆನ್ ರೈಸ್, ದಾಲ್ ರೈಸ್ ಸೇರಿದಂತೆ ಡಿಹೈಡ್ರೇಡ್ ಇನ್ಸ್ಟೆಂಟ್ ಆಹಾರಗಳನ್ನು ಪ್ರವಾಹ ಸಂತ್ರಸ್ತರಿಗೆ ಪೂರೈಸಲಾಗುತ್ತಿದೆ. ಸಂತ್ರಸ್ತರಿಗೆ ನೀಡಲು ಯೋಗ್ಯವಾಗಿರುವಂತೆ ಈಗಾಗಲೇ ಸಂಸ್ಕರಿಸಿದ ರವೆ ಉಪ್ಪಿಟ್ಟಿನ ಮಿಕ್ಸ್ ಪುಡಿಯನ್ನು 1 ಕಿ.ಲೋ ಗ್ರಾಂ ಪ್ಯಾಕ್‌ಗಳಂತೆ ನಿತ್ಯ 250 ರಿಂದ 300 ಕೆಜಿಗಳವರೆಗೂ ತಯಾರು ಮಾಡುತ್ತಿದೆ. 15 ದಿನಗಳವರೆಗೂ ಶೇಖರಿಸಿ ಇದರ ಪುಡಿಯನ್ನು ಬಳಸಬಹುದಾಗಿದ್ದು, ತಣ್ಣೀರಿನಲ್ಲಿ 25 ನಿಮಿಷ ಅಥವಾ ಬಿಸಿ ನೀರಿನಲ್ಲಿ 10 ನಿಮಿಷ ನೆನಸಿ ಉಪ್ಪಿಟ್ಟನ್ನು ಸವಿಯಬಹುದಾಗಿದೆ. ಇಲ್ಲವಾದರೆ ಹಾಗೆಯೂ ಸಹ ಸೇವಿಸಿ ನೀರು ಕುಡಿಯುವಂತೆಯೂ ಸಂಸ್ಕರಿಸಲಾಗಿದೆ. ಅಂತೆಯೇ ಅವಲಕ್ಕಿ ಉಪ್ಪಿಟ್ಟನ್ನು ಸಹ ತಯಾರು ಮಾಡಲಾಗುತ್ತಿದೆ. ಒಟ್ಟಾರೆ ಡಿಎಫ್‌ಆರ್‌ಎಲ್‌ನಲ್ಲಿ ದಿನಕ್ಕೆ 3 ಟನ್ ಆಹಾರ ಸಂಸ್ಕರಿಸಲಾಗುತ್ತಿದೆ.

**ಗಗನಯಾತ್ರೆಗಳಿಗೂ ಆಹಾರ ತಯಾರಿಕೆ:**

ಭಾರತದ ಚೊಚ್ಚಲ ಗಗನಯಾತ್ರೆಗೆ ನಾಲ್ವರನ್ನು ಆಯ್ಕೆ ಮಾಡಿ ಅವರಿಗೆ ರಷ್ಯಾದಲ್ಲಿ ತರಬೇತಿ ನೀಡಲಾಗಿದೆ. ಒಟ್ಟು 5 ರಿಂದ 7 ದಿನಗಳ ಕಾಲ ಗಗನಯಾತ್ರಿಗಳು ಅಂತರಿಕ್ಷದಲ್ಲಿ ಕಾಲ ಕಳೆಯಲಿದ್ದಾರೆ. ಈ ಅವಧಿಯಲ್ಲಿ ಬಾಹ್ಯಾಕಾಶಕ್ಕೆ ಹೊಂದಾಣಿಕೆಯಾಗುವಂತಹ ಆಹಾರವನ್ನು ತಯಾರಿಸಿದೆ.

ಗಗನಯಾನಿಗಳಿಗೋಸ್ಕರ ವಿಶೇಷವಾದ ಆಹಾರ ಪದಾರ್ಥಗಳು ಮತ್ತು ಆಹಾರ ಹೀಟರ್‌ಗಳನ್ನು ಸಿದ್ಧಪಡಿಸಲಾಗಿದೆ. ಎಗ್ರೋಲ್ಸ್, ವೆಜ್ರೋಲ್ಸ್, ಇಡ್ಲಿ, ವೆಜ್ ಪಲಾವ್, ಹೆಸರುಬೇಳೆ ಹಲ್ವಾ, ತೆಂಗಿನ ಕಾಯಿ ಚಟ್ನಿ ಸೇರಿದಂತೆ ಹಲವು ಬಗೆಯ ಆಹಾರಗಳನ್ನು ತಯಾರಿಸಿದೆ. ಶೂನ್ಯ ಗುರುತ್ವವಿರುವ ಬಾಹ್ಯಾಕಾಶದಲ್ಲಿ ದ್ರವ ಪದಾರ್ಥಗಳನ್ನು ಸೇವಿಸಲು ಅನುಕೂಲವಾಗುವಂತೆ ನೀರು ಮತ್ತು ಜ್ಯೂಸ್ ನಂತಹ ಪಾಕೆಟ್‌ಗಳನ್ನು ಸಹ ತಯಾರಿಸಲಾಗಿದೆ. ಇದಕ್ಕಾಗಿ ವಿಶೇಷ ಕಂಟೈನರ್‌ಗಳನ್ನು ಸಿದ್ಧಪಡಿಸಲಾಗುತ್ತದೆ. ಗಗನಯಾತ್ರಿಗಳ ಜತೆಗೆ ಸುಮಾರು 60 ಕೆಜಿಯಷ್ಟು ಆಹಾರ ಹಾಗೂ 100 ಲೀಟರ್ ನೀರು ರವಾನೆಯಾಗಲಿದೆ.


ಡಿಎಫ್‌ಆರ್‌ಎಲ್‌ನಲ್ಲಿ ಒಟ್ಟು 20 ವಿಜ್ಞಾನಿಗಳು ಗಗನಯಾತ್ರಿಗಳಿಗೆ ಆಹಾರ ತಯಾರಿಸುವ ಕಾರ್ಯದಲ್ಲಿ ತಲ್ಲೀನರಾಗಿದ್ದಾರೆ. ಈಗಾಗಲೇ ಅಮೆರಿಕದ ನಾಸ ಯಶಸ್ವಿಯಾಗಿ ಗಗನಾಯಾತ್ರೆ ಪೂರ್ಣಗೊಳಿಸಿದೆ.

ಡಿಆರ್‌ಡಿಒನ ಮೈಸೂರು ಮೂಲದ ರಕ್ಷಣಾ ಆಹಾರ ಸಂಶೋಧನಾ ಪ್ರಯೋಗಾಲಯದ (ಡಿಎಫ್‌ಆರ್‌ಎಲ್) ಪ್ರಾಣಿಗಳ ಉತ್ಪನ್ನ ವಿಭಾಗದ ವಿಜ್ಞಾನಿಗಳು ವಿಶೇಷ ರಸವನ್ನು ದಾಳಿಂಬೆ ಸಿಪ್ಪೆಗಳಿಂದ ಅಭಿವೃದ್ಧಿ ಪಡಿಸಿದ್ದಾರೆ. ಆ ರಸವನ್ನು ಮಾಂಸಕ್ಕೆ ಚುಚ್ಚಿದರೆ ಮತ್ತು ಹಚ್ಚಿದರೆ ವಿನಾಶಕಾರಿ ಬ್ಯಾಕ್ಟೀರಿಯ ಕಾರ್ಯದಿಂದ ಮಾಂಸ ನಷ್ಟವಾಗುವುದನ್ನು ತಪ್ಪಿಸಬಹುದು. ಅದು ವಾರದವರೆಗೆ ಸಹಜವಾದ ರುಚಿಯಲ್ಲೇ ಉಳಿಯುತ್ತದೆ.

ಒಟ್ಟಿನಲ್ಲಿ ಡಿಎಫ್‌ಆರ್‌ಎಲ್' ಸಂಸ್ಥೆಯು ತಂತ್ರಜ್ಞಾನ ಬಳಸಿ ಸಂಸ್ಕರಿಸಿ ಉತ್ಪಾದಿಸಿದ ಆಹಾರ ಪದಾರ್ಥಗಳು ದೇಶವಿದೇಶದಲ್ಲಿ ಹೆಸರು ಮಾಡುವ ಮೂಲಕ ನಮ್ಮ ರಾಜ್ಯದ ಖ್ಯಾತಿಯನ್ನು ಹೆಚ್ಚಿಸಿದೆ.



Download From : www.kpscvaani.com



# ಧಾರವಾಡ ಎಮ್ಮೆ

## ಜಾಗತಿಕ ಹೆಮ್ಮೆ

● ಕೆ.ಎಸ್.ರಾಜಮನ್ನಾರ್

ಧಾರವಾಡ ಕಲೆ, ಸಾಹಿತ್ಯ, ಸಂಗೀತಕ್ಕೆ ಹೆಸರು ವಾಸಿ. ಇಲ್ಲಿನ ಪೇಡದ ರುಚಿ ಎಲ್ಲರ ಬಾಯಲ್ಲಿ ನೀರೂರಿಸುತ್ತದೆ. ಈಗ 'ಧಾರವಾಡಿ ಎಮ್ಮೆ' ತಳಿ ಜಾಗತಿಕ ಭೂಪಟದಲ್ಲಿ ಸ್ಥಾನ ಪಡೆದು ಕರುನಾಡಿನ ಮಣಿಮುಕುಟಕ್ಕೆ ಮತ್ತೊಂದು ಗರಿ ತೊಡಿಸಿದೆ. ಧಾರವಾಡಿ ಎಮ್ಮೆ ತಳಿ ಹೊಸದೇನಲ್ಲ, ನಾಡಿನ ರೈತ ಸಮುದಾಯ ತಲೆ ತಲಾಂತರಗಳಿಂದ, ನೂರಾರು ವರ್ಷಗಳಿಂದ, ಪಾರಂಪರಿಕವಾಗಿ ಅತ್ಯಂತ ಜತನದಿಂದ ಸಾಕಿ, ಕಾಪಾಡಿಕೊಂಡು ಬಂದಿರುವುದು ವಿಶೇಷ. ರೈತರೇ ಇದರ ನಿಜವಾದ ವಾರಸುದಾರರು. ಉತ್ತರ ಮತ್ತು ಮಧ್ಯ ಕರ್ನಾಟಕ ಭಾಗದಲ್ಲಿ ಜೀವನೋಪಾಯಕ್ಕಾಗಿ ಬೇಸಾಯವನ್ನೇ ಪ್ರಮುಖವಾಗಿ ಆಧರಿಸಿರುವ ರೈತ ಸಮುದಾಯ ಮಾತ್ರವಲ್ಲದೇ, ವಿಭಿನ್ನ ಧರ್ಮೀಯರಾದ ಜೈನರು, ಲಿಂಗಾಯಿತರು, ಬ್ರಾಹ್ಮಣರು, ಮರಾಠರು ಹೀಗೆ ಎಲ್ಲಾ ಜನ ಸಮುದಾಯದವರು ಸಾಕಿಕೊಂಡು ಬದುಕಿನ ಭಾಗ್ಯಲಕ್ಷ್ಮಿಯನ್ನು ಈ ಮೂಲಕ ನೋಡುತ್ತಿದ್ದಾರೆ.

ನಾಡಿನ ರೈತ ಸಮುದಾಯ ಈ ವಿಶಿಷ್ಟ ತಳಿಯನ್ನು ಸರ್ಕಾರಕ್ಕೆ ದಸರಾ ಕೊಡುಗೆಯಾಗಿ ನೀಡಿದೆ ಎಂದರೆ ಅತಿಶಯೋಕ್ತಿಯಲ್ಲ. ಕಾರಣವಿಷ್ಟೇ, ಇದು ಕೇಂದ್ರ ಗೆಜೆಟ್‌ನಲ್ಲಿ ಅಧಿಸೂಚನೆ ಪ್ರಕಟವಾದ ನಂತರ ಈ ತಳಿ ಸರ್ಕಾರದ ಸ್ವಾಮ್ಯಕ್ಕೆ ಒಳಪಡಲಿದೆ. ಮುಂದೆ ಇದರ ಪಾಲನೆ-ಪೋಷಣೆ ಮಾಡುವುದು, ತಳಿ ಸಂತತಿ ಅಭಿವೃದ್ಧಿ ಪಡಿಸುವುದು ಮತ್ತು ಜನಪ್ರಿಯಗೊಳಿಸುವ ಗುರುತರ ಹೊಣೆಗಾರಿಕೆ ಸರ್ಕಾರದ ಹೆಗಲಿಗೆ ಬರಲಿದೆ. ಹೀಗಾಗಿ ಸಮುದಾಯದ ಹಕ್ಕು ಇನ್ನು ಮುಂದೆ ಸರ್ಕಾರದ ಹಕ್ಕಾಗಲಿದೆ. ಇನ್ನು ತಳಿಯ ಸಂರಕ್ಷಣೆ ಮತ್ತು ಸಂಶೋಧನೆ ಕಡೆಗೆ ಸರ್ಕಾರ ಮುಂದಿನ ದಿನಗಳಲ್ಲಿ ಹೆಚ್ಚಿನ ಕಾಳಜಿ ತೋರಿಸುವುದು ಅನಿವಾರ್ಯವಾಗಲಿದೆ.



Download From : www.kpscvaani.com

**ಚಿತ್ರದುರ್ಗದಿಂದ ಬೀದರ್ ವರೆಗೆ, ಉತ್ತರ ಕರ್ನಾಟಕದಿಂದ ಮಧ್ಯ ಕರ್ನಾಟಕದ 14 ಜಿಲ್ಲೆಗಳಲ್ಲಿ ಕಾಣಸಿಗುವ 'ಧಾರವಾಡಿ ಎಮ್ಮೆ' ಸಂತತಿಗೆ 'ರಾಷ್ಟ್ರೀಯ ತಳಿ' ಎಂಬ ಬಿರುದು ಸಂದಿದೆ. ರಾಜ್ಯದ 1 ಲಕ್ಷದ 2 ಸಾವಿರಕ್ಕೂ ಹೆಚ್ಚು ಚದರ ಕಿಲೋಮೀಟರ್ ವಿಶಾಲ ಪ್ರದೇಶದಲ್ಲಿ ಎಮ್ಮೆ ಸಂತತಿ ವ್ಯಾಪ್ತಿ ಹರಡಿದೆ. 2001ರ ಜಾನುವಾರು ಗಣತಿ ಪ್ರಕಾರ ರಾಜ್ಯದಲ್ಲಿ ಧಾರವಾಡಿ ಎಮ್ಮೆ ಸಂತತಿ ಸಂಖ್ಯೆ 18 ಲಕ್ಷ. ಮುಖ, ಮೈ, ಕಣ್ಣು ಮತ್ತು ಬಾಲದ ಗುಚ್ಛ ಬಹುತೇಕ ಕಪ್ಪಾಗಿರುವುದು ವಿಶೇಷ. ಅರ್ಧ ಚಂದ್ರಾಕಾರದ ಕೊಂಬನ್ನು ನೋಡಿದ ತಕ್ಷಣವೇ ಇದು ಧಾರವಾಡಿ ಎಮ್ಮೆ ತಳಿ ಎಂದು ಸುಲಭವಾಗಿ ಗುರುತಿಸಬಹುದು. ಉತ್ತರ ಕರ್ನಾಟಕ ಭಾಗದಲ್ಲಿ ಈ ಎಮ್ಮೆ ತಳಿಯನ್ನು ಹೊಳೆಸಾಲು, ಬಾದಾಮಿ, ಜವಾರಿ, ಮುಂಡರಗಿ ಎಮ್ಮೆ ಎಂಬ ಬೇರೆ, ಬೇರೆ ಹೆಸರುಗಳಿಂದಲೂ ಕರೆಯುತ್ತಾರೆ. ಕಳೆದ ವರ್ಷ ಮುಧೋಳದ ನಾಯಿ, ಈ ವರ್ಷ ಧಾರವಾಡಿ ಎಮ್ಮೆ ವಿಶೇಷ ತಳಿ ಕೀರ್ತಿಗೆ ಭಾಜನವಾಗಿ ಕರುನಾಡಿನ ಸಂಭ್ರಮ ಇಮ್ಮಡಿಗೊಂಡಿದೆ.**

**ಧಾರವಾಡಿ ಎಮ್ಮೆ 14 ಜಿಲ್ಲೆಗಳಲ್ಲಿ ಪ್ರಸಿದ್ಧಿ:**

ಅಂದ ಹಾಗೆ, ಉತ್ತರ ಕರ್ನಾಟಕ ಭಾಗದಲ್ಲಿ ಧಾರವಾಡಿ ಎಮ್ಮೆಯನ್ನು ಹಲವು ಹೆಸರುಗಳಿಂದ ಕರೆಯುವುದು ಸಾಮಾನ್ಯವಾಗಿದೆ. ಅವುಗಳೆಂದರೆ ಹೊಳೆಸಾಲು, ಬದಾಮಿ ಎಮ್ಮೆ, ಜವಾರಿ ಎಮ್ಮೆ, ಮುಂಡರಗಿ ಎಮ್ಮೆ ಹೀಗೆ ಬೇರೆ, ಬೇರೆ ಹೆಸರುಗಳಿಂದ ಕರೆಯಲಾಗುತ್ತದೆ. ಕೊಪ್ಪಳ, ಬೀದರ್, ಬಾಗಲಕೋಟೆ, ವಿಜಯಪುರ, ಹಾವೇರಿ, ಗದಗ, ಬಳ್ಳಾರಿ, ಚಿತ್ರದುರ್ಗ, ರಾಯಚೂರು, ಯಾದಗಿರಿ, ಬೆಳಗಾವಿ, ಧಾರವಾಡ, ದಾವಣಗೆರೆ, ಕಲಬುರಗಿ ಸೇರಿದಂತೆ ಒಟ್ಟು 14 ಜಿಲ್ಲೆಗಳಲ್ಲಿ 18 ಲಕ್ಷಕ್ಕೂ ಹೆಚ್ಚು ಧಾರವಾಡಿ ಎಮ್ಮಿ ಸಂತತಿಯಿದೆ. ಒಂದು ಲಕ್ಷದ ಎರಡು ಸಾವಿರಕ್ಕೂ ಹೆಚ್ಚು ಚದರ ಕಿಲೋಮೀಟರ್‌ಗೂ ಮೀರಿದ ವ್ಯಾಪ್ತಿಯ ವಿಶಾಲ ಪ್ರದೇಶದಲ್ಲಿ ಈ ಎಮ್ಮೆ ಸಂತತಿ ಹರಡಿಕೊಂಡಿದೆ.

ನವದೆಹಲಿಯ ಭಾರತೀಯ ಕೃಷಿ ಅನುಸಂಧಾನ ಪರಿಷತ್ತಿನ ಪಶುಸಂಗೋಪನ ವಿಭಾಗ, ಇತ್ತೀಚೆಗೆ ನಡೆಸಿದ ಸಭೆಯಲ್ಲಿ ರಾಜ್ಯದ ಧಾರವಾಡಿ ತಳಿ ಎಮ್ಮೆಗೆ ಇಂಡಿಯಾ ಬಫೆಲೋ ಧಾರವಾಡಿ ಎಂಬ ಪ್ರವೇಶ ಸಂಖ್ಯೆ ನೀಡಲಾಗಿದೆ. ಈ ಮೂಲಕ ರಾಷ್ಟ್ರೀಯ ಮಾನ್ಯತೆ ಪಡೆದ ರಾಜ್ಯದ ಮೊದಲ ಎಮ್ಮೆ ತಳಿ ಹಾಗೂ ದೇಶದ 18ನೇ ತಳಿ ಎಂಬ ಕೀರ್ತಿಗೆ ಭಾಜನವಾಗಿದೆ.

**ದೇಹದ ಗುಣಲಕ್ಷಣಗಳು:**

ಈ ತಳಿಯ ಎಮ್ಮೆಯ ದೇಹದ ಮೇಲ್ಭಾಗದಿಂದ ಕೆಳಭಾಗದವರೆಗೂ ಕಪ್ಪು ಬಣ್ಣವಿರುತ್ತದೆ. ಕೊಂಬುಗಳು ಬೂದಿ ಬಣ್ಣದಿಂದ ಕೂಡಿರುತ್ತವೆ. ಕಿವಿಗಳು ನೇರವಾಗಿ ಆಕಾಶ ನೋಡುವ ರೀತಿಯಲ್ಲಿ ನೆಟ್ಟಗಿರುತ್ತದೆ. ಇದರ ಗುಣಲಕ್ಷಣದ ಮೇಲೆ ಸಂತತಿಯನ್ನು ಬಹಳ ಸರಳವಾಗಿ ಗುರುತಿಸಬಹುದು ಎಂದು ಇದರ ಬಗ್ಗೆ ದೀರ್ಘಕಾಲ ಅಧ್ಯಯನ ಮಾಡಿ ಜಾಗತಿಕ ಭೂಪಟದಲ್ಲಿ ವಿಶಿಷ್ಟ ಮಾನ್ಯತೆ ದೊರಕಿಸಿ ಕೊಡಲು ಶ್ರಮಿಸಿದ ಧಾರವಾಡ ಕೃಷಿ ವಿಶ್ವವಿದ್ಯಾನಿಲಯದ ನಿವೃತ್ತ ಪ್ರಾಧ್ಯಾಪಕ ವಿ.ಎಸ್.ಕುಲಕರ್ಣಿ ಅವರು ಸಂಶೋಧನೆ ಮತ್ತು ತಳಿ ಕುರಿತು ಅನುಭವ ಹಂಚಿಕೊಂಡಿದ್ದಾರೆ.

ಕುಲಕರ್ಣಿ ಅವರು ಹೇಳುವ ಪ್ರಕಾರ ಧಾರವಾಡಿ ಎಮ್ಮೆ ಕೊಂಬುಗಳು ಸಾಮಾನ್ಯವಾಗಿ ಅರ್ಧಚಂದ್ರಾಕೃತಿಯಲ್ಲಿ ಇರುತ್ತವೆ. ಅಲ್ಲದೆ ಈ ತಳಿಯ ಕೆಲವು ಎಮ್ಮೆಗಳಲ್ಲಿ ಕೊಂಬುಗಳು ಆಕಾಶದೆಡೆ ಚಾಚಿಕೊಂಡಿರುತ್ತವೆ. ಇದೇ ತಳಿಯ ಇನ್ನೂ ಕೆಲವು ಎಮ್ಮೆಗಳಲ್ಲಿ ಕೊಂಬುಗಳು ತಲೆಯಿಂದ ನೇರವಾಗಿ ಭೂಮಿಯ ಕಡೆ ಇಳಿಜಾರಿನಂತೆ ಮೂಡಿರುತ್ತವೆ.

ಈ ಎಮ್ಮೆಯ ಗಂಡು ಮತ್ತು ಹೆಣ್ಣಿನ ಕೊಂಬುಗಳು ಬೇರೆಬೇರೆಯಾಗಿರುತ್ತವೆ ಮತ್ತು ಕೆಚ್ಚಲು ಸಾಮಾನ್ಯವಾಗಿ ದುಂಡಾಗಿರುತ್ತದೆ. ಉತ್ತರ ಕರ್ನಾಟಕ ಭಾಗದಲ್ಲಿ ಒಂದು ಕುಟುಂಬ ಕನಿಷ್ಠ ನಾಲ್ಕರಿಂದ ಐದು ಎಮ್ಮೆಗಳನ್ನು ಸಾಕಿ-ಸಲಹುವುದು ಸಾಮಾನ್ಯವಾಗಿ ಕಂಡು ಬರುತ್ತದೆ. ವಯಸ್ಕ ಹೆಣ್ಣು ಎಮ್ಮೆಗಳ ತೂಕ 335 ಕೆಜಿ ಹಾಗೂ ಗಂಡು ಎಮ್ಮೆ 175 ಕೆಜಿ ತೂಕವಿರುತ್ತದೆ.

ಈ ತಳಿಯ ಎಮ್ಮೆಗಳು ವರ್ಷದಲ್ಲಿ ಗರಿಷ್ಠ ಹನ್ನೊಂದು ತಿಂಗಳು ಹಾಲು ಕೊಡುವುದು ವಿಶೇಷವಾಗಿದೆ. ಧಾರವಾಡ ತಾಲೂಕಿನ ತಪ್ಪಲು ಪ್ರದೇಶದಲ್ಲಿ ವಾಸಮಾಡುತ್ತಿರುವ ಮರಾಠ ಗೌಳಿ ಸಮುದಾಯ ಜೀವನ ನಿರ್ವಹಣೆಗೆ, ಆದಾಯದ ಗಳಿಕೆಗೆ ಪ್ರಧಾನವಾಗಿ ಇವುಗಳನ್ನೇ ನಂಬಿಕೊಂಡಿದ್ದಾರೆ. ಧಾರವಾಡ ತಾಲೂಕಿನ ಎಮ್ಮೆ ತಳಿಯ ಹಾಲು ಶೇಕಡ 80 ರಷ್ಟು ಖೋವಾ ತಯಾರಿಕೆಗೆ ಬಳಕೆಯಾಗುತ್ತದೆ.

**ವರ್ಷದ 335 ದಿನವೂ ನಿರಂತರ ಹಾಲು:**

ಧಾರವಾಡ ಎಮ್ಮೆಯ ಮತ್ತೊಂದು ವಿಶೇಷ ಗುಣ ಎಂದರೆ ವರ್ಷದಲ್ಲಿ ಮುನ್ನೂರಕ್ಕೂ ಹೆಚ್ಚು ದಿನ ಹಾಲು ಕೊಡುತ್ತದೆ. ತಿಂಗಳ ಲೆಕ್ಕದಲ್ಲಿ ಹೇಳುವುದಾದರೆ ಸರಾಸರಿ ಹತ್ತರಿಂದ, ಹನ್ನೊಂದು ತಿಂಗಳ ಕಾಲ ಹಾಲು ಕೊಡುತ್ತದೆ. ಪ್ರತಿ 17 ರಿಂದ 20 ತಿಂಗಳ ಅವಧಿಯಲ್ಲಿ ಒಂದು ಬಾರಿ ಕರು ಹಾಕುತ್ತದೆ. ಒಮ್ಮೆ ಕರು ಹಾಕಿದ ನಂತರ ಹಾಲು ನಿತ್ಯ ನಿರಂತರವಾಗಿರುತ್ತದೆ. ಹಾಲಿನಲ್ಲಿ ಶೇ.7ರಷ್ಟು ಕೊಬ್ಬಿನ ಅಂಶವಿರುತ್ತದೆ. ಈ ತಳಿಯ ಎಮ್ಮೆಯ ಹಾಲು ಉತ್ತರ ಕರ್ನಾಟಕದ ಜನಪ್ರಿಯ ಸಿಹಿತಿಂಡಿಗಳಿಗೆ ಹೇಳಿ ಮಾಡಿಸಿದಂತಿದೆ.

**900 ರಿಂದ 1200 ಲೀಟರ್ ಹಾಲು:**

ಧಾರವಾಡದ ಪೇಡ, ಬೆಳಗಾವಿಯ ಕುಂದಾ, ಐನಾಪುರದ ಪೇಡ, ಗೋಕಾಕ ಮತ್ತು ಅಮೀನಗಢದ ಕರದಂಟು ತಯಾರಿಕೆಗೆ ಹೆಚ್ಚಾಗಿ ಈ ತಳಿಯ ಹಾಲು



Download From : www.kpscvaani.com



ಧಾರವಾಡ ಎಮ್ಮೆಯ ಮತ್ತೊಂದು ವಿಶೇಷ ಗುಣ ಎಂದರೆ ವರ್ಷದಲ್ಲಿ ಮುನ್ನೂರಕ್ಕೂ ಹೆಚ್ಚು ದಿನ ಹಾಲು ಕೊಡುತ್ತದೆ. ತಿಂಗಳ ಲೆಕ್ಕದಲ್ಲಿ ಹೇಳುವುದಾದರೆ ಸರಾಸರಿ ಹತ್ತರಿಂದ, ಹನ್ನೊಂದು ತಿಂಗಳ ಕಾಲ ಹಾಲು ಕೊಡುತ್ತದೆ. ಪ್ರತಿ 17 ರಿಂದ 20 ತಿಂಗಳ ಅವಧಿಯಲ್ಲಿ ಒಂದು ಬಾರಿ ಕರು ಹಾಕುತ್ತದೆ. ಒಮ್ಮೆ ಕರು ಹಾಕಿದ ನಂತರ ಹಾಲು ನಿತ್ಯ ನಿರಂತರವಾಗಿರುತ್ತದೆ.

ಬಳಸಲಾಗುತ್ತದೆ. ಊರೆಲ್ಲಾ ಸುತ್ತಾಡಿಕೊಂಡು ಬರುವ ಧಾರವಾಡಿ ಎಮ್ಮೆ ಒಂದು ಸೂಲಿನಲ್ಲಿ (ಒಂದು ಕರುವಿನಿಂದ ಮತ್ತೊಂದು ಕರುವಿನ ಅವಧಿಯವರೆಗೆ) 970 ಲೀಟರ್ ಹಾಲು ಕೊಡುತ್ತದೆ. ರೈತರು ಉತ್ತಮ ಪದ್ಧತಿ ಅಳವಡಿಸಿಕೊಂಡು ಅದರ ಪಾಲನೆ–ಪೋಷಣೆಯನ್ನು ಸರಿಯಾದ ರೀತಿಯಲ್ಲಿ ನಿರ್ವಹಣೆ ಮಾಡಿದರೆ ಒಂದು ಸಾವಿರದ ಇನ್ನೂರು ಲೀಟರ್ (1,200ಲೀಟರ್) ವರೆಗೂ ಹಾಲು ಕೊಡುವುದು ವಿಶೇಷ.

**ರಾಷ್ಟ್ರೀಯ ಮಾನ್ಯತೆಯ ನೋಂದಣಿ ಪ್ರಕ್ರಿಯೆ:**

ಭಾರತೀಯ ಕೃಷಿ ಸಂಶೋಧನಾ ಮಂಡಳಿಯ ಒಂದು ಭಾಗವಾಗಿರುವ ರಾಷ್ಟ್ರೀಯ ಪಶು ಅನುವಂಶಿಕ ಸಂಪನ್ಮೂಲಗಳ ಸಂರಕ್ಷಣಾ ಸಂಸ್ಥೆ (ಎನ್‌ಬಿಎಜಿಆರ್)ಯ ತಜ್ಞರ ಸಮಿತಿ, ತಳಿಯನ್ನು ಆಯ್ಕೆ ಮಾಡಿ ಗುರುತಿಸಲಿದೆ. ರೈತರ ಮನೆಯ ಬಾಗಿಲಿಗೆ ಹೋಗಿ

**ಮೌಳಿ – ಯಳಗ ತಳಿಗೂ ಮಾನ್ಯತೆ**

ವಿಜಯಪುರದ 'ಮೌಳಿ' ಮತ್ತು ಬಾಗಲಕೋಟೆ ಸುತ್ತಮುತ್ತಲಿನ ಪ್ರದೇಶಗಳಲ್ಲಿರುವ 'ಯಳಗ' ಎಂಬ ಕುರಿ ತಳಿ ಜಾಗತಿಕ ಮಾನ್ಯತೆಯನ್ನು ಕೊರಳಿಗೆ ಹಾಕಿಕೊಳ್ಳುವ ದಾರಿಯಲ್ಲಿ ಸಾಗಿದೆ. ದೇಶದ ಬೇರೆ, ಬೇರೆ ರಾಜ್ಯಗಳಲ್ಲಿನ ಕತ್ತೆ, ಹಂದಿಗೂ ಈ ರೀತಿ ರಾಷ್ಟ್ರೀಯ ತಳಿ ಬಿರುದು ಸಂದಿದೆ. ಸಮುದಾಯದ ಆಸ್ತಿಯಾಗಿರುವ ನಾಡಿನ ತಳಿಗಳನ್ನು ಭವಿಷ್ಯದಲ್ಲಿ ಅತ್ಯಂತ ಜತನದಿಂದ ಕಾಪಾಡುವ ಮತ್ತು ಅವುಗಳ ವಂಶವಾಹಿನಿಗಳನ್ನು ವೃದ್ಧಿ ಮಾಡುವ ಗುರುತರ ಹೊಣೆಗಾರಿಕೆ ಈಗ ಸರ್ಕಾರದ ಹೆಗಲೇರಿದೆ. ಕರ್ನಾಟಕದ ಬಳಿಕ ಒಡಿಶಾದ "ಮಂಡ ಎಮ್ಮೆ"ಗೂ ಸ್ವದೇಶಿ ತಳಿ ಎಂಬ ಹೆಗ್ಗಳಿಕೆ ಲಭ್ಯವಾಗಿದ್ದು ಈ ಮೂಲಕ ದೇಶದಲ್ಲಿ ಮಾನ್ಯತೆ ಪಡೆದ ಜಾನುವಾರು ತಳಿಗಳ ಸಂಖ್ಯೆ 202ಕ್ಕೆ ಏರಿಕೆಯಾಗಿದೆ. ಇದರಲ್ಲಿ ಎಮ್ಮೆ ತಳಿಗಳ ಸಂಖ್ಯೆ 19 ಕ್ಕೆ ಏರಿಕೆಯಾಗಿದೆ.



Download From : www.kpscvaani.com



**ಧಾರವಾಡಿ ಎಮ್ಮೆಗೆ ಮಾನ್ಯತೆ ಪಡೆಯಲು 1970 ರಿಂದಲೇ ಪ್ರಯತ್ನಿಸಲಾಗಿತ್ತು. ಭಾರತ ದೇಶಕ್ಕೆ ಕೃತಕ ಗರ್ಭಧಾರಣೆ ಕಾಲಿಟ್ಟು 60 ವರ್ಷಗಳೇ ಕಳೆದಿದ್ದರೂ ಕೂಡ ಈ ಭಾಗದ ರೈತರು ಧಾರವಾಡಿ ಎಮ್ಮೆ ತಳಿಯ ಶುದ್ಧತೆಯನ್ನು ಕಾಪಾಡಿಕೊಂಡು ಬಂದಿರುವುದೇ ಧಾರವಾಡಿ ಎಮ್ಮೆಗೆ ಜಾಗತಿಕ ಮನ್ನಣೆ ದೊರಕಲು ಸಾಧ್ಯವಾಯಿತು. ಈ ಮೂಲಕ ಎಮ್ಮೆಗಳಲ್ಲಿ ಮಾನ್ಯತೆ ಪಡೆದ ರಾಜ್ಯದ ಮೊದಲ ತಳಿ ಎಂಬ ಕೀರ್ತಿಗೂ ಪಾತ್ರವಾಗಿದೆ.**

ಎಮ್ಮೆಯ ಬದುಕಿನ ಗುಣಲಕ್ಷಣಗಳ, ಜೀವಿತದ ಅವಧಿಯಲ್ಲಿ ಬದುಕುವ ರೀತಿ, ಅವುಗಳ ಭೌತಿಕ ಮತ್ತು ರಾಸಾಯನಿಕ ಗುಣವಿಶೇಷಗಳು ಮತ್ತು ರೈತರಿಂದ ಪಡೆದುಕೊಂಡಿರುವ ಅನುಭವದ ಮನವಿ ಮತ್ತು ಸಂಶೋಧನಾ ಪತ್ರಗಳನ್ನು ಕೂಲಂಕುಷವಾಗಿ ಪರಿಶೀಲಿಸಿದ ನಂತರ ನೋಂದಣಿ ಸಂಖ್ಯೆ ನೀಡುತ್ತದೆ. ಈಗ ತಜ್ಞರ ಸಮಿತಿ ವರದಿ ಆಧರಿಸಿ ಭಾರತೀಯ ಕೃಷಿ ಅನುಸಂಧಾನ ಪರಿಷತ್ತಿನ ಪಶುಸಂಗೋಪನಾ ವಿಭಾಗ ಇತ್ತೀಚೆಗೆ ನಡೆಸಿದ ಸಭೆಯಲ್ಲಿ ರಾಜ್ಯದ ಧಾರವಾಡಿ ಎಮ್ಮೆ ತಳಿಗೆ ಇಂಡಿಯಾ ಬಫೆಲೋ –0800–ಧಾರವಾಡಿ –01018 ಎಂದು ತಳಿ ಪ್ರವೇಶ ಸಂಖ್ಯೆ ನೀಡಿದೆ. ಈ ಮೂಲಕ ಎಮ್ಮೆಗಳಲ್ಲಿ ಮಾನ್ಯತೆ ಪಡೆದ ರಾಜ್ಯದ ಮೊದಲ ತಳಿ ಇದಾಗಿದೆ.

ಧಾರವಾಡ ಕೃಷಿ ವಿಶ್ವವಿದ್ಯಾಲಯದ ಪಶು ವಿಜ್ಞಾನ ವಿಭಾಗ 2004 ರಿಂದ ಎಮ್ಮೆ ತಳಿಗೆ ಮಾನ್ಯತೆ ಪಡೆಯಲು ನಿರಂತರ ಪ್ರಯತ್ನ ನಡೆಸಿದ್ದು ಸತತ 17 ವರ್ಷಗಳ ನಿರಂತರ ಪರಿಶ್ರಮ ಮತ್ತು ಸಂಶೋಧನೆಯ ಫಲವಾಗಿ ಮಾನ್ಯತೆಯ ಗೌರವ ಲಭಿಸಿದೆ.

ಎಮ್ಮೆಯಲ್ಲಿ ಮಾನ್ಯತೆ ಪಡೆದ ರಾಜ್ಯದ ಮೊದಲ ತಳಿಯಾದರೂ ದೇಶದಲ್ಲಿ ಇದುವರೆಗೆ ಮೇಕೆ, ಕುರಿ, ಕತ್ತೆ, ಹಂದಿ ಸೇರಿದಂತೆ ಸುಮಾರು ಇನ್ನೂರಕ್ಕೂ ಹೆಚ್ಚು ಜಾನುವಾರುಗಳ ತಳಿಗೆ ಈ ವಿಶೇಷ ಸ್ಥಾನಮಾನ ಲಭಿಸಿದೆ. ಚಿತ್ರದುರ್ಗ ಮತ್ತು ಬೀದರ್ ಸುತ್ತಮುತ್ತಲು ಕಂಡುಬರುವ ನಂದಿದುರ್ಗ ಮತ್ತು ಬಿದರಿ ಎಂಬ ಮೇಕೆ ತಳಿಗಳು ಕಳೆದ 2018ರಲ್ಲಿ ಈ ಗೌರವಕ್ಕೆ ಪಾತ್ರವಾಗಿರುವುದು ಮತ್ತೊಂದು ಸಂತಸದ ಸುದ್ದಿ.

**ಮುಂದೆ ಆಗಬೇಕಿರುವ ಕೆಲಸ**

ಧಾರವಾಡಿ ಎಮ್ಮೆ ತಳಿಯನ್ನು ಮುಂದೆಯೂ ಅತ್ಯಂತ ಜತನದಿಂದ ಕಾಪಾಡಿಕೊಂಡು ರೈತ ಸಮುದಾಯ ಹೆಚ್ಚು ಪ್ರಯೋಜನ ಪಡೆಯಲು ರೈತರೇ ಸಂಘಗಳನ್ನು ಸ್ಥಾಪಿಸಿಕೊಂಡು ಅದರ ಮೂಲಕ ಮಾರಾಟ ಮಾಡುವ ಹೊಸ ವ್ಯವಸ್ಥೆ ರೂಪಿಸಿಕೊಳ್ಳಬೇಕು. ಇದರಿಂದ ದಲ್ಲಾಳಿಗಳನ್ನು ದೂರವಿಟ್ಟು ರೈತರೇ ಹೆಚ್ಚಿನ ಲಾಭ ಪಡೆಯುವ ಅವಕಾಶವಿದೆ.

ಇನ್ನು ಸರ್ಕಾರ ಮಾಡಬೇಕಾಗಿರುವ ಪ್ರಮುಖ ಕೆಲಸವೆಂದರೆ ಪ್ರತಿ ಜಿಲ್ಲೆಯಲ್ಲಿ ಅತ್ಯುತ್ತಮ ಗಂಡು ಮತ್ತು ಹೆಣ್ಣು ತಳಿಗಳನ್ನು ಆಯ್ಕೆ ಮಾಡಿ ವೀರ್ಯಾಣು ಬ್ಯಾಂಕ್ ಸ್ಥಾಪನೆ ಮಾಡಿ, ಮುಂದೆಯೂ ಕೂಡ ಉತ್ತಮ ತಳಿ ನೀಡುವಂತಹ ಸಂತಾನೋತ್ಪತ್ತಿಗೆ ಹೆಚ್ಚು ಗಮನ ಹರಿಸುವುದು.

ಧಾರವಾಡ ಎಮ್ಮೆ ತಳಿಗಾಗಿ ಬೇಕಾಗುವಂತಹ ಪೌಷ್ಠಿಕ ಆಹಾರ ವ್ಯವಸ್ಥೆಗಳ ಬಗ್ಗೆ ಮತ್ತಷ್ಟು ಆಳವಾದ ಅಧ್ಯಯನ ನಡೆಸಿ, ಅವುಗಳು ಹೆಚ್ಚು ಆರೋಗ್ಯವಾಗಿ ಮತ್ತು ಹೆಚ್ಚು ಹಾಲು ಕೊಡುವ ರೀತಿಯಲ್ಲಿ ಪಶು ವಿಶ್ವವಿದ್ಯಾಲಯಗಳು ಹೆಚ್ಚಿನ, ಆಳವಾದ ಸಂಶೋಧನೆ ನಡೆಸಬೇಕು.

ಸಾಮಾನ್ಯವಾಗಿ ಉತ್ತರ ಕರ್ನಾಟಕ ಭಾಗದಲ್ಲಿ ಬಿಸಿಲು ಹೆಚ್ಚಾಗಿರುವ ಕಾರಣ ಬೇಸಿಗೆಯಲ್ಲಿ ಹಾಲಿನ ಇಳುವರಿ ಕಡಿಮೆಯಾಗುವುದು ಸಹಜ. ಬಿಸಿಲ ತಾಪ ತಾಳಲಾರದೆ ನೀರಿನಲ್ಲಿ ಮೈ ನೆನೆಸಿಕೊಳ್ಳಲು ಎಮ್ಮೆಗಳು ಬಯಸುತ್ತವೆ. ಇಂತಹ ಸಮಯದಲ್ಲಿ ದಿನಕ್ಕೆ ಕನಿಷ್ಠ ಎರಡು ಬಾರಿ ಎಮ್ಮೆಗೆ ನೀರಿನ ಸ್ನಾನ ಮಾಡಿಸುವ ಮೂಲಕ ಸಾಧ್ಯವಾದಷ್ಟು ತಂಪಿನ ವಾತಾವರಣದಲ್ಲಿ ಸಾಕಿ, ಸಮರ್ಪಕ ಮೇವಿನ ನಿರ್ವಹಣೆ ಮಾಡಿದರೆ ಇನ್ನೂ ಹೆಚ್ಚು ಹಾಲು ಕೊಡುವ ಸಾಧ್ಯತೆಯಿದೆ. ರೈತ ಸಮುದಾಯ ಇದರ ಬಗ್ಗೆ ಹೆಚ್ಚು ಗಮನಹರಿಸಬೇಕು. ■





Download From : www.kpscvaani.com

# ಯಾಲಕ್ಕಿ ಕಂಪಿನ ನಾಡಲ್ಲಿ
# ಸಿದ್ಧೇಶ್ವರ ದೇವಾಲಯ

**ಸುಂದರವಾದ ವಾಸ್ತುಶಿಲ್ಪಕಲೆ, ದೇವಾಲಯದ ಶಿಖರದ ಪ್ರಮಾಣ ಬದ್ಧತೆ, ಶಿಲ್ಪ ಮತ್ತು ವಾಸ್ತು ವಿನ್ಯಾಸದ ತುಂಬು ಪ್ರದರ್ಶನ ನೀಡುವ ಹಾವೇರಿಯ ಸಿದ್ಧೇಶ್ವರ ದೇವಾಲಯ ಸಾಮಾಜಿಕ, ಧಾರ್ಮಿಕ ಹಾಗೂ ವಾಸ್ತುಶಿಲ್ಪ ವೈಶಿಷ್ಟ್ಯಗಳ ದೃಷ್ಟಿಯಿಂದ ನೋಡುಗರನ್ನು ಆಕರ್ಷಿಸುತ್ತದೆ.**

ಜಿ.ಎಂ. ಶಿರಹಟ್ಟಿ

ಉತ್ತರ ಕರ್ನಾಟಕದ ಸಾಂಸ್ಕೃತಿಕ ಇತಿಹಾಸದಲ್ಲಿ ಹಾವೇರಿ ಪಟ್ಟಣಕ್ಕೆ ವಿಶಿಷ್ಟ ಸ್ಥಾನವಿದೆ. ಹಾವೇರಿಯು ವಾಣಿಜ್ಯ ವ್ಯವಹಾರಗಳೊಂದಿಗೆ ಮತ್ತು ಧರ್ಮಕಲೆಗಳ ಚಟುವಟಿಕೆಗಳೊಂದಿಗೆ ಶ್ರೀಮಂತವಾಗಿ ಬೆಳೆದ ಜಿಲ್ಲೆಗಳಲ್ಲಿ ಒಂದು. ಇಡೀ ಜಿಲ್ಲೆಯ ತುಂಬಾ ಅನೇಕ ಸ್ಮಾರಕಗಳು ಹಬ್ಬಿಕೊಂಡಿದ್ದು, ಅವುಗಳಲ್ಲಿ ಸಿದ್ಧೇಶ್ವರ ದೇವಾಲಯವೂ ಒಂದು.

ಅಗ್ರಹಾರ ಪಟ್ಟಣವಾಗಿ ಹಾವೇರಿಯು ಕಲ್ಯಾಣ ಚಾಳುಕ್ಯರ ಮೊದಲನೆಯ ಸೋಮೇಶ್ವರನ ಕಾಲದಲ್ಲಿ ಪ್ರಸಿದ್ಧಿಗೆ ಬಂತು. ನಾಲ್ನೂರ್ವರು ಮಹಾ ಜನರಿಂದ ಆಳಿಸಿಕೊಂಡಿತು. ಕಾಳಾಮುಖ ಸ್ಥಾನಾಚಾರ್ಯರಾದ ಜ್ಞಾನರಾಶಿ ಯಂಥವರಿಂದ ಶೋಭಿಸಿತ್ತು. ಇಂಥ ರಾಜಗುರುಗಳ ಪ್ರಭಾವ ರಾಜ ಪ್ರೋತ್ಸಾಹಗಳ ಫಲವಾಗಿ ಸಿದ್ಧನಾಥ ಕ್ಷೇತ್ರವೆಂದು ಖ್ಯಾತಿ ಪಡೆಯಿತು. ಈ ಹಿನ್ನೆಲೆಯಲ್ಲಿ ನಿರ್ಮಿತವಾದ "ಸ್ವಯಂಭೂ ಸಿದ್ಧನಾಥ ದೇಗುಲ" ಧಾರ್ಮಿಕ ಹಾಗೂ ವಾಸ್ತು ಶಿಲ್ಪ ವೈಶಿಷ್ಟ್ಯ ದೃಷ್ಟಿಯಿಂದ ನಮ್ಮ ಗಮನವನ್ನು ಸೆಳೆಯುತ್ತದೆ.

ಪುರದ ಸಿದ್ಧೇಶ್ವರ ಗುಡಿಯೆಂದು ಜನಜನಿತವಾಗಿರುವ ಈ ದೇಗುಲ ಪಶ್ಚಿಮಾಭಿಮುಖವಾಗಿರುವುದು ಸ್ವಾರಸ್ಯಕರ. ರಸ್ತೆಯಂಚಿನಿಂದ ಅದರತ್ತ ನಿಧಾನವಾಗಿ ನಡೆದಂತೆ ಗುಡಿ ಭೂತಳದಿಂದ ಮೇಲೆರಿ ಬಂದಂತೆ ಭಾಸವಾಗುತ್ತದೆ. (ಅಷ್ಟು ತಗ್ಗಿನಲ್ಲಿದೆ) ಇದನ್ನು ಯಾರು ಕಟ್ಟಿಸಿದರು? ಯಾವಾಗ ನಿರ್ಮಿತವಾಯಿತು? ನಮಗೆ ಖಚಿತವಾಗಿ ಇನ್ನೂ ತಿಳಿದು ಬಂದಿಲ್ಲ. ಆದರೆ 1109 ರ ಹೊತ್ತಿಗೆ (ಆರನೇ ವಿಕ್ರಮಾದಿತ್ಯನ ಕಾಲದ ಹೊತ್ತಿಗೆ) ದಾನದತ್ತಿಗಳನ್ನು





Download From : www.kpscvaani.com



ಪಡೆಯಲು ಸಿದ್ಧವಾಗಿತ್ತು ಸ್ವಯಂಭೂ ಸಿದ್ಧನಾಥ ದೇವಾಲಯ. ಕಾಳಾಮುಖ ಸ್ಥಾನಾಚಾರ್ಯರ ಆಚರಣೆ ಶುರುವಾಗಿತ್ತು. ಈ ಗುಡಿಯ ಅಂತರಾಳದಲ್ಲಿ ಗಡ್ಡ ಜಟಾಧಾರಿ ರಾಜ ಗುರುವಿನ ದೊಡ್ಡ ಶಿಲ್ಪಗಳಿವೆ. ಹಾವೇರಿ ಶಾಸನಗಳೂ ಈ ಮಾತನ್ನು ಪುಷ್ಠೀಕರಿಸುತ್ತವೆ.

ಸಿದ್ಧೇಶ್ವರಾಲಯ ಕಲ್ಯಾಣ ಚಾಳುಕ್ಯರ ವೇಸರ ಶೈಲಿಯ ವಾಸ್ತು ಶಿಲ್ಪ ರತ್ನವೆಂದು ಹೇಳಬಹುದು. ಸಿದ್ಧನಾಥ ಲಿಂಗವುಳ್ಳ ಗರ್ಭಗೃಹ ಈಗ ಬಸವಣ್ಣನ್ನೊಳಗೊಂಡ ಅಂತರಾಳ ಹಾಗೂ ವಿಶಾಲವಾದ ಹಲವು ಕಂಬಗಳಿಂದ ಕೂಡಿದ ನವರಂಗ ಮಂಟಪಗಳೆಲ್ಲ ಶಿಲಾಮಯವಾಗಿವೆ. ಇಲ್ಲಿಯ ನವರಂಗ ಮಂಟಪಕ್ಕೆ ಮೂರು ಕಡೆಗಳಿಂದ ಪ್ರವೇಶಿಸಲು ದ್ವಾರಗಳಿವೆ. ಉತ್ತರ ದ್ವಾರದತ್ತ ಹೋದರೆ ಎದುರಿಗೆ ಹಿರಣ್ಯಕಷ್ಯಪನನ್ನು ತೊಡೆಯ ಮೇಲಿಟ್ಟುಕೊಂಡು ಕರಳು ಬಗೆಯುತ್ತ ಕುಳಿತ ಉಗ್ರ ನರಸಿಂಹನ ವಿಗ್ರಹುಳ್ಳ ಒಂದು ಪುಟ್ಟ ನರಸಿಂಹಾಲಯವಿದೆ. ಸಿದ್ಧೇಶ್ವರ – ನರಸಿಂಹರ ಸಹಬಾಳ್ವೆ ಇಲ್ಲಿ ನಮ್ಮ ಧರ್ಮದೃಷ್ಟಿಯನ್ನು ಹಿಗ್ಗಿಸುವಂತ್ತಿದೆ ಎಂದು ಪ್ರಾಧ್ಯಾಪಕರಾದ ಡಾ. ರಘುನಾಥ ಭಟ್ಟರು ಅಭಿಪ್ರಾಯ ಪಡುತ್ತಾರೆ.

ಇಷ್ಟು ಸಾಲದೆಂಬಂತೆ ಸಿದ್ಧೇಶ್ವರಾಲಯದ ನವರಂಗದಲ್ಲಿರುವ ಯೋಗ ನಾರಾಯಣನೆಂದು ಹೇಳಬಹುದಾದ ವೈಷ್ಣವ ಮೂರ್ತಿ ತನ್ನ ಕೈಗಳಲ್ಲಿ ಪುಟ್ಟ ಲಿಂಗವನ್ನು ಹಿಡಿದುಕೊಂಡು ಧ್ಯಾನದಲ್ಲಿ ಮಗ್ನವಾಗಿರುವುದು ತುಂಬ ಸ್ವಾರಸ್ಯಕರವಾಗಿದೆ. ಈ ಮೂರ್ತಿಯ ಬಹುಭಾಗ ಭಗ್ನವಾಗಿದೆ. ಈ ಮೂರ್ತಿಯ ಬಳಿಯಿರುವ ಚತುರ್ಭುಜೆ ಲಕ್ಷ್ಮೀ ವಿಗ್ರಹದ ಕಿರೀಟದಲ್ಲಿ ನಾಗಲಿಂಗ ಧರಿಸಿರುವುದು ಅಷ್ಟೇ ಕುತೂಹಲ ಪೂರ್ಣವಾಗಿದೆ. ಸಿದ್ಧೇಶ್ವರಾಲಯದ ಶಿಲ್ಪಕಲೆ ವೈಶಿಷ್ಟಪೂರ್ಣವಾಗಿದೆ. ಈಚೆಗೆ ಈ ದೇಗುಲದ ಆವರಣದಲ್ಲಿ ಇದ್ದ "ಜ್ಞಾನರಾಶಿ" ಮುನಿಯ ಆರಾಧ್ಯ ದೇವಿಯಾಗಿದ್ದ ಸರಸ್ವತಿಯ ಭಗ್ನ ಮೂರ್ತಿಯನ್ನು ದೇವಾಲಯದ ಪೌಳಿಯಲ್ಲಿಡಲಾಗಿದೆ.

ಈ ಸಿದ್ಧೇಶ್ವರ ದೇವಾಲಯದ ವಾಸ್ತು ವೈಶಿಷ್ಟ್ಯವೂ ಶಿಲ್ಪ ವೈಚಿತ್ರ್ಯದಷ್ಟೇ ಸ್ವಾರಸ್ಯಕರವಾಗಿದೆಯೆಂಬುದನ್ನು ಮರೆಯಬಾರದು. ತುಸು ತಗ್ಗಿನಲ್ಲಿರುವ ಗುಡಿಯ ಐದು ಆದಿಷ್ಠಾನ ಪಟ್ಟಿಕೆಗಳಲ್ಲಿ ಐದನೆಯ ಮೇಲಪಟ್ಟಿಯಲ್ಲಿ ಸೂಕ್ಷ್ಮ ಕೆತ್ತನೆ ಕೆಲಸ ನೋಡುವಂತಿದೆ. (ಇದೇ ಮುಂದೆ ಹೊಯ್ಸಳ ವಾಸ್ತು ಶೈಲಿಯಲ್ಲಿ ಅತಿ ಅಲಂಕರಣಿ ಪಟ್ಟಿಕೆಯ ಕೆತ್ತನೆಗೆ ಸ್ಫೂರ್ತಿ ನೀಡಿರಬೇಕೆಂದು ರಘುನಾಥ ಭಟ್ಟರು ಅಭಿಪ್ರಾಯ ಪಡುತ್ತಾರೆ) ಈ ಪಟ್ಟಿಕೆಗಳಿಗೆ ಹೊಂದಿಕೊಳ್ಳುವಂತಹ ಕಮಲದ ಎಸಳಿನಂತೆ ಬಾಗಿದ ಸುರುಕಲ್ಲು, ಅದರ ಮೇಲಣ ಕೈಪಿಡಿ ಪಟ್ಟಿಕೆಗಳು ನವರಂಗ ಭಾಗದಲ್ಲೂ, ಪ್ರಮಾಣ ಬದ್ಧವಾದ ನಾಲ್ಕು ತಲಗಳಿಂದ ಹಾಗೂ ಶಿಲ್ಪ ಶ್ರೀಮಂತಿಕೆಯಿಂದ ಶೋಭಿಸುತ್ತಿರುವ ಶಿಖರ ಆಕರ್ಷಣೀಯವಾಗಿದೆ. ಇವೆಲ್ಲವನ್ನು ದೂರದ ದಿಬ್ಬದ ಮೇಲೆ ನಿಂತು ಏಕಚಿತ್ತರಾಗಿ ನೋಡಿದಂತೆ, ಇಡೀ ದೇಗುಲ ಕಮಲೋದ್ಭವದಂತೆ ಭೂತಳದಿಂದ ಗಗನದತ್ತ ನಿಧಾನವಾಗಿ ಮೇಲೇರಿ ಬರುತ್ತಿರುವಂತೆ ಆ ಮೂಲಕ ನಮ್ಮನ್ನೂ ಮೇಲಿನಸ್ತರಕ್ಕೆ ಕೊಂಡೊಯ್ಯುತ್ತಿರುವಂತೆ ಅನುಭವವಾಗುತ್ತದೆ.

ಮತ್ತೆ ಕೆಳಗಿಳಿದು ನೋಡಿದರೆ ಈ ದೇವಾಲಯದ ವಾಸ್ತು ವೈಶಿಷ್ಟ್ಯಗಳಲ್ಲಿ ಕಡಾಯಿ ಹಿಡಿದ ಸುಂದರ ಕಂಬಗಳು, ಶಿಲ್ಪ ವಿನ್ಯಾಸಗಳಿಂದ ಕೂಡಿದ ಬಾಗಿಲುವಾಡ, ಮೇಲ್ಛಾವಣಿಗಳು ನಮ್ಮನ್ನು ಆಕರ್ಷಿಸುತ್ತವೆ. ನವರಂಗದ ಮೇಲ್ಛಾವಣಿಗಳಲ್ಲಿ ಎಡಮೂಲೆಯದು ತುಂಬ ವಿಚಿತ್ರವಾಗಿದೆ. ಕೇಂದ್ರೀಯ ಸ್ಥಾನದಲ್ಲಿ ಶಿವ ಗಜಾಸುರಮರ್ಧನನಾಗಿ ನೃತ್ಯ ಮಾಡುತ್ತಿದ್ದಾನೆ. ಆತನ ಸುತ್ತ ಸಪ್ತ ಮಾತೃಕೆಯರು ತಮ್ಮ ತಮ್ಮ ವಾಹನ ಪರಿವಾರಗಳೊಂದಿಗೆ ನೃತ್ಯಕ್ಕೆ ಪೂರಕವಾದ ಭಂಗಿಯಲ್ಲಿದ್ದಾರೆ. ಈ ಗುಡಿಯು ಪುರದ ಸಾಂಸ್ಕೃತಿಕ ಕಲಾ ಇತಿಹಾಸದ ಮರೆತ ಪುಟಗಳನ್ನು ತೆರೆದು ತೋರಿಸಬಲ್ಲದು, ಹಾಗೂ ಸಹೃದಯರಿಗೆ ಸೌಂದರಾನಂದವನ್ನು ತಂದುಕೊಡುತ್ತದೆ.

ಈಗ ಇಡೀ ದೇವಾಲಯದ ಪ್ರಾಂಗಣವನ್ನು ಹಸಿರು ಹುಲ್ಲಿನಿಂದ ಅಚ್ಚುಕಟ್ಟಾಗಿ ಸುಂದರಗೊಳಿಸಿ ದೇವಾಲಯದ ಸೌಂದರ್ಯವನ್ನು ಇಮ್ಮಡಿಗೊಳಿಸಲಾಗಿದೆ. ಇಡೀ ದೇವಾಲಯವನ್ನು ಶುಚಿಯಾಗಿಟ್ಟು ವಾತಾವರಣವನ್ನು ಸುಂದರಗೊಳಿಸಲಾಗುತ್ತಿದೆ. ಯುಗಾದಿಯ ಸಂದರ್ಭದಲ್ಲಿ ಅಂದರೆ, ಮಾರ್ಚ್–ಏಪ್ರಿಲ್ ತಿಂಗಳಲ್ಲಿ ಈ ಸ್ಥಳಕ್ಕೆ ಹೋಗಲು ಪ್ರಶಸ್ತವಾಗಿರುತ್ತದೆ.

**ಈ ಸ್ಮಾರಕವನ್ನು ನೋಡ ಬಯಸುವ ಪ್ರವಾಸಿಗರು ಬೆಂಗಳೂರು ಅಥವಾ ಹುಬ್ಬಳ್ಳಿಯಿಂದ ರಾಷ್ಟ್ರೀಯ ಹೆದ್ದಾರಿ ನಂ 4 ರ ಮಾರ್ಗವಾಗಿ ಕರ್ನಾಟಕ ರಸ್ತೆ ಸಾರಿಗೆ ಅಥವಾ ಖಾಸಗಿ ವಾಹನಗಳಿಂದ ಹಾವೇರಿ ತಲುಪಬಹುದು ಅಥವಾ ಹಾವೇರಿಯಲ್ಲಿ ರೈಲು ನಿಲ್ದಾಣ ಇರುವುದರಿಂದ ರೈಲಿನ ಮುಖಾಂತರ ಹುಬ್ಬಳ್ಳಿ ಬೆಂಗಳೂರಿನಿಂದ ಹಾವೇರಿ ತಲುಪಬಹುದು. ಈ ದೇವಾಲಯದ ಕುರಿತು ಇನ್ನು ಹೆಚ್ಚಿನ ಮಾಹಿತಿ ಪಡೆಯುಲು ಹಾವೇರಿ ಜಿಲ್ಲೆಯ ಪ್ರವಾಸೋದ್ಯಮ ಇಲಾಖೆ ಕಛೇರಿಯ ದೂರವಾಣಿ ಸಂಖ್ಯೆ 08375–296033 ರ ಮೂಲಕ ಸಂಪರ್ಕಿಸಬಹುದು.**



Download From : www.kpscvaani.com

**ಮಾಹಿತಿ ತಂತ್ರಜ್ಞಾನದಿಂದ ಕರ್ನಾಟಕದ ರಾಜಧಾನಿ ಬೆಂಗಳೂರು ನಗರವು ಅಗಾಧವಾಗಿ ಬೆಳೆಯುತ್ತಿದೆ, ನಗರೀಕರಣದೊಂದಿಗೆ ಜನಸಂಖ್ಯೆಯೂ ಬೆಳೆಯುತ್ತಿದೆ. ಹಳ್ಳಿಗಳಿಂದ ವಲಸೆ ಬಂದ ಜನರು ತಮ್ಮ ಮೂಲ ಸಂಸ್ಕೃತಿ, ಜನಜೀವನ, ಹಳ್ಳಿಗಳ ಸೊಗಡನ್ನು ಮರೆಯುತ್ತಿದ್ದಾರೆ. ಹಾಗಾಗಿ ನಗರವಾಸಿಗರಿಗೆ ಹಳ್ಳಿ ಜೀವನವನ್ನು ಪರಿಚಯಿಸುವ ನಿಟ್ಟಿನಲ್ಲಿ ಮಾದರಿ ಪಾರಂಪರಿಕ ಗ್ರಾಮವನ್ನು ಸೃಷ್ಟಿಸಲಾಗಿದೆ.**

ಕೆ.ಅಶೋಕ

ಮಾಹಿತಿ ತಂತ್ರಜ್ಞಾನ ಕ್ಷೇತ್ರದಲ್ಲಿ ವಿಶ್ವದ ಗಮನ ಸೆಳೆದಿರುವ, "ಎಲೆಕ್ಟ್ರಾನಿಕ್ ಸಿಟಿ" ಬೆಂಗಳೂರ ನಗರದ ಜಕ್ಕೂರಿನ ಶ್ರೀರಾಮಪುರ ಕ್ರಾಸ್‌ನಲ್ಲಿ 'ಮಾದರಿ ಪಾರಂಪರಿಕ ಗ್ರಾಮ' ಜನರನ್ನು ಆಕರ್ಷಿಸುತ್ತಿದ್ದು, ನೋಡುಗರ ಕಣ್ಮನ ಸೆಳೆಯುತ್ತಿದೆ.

ಮಾದರಿ ಪಾರಂಪರಿಕ ಗ್ರಾಮದಲ್ಲಿ ಒಂದು ಸುತ್ತು ಬಂದರೆ, ಗ್ರಾಮೀಣ ಜನರ ಜೀವನದ ಬದುಕು ಕಾಣಸಿಗುತ್ತದೆ. ನಮ್ಮ ಹೆಮ್ಮೆಯ ಗ್ರಾಮ ಸಂಸ್ಕೃತಿ ಹೊಸ ಭಾಷ್ಯದೊಂದಿಗೆ ನೋಡುಗರನ್ನು ಮುದಗೊಳಿಸುತ್ತದೆ. ಈ ಗ್ರಾಮವನ್ನು ಪ್ರವೇಶಿಸಿದಾಗ, ನಿರಂತರ ದುಡಿಮೆಯ ಮಣ್ಣಿನ ಮಕ್ಕಳ ದೈನಂದಿಕ ಜೀವನದ ಬದುಕು ಸೂರ್ಯೋದಯದಿಂದ, ಸೂರ್ಯಾಸ್ತದವರೆಗಿನ, ಶ್ರಮ ಸಂಸ್ಕೃತಿಯ ನೋಟವನ್ನು  ನೋಡಬಹುದು.

ಸ್ವಾವಲಂಬಿ ಜೀವನವನ್ನು ರೂಢಿಸಿಕೊಂಡು ಕುಲ ಕಸುಬನ್ನು ಆಶ್ರಯಿಸಿ ಬದುಕನ್ನು ಕಟ್ಟಿಕೊಂಡು ತಾವೂ ಬದುಕಿ, ಹಳ್ಳಿಯನ್ನು ಮುನ್ನಡೆಸುತ್ತಾ ನಿಸ್ವಾರ್ಥದಿಂದ ಬದುಕುವ ಚಿತ್ರಣವನ್ನು ನೋಡುವ ಅವಕಾಶವನ್ನು ಈ ಮಾದರಿ ಪಾರಂಪರಿಕ ಗ್ರಾಮ ಒದಗಿಸಿಕೊಡುತ್ತದೆ ಎಂದರೆ ತಪ್ಪಾಗಲಾರದು.

ಮಹಾತ್ಮಾ ಗಾಂಧಿ ಗ್ರಾಮೀಣ ಇಂಧನ ಮತ್ತು ಅಭಿವೃದ್ಧಿ ಸಂಸ್ಥೆಯ ಆವರಣದಲ್ಲಿರುವ ಮಾದರಿ ಪಾರಂಪರಿಕ ಗ್ರಾಮಕ್ಕೆ ಭೇಟಿ ನೀಡಿದಾಗ ಒಂದು ಕಡೆ ಕರಗ, ಇನ್ನೊಂದೆಡೆ ಭೂತದ ಕೋಲಾಟದ ಕಲಾಕೃತಿ ನಮ್ಮನ್ನು ಸ್ವಾಗತಿಸುತ್ತದೆ. ದಕ್ಷಿಣ ಕನ್ನಡದಲ್ಲಿ ಆಯೋಜಿಸುವ ಭೂತ ಕೋಲ ಕರಾವಳಿಯ ಜಾನಪದ ಕಲೆ. ಒಳಹೊಕ್ಕಾಗ ದಕ್ಷಿಣ ಕನ್ನಡ ಜಿಲ್ಲೆಯ ಕಂಬಳ





Download From : www.kpscvaani.com

ಕ್ರೀಡೆಯನ್ನು ಪರಿಚಯಿಸುವ ಶಿಲ್ಪಗಳು ಎದುರುಗೊಳ್ಳುತ್ತದೆ. ವರುಷಕ್ಕೊಮ್ಮೆ ನಡೆಯುವ ಈ ಸ್ಪರ್ಧೆಯನ್ನು ತುಳು ಜನಾಂಗದ ಭೂಮಾಲೀಕರು ಅತ್ಯಂತ ಖುಷಿಯಿಂದ ಆಯೋಜಿಸುತ್ತಾರೆ. ಕೋಣಗಳ ಓಟದ ಹುಮ್ಮಸ್ಸನ್ನು ಬಿಂಬಿಸುವ ಶಿಲ್ಪಗಳು ನಿಜಕ್ಕೂ ಕಲಾಭಿಮಾನಿಗಳನ್ನು ಆಕರ್ಷಿಸುತ್ತದೆ.

ಮನುಷ್ಯನ ವಿಕಾಸಕ್ಕೆ ಶಿಕ್ಷಣ ತುಂಬಾ ಅಗತ್ಯ. ಹಳ್ಳಿ ಶಾಲೆಯ ಪರಿಸರ, ಮೇಷ್ಟ್ರು ಪಾಠ ಮಾಡುವ ವಿಧಾನ, ಹಳ್ಳಿ ಶಾಲಾ ಆಟೋಟಗಳು, ಶಾಲೆಯ ಸಮಯ ಆದೊಡನೆ ಗಂಟೆ ಹೊಡೆಯುವ ಕುರಿತ ಶಿಲ್ಪಗಳು ಮುದಗೊಳಿಸುತ್ತವೆ. ಮಕ್ಕಳು ಉತ್ಸಾಹದಿಂದ ಕಲಿಕೆಯಲ್ಲಿ ತೊಡಗಿಕೊಂಡಿರುವ ದೃಶ್ಯ ಇಲ್ಲಿ ಕಂಡು ಬರುತ್ತದೆ.

ಹಳ್ಳಿ ಎಂದ ಮೇಲೆ ಗೌಡರ ಮನೆ ಇರಲೇ ಬೇಕು. ಧಾರವಾಡ ಜಿಲ್ಲೆಯ ಗ್ರಾಮೀಣ ಪ್ರದೇಶಗಳಲ್ಲಿ ಮುಖ್ಯಸ್ಥರು ಊರಿನ ಗೌಡರು, ಗೌಡಿಕೆ ಮಾಡುವವರು, ತಮ್ಮ ಊರಿನ ಆಗು ಹೋಗುಗಳನ್ನು ಗಮನಿಸುವ ಜೊತೆಗೆ ಲೆಕ್ಕಪತ್ರಗಳನ್ನು ನಿರ್ವಹಿಸುವರು. ಲೆಕ್ಕಿಗನಿಂದ ಖರ್ಚುವೆಚ್ಚಗಳ ಪರಿಶೀಲನೆ ಮಾಡುತ್ತಿರುವ ಗೌಡರ ಚಿತ್ರಣವನ್ನು ಕಾಣಬಹುದು. ಗೌಡ್ರು ಸಾಕಿದ ನಾಯಿ, ಭದ್ರತೆಗೆಂದು ಬಂದೂಕು ಇಟ್ಟುಕೊಂಡ ಚಿತ್ರಣವಿದೆ. ಮನೆಯ ಒಳಭಾಗದಲ್ಲಿರುವ ಕೊಟ್ಟಿಗೆಯಲ್ಲಿ ಎತ್ತುಗಳು ಮೇವು ತಿನ್ನುತ್ತಿರುವ ಕಲಾಕೃತಿ ಹಾಗೂ ಗೃಹಿಣಿಯರು ಮನೆಯ ಚಟುವಟಿಕೆಗಳಲ್ಲಿ ತೊಡಗಿಕೊಂಡಿರುವುದು ಮನೋಜ್ಞವಾಗಿ ಮೂಡಿ ಬಂದಿದೆ.

ಹಿಂದೂಗಳಲ್ಲಿ ಬಳೆ ಶುಭ ಹಾಗೂ ಸೌಭಾಗ್ಯದ ಸಂಕೇತ, ಸುಮಂಗಲೆಯರು ಧರಿಸುವ ಬಳೆ ಬಾಂಧವ್ಯದ ನಂಟು. ಗ್ರಾಮೀಣ ಪ್ರದೇಶಗಳಲ್ಲಿ ಕೈತುಂಬ ಬಳೆ ಧರಿಸುವ ಮುತ್ತೈದೆಯರು ಮಂಗಳ ಕಾರ್ಯಗಳಲ್ಲಿ ಪಾಲ್ಗೊಳ್ಳುವುದನ್ನು ನೋಡುವುದೇ ಒಂದು ಸೊಬಗು. ಬಣ್ಣ ಬಣ್ಣದ ಬಳೆಗಳು ಇಲ್ಲಿ ಕೈ ಅಂದವನ್ನು ಹೆಚ್ಚಿಸುವ ಕಲಾಕೃತಿಯನ್ನು ಕಾಣಬಹುದು.

ಹಾಗೇ ಮುಂದೆ ಸಾಗಿದರೆ, ಗದಗ ಜಿಲ್ಲೆಯ ಗ್ರಾಮೀಣ ಪ್ರದೇಶದ ನಾಟಿ ವೈದ್ಯರ ಮನೆಯನ್ನು ಕಾಣಬಹುದು. ಮನೆ ಔಷಧಿಯಿಂದಲೇ ರೋಗ ವಾಸಿ ಮಾಡುವ ಚಿತ್ರಣವಿದೆ. ಇನ್ನೊಂದು ಮನೆಯಲ್ಲಿ ದಾವಣಗೆರೆ ಜಿಲ್ಲೆಯ ಗ್ರಾಮೀಣ ಪ್ರದೇಶದ ಶಿಂಪಿಗರು (ದರ್ಜಿಗಳು) ಬಟ್ಟೆ ಹೊಲಿಯುವ ಕಾಯಕವನ್ನು ನೋಡಬಹುದು. ಇಲ್ಲಿ ದಂಪತಿಗಳಿಬ್ಬರು ಬಟ್ಟೆ ಹೊಲಿದು ಕೊಡುತ್ತಿರುವುದು ಬಲು ಸುಂದರವಾಗಿ ಅನಾವರಣಗೊಂಡಿದೆ. ಅದರ ಹತ್ತಿರವೇ ಗ್ರಾಮೀಣ ಕಿರಾಣಿ ಅಂಗಡಿಯ ಕಲಾಕೃತಿಯನ್ನು ನಿರ್ಮಿಸಲಾಗಿದೆ. ಹಾವೇರಿ ಜಿಲ್ಲೆಯ ಗ್ರಾಮೀಣ ಪ್ರದೇಶಗಳಲ್ಲಿ ದಿನಸಿ ವಸ್ತುಗಳನ್ನು ಮಾರಾಟ ಮಾಡುವ ದಿನಸಿ ಅಂಗಡಿಯ ಕಲಾಕೃತಿ ಇದಾಗಿದೆ. ಮಹಿಳೆಯೊಬ್ಬಳು ತನ್ನ ಮಕ್ಕಳೊಂದಿಗೆ ದಿನಸಿ ಖರೀದಿಗೆ ಆಗಮಿಸಿದ್ದಾಳೆ. ಅಂಗಡಿ ಮುಂಭಾಗದಲ್ಲಿ ನಿಂತಿರುವ ಗ್ರಾಹಕನೊಬ್ಬ ಅಂಗಡಿಯಲ್ಲಿರುವ ದಿನಸಿ ಸಾಮಗ್ರಿ ನೋಡುತ್ತಿರುವ ದೃಶ್ಯ ಹಳ್ಳಿಯ ನೆನಪನ್ನು ಮೆಲಕು ಹಾಕುತ್ತದೆ.



**ನಗರೀಕರಣದಿಂದಾಗಿ ಮರೆಯಾಗುತ್ತಿರುವ ಗ್ರಾಮೀಣ ಜೀವನದ ಸೊಗಡನ್ನು ನಗರವಾಸಿಗರಿಗೆ ಪರಿಚಯಿಸುವ ಉದ್ದೇಶದಿಂದ ಸರ್ಕಾರವು 3.5 ಎಕರೆ ಪ್ರದೇಶದಲ್ಲಿ ಅಂದಾಜು 11.68 ಕೋಟಿ ರೂಪಾಯಿ ವೆಚ್ಚದಲ್ಲಿ ಈ "ಮಾದರಿ ಪಾರಂಪರಿಕ ಗ್ರಾಮ"ವನ್ನು ಅನಾವರಣಗೊಳಿಸಿದೆ. ಇದು ರಾಜಧಾನಿಯ ಪ್ರಮುಖ ಪ್ರವಾಸಿ ತಾಣವಾಗಲಿದೆ.**

ಮಕ್ಕಳ ಆಟ ಪಾಠವನ್ನು ತುಂಬಾ ಸುಂದರವಾಗಿ ಚಿತ್ರಿಸಲಾಗಿದೆ. ಗುರಿಯಿಟ್ಟು ಗೋಲಿಯಾಟ ಆಡುವ ಚಿಣ್ಣರು ಒಂದೆಡೆಯಾದರೆ, ಗ್ರಾಮೀಣ ಕ್ರೀಡೆಗಳನ್ನು ಆಡುವ ಮಕ್ಕಳ ಏಕಾಗ್ರತೆ ಗಮನ ಸೆಳೆಯುತ್ತದೆ. ಬಿಡುವಿನ ವೇಳೆ ಆಡುವ ಹಿರಿಯರ ಕಲಾಕೃತಿಯನ್ನು, ಮೊಮ್ಮಕ್ಕಳ ಜಡೆ ಹೆಣೆಯುವ ಅಜ್ಜಿ, ವಿಶ್ರಾಂತಿ ಪಡೆಯುತ್ತಿರುವ ಅಜ್ಜ, ತುಂಬು ಕುಟುಂಬದ ಬದುಕನ್ನು ಇಲ್ಲಿ ನೋಡಬಹುದು.

ಆಭರಣವನ್ನು ತಯಾರಿಸುವ ಅಕ್ಕಸಾಲಿಗರ ಮನೆಯನ್ನು ನಿರ್ಮಿಸಲಾಗಿದೆ. ರಾಯಚೂರು ಜಿಲ್ಲೆಯ ಗ್ರಾಮೀಣ ಪ್ರದೇಶದಲ್ಲಿ ಅಕ್ಕಸಾಲಿಗರ ಅಥವಾ ಪತ್ತಾರರು ಚಿನ್ನಾಭರಣಗಳಿಗೆ ರೂಪ ಕೊಡುವ ಚಿತ್ರಣದೊಟ್ಟಿಗೆ, ಮನೆಯ ಒಳಾಂಗಣದಲ್ಲಿ ಚಿನ್ನಕ್ಕೆ ಲೇಪನ ಮಾಡುವ ಅಕ್ಕಸಾಲಿಗರು ಒಡವೆಗಳನ್ನು ತಯಾರಿಸುತ್ತಿರುವ ಶಿಲಾಕೃತಿಗಳನ್ನು ನೋಡಬಹುದು. ಇಲ್ಲಿ ಆಭರಣ ಮಾಡಿಸಲು ಬಂದ ಅಜ್ಜಿ–ಮೊಮ್ಮಗಳ ಸಂಬಂಧದ ಬೆಸುಗೆಯನ್ನು ಕಾಣಬಹುದು.



Download From : www.kpscvaani.com





ಸುಖೀ ಕುಟುಂಬದ ಚಿತ್ರಣ ಸುಂದರವಾಗಿ ಮೂಡಿಬಂದಿದೆ. ಕಲಬುರಗಿ ಜಿಲ್ಲೆಯ ಗ್ರಾಮೀಣ ಪ್ರದೇಶಗಳಲ್ಲಿ ಹೆಚ್ಚಾಗಿ ಕಂಡು ಬರುವ ಕಲ್ಲಿನಿಂದ ನಿರ್ಮಿಸಿರುವ ಗೋಡೆ, ಮಣ್ಣಿನ ಹೊದಿಕೆಯ ಛಾವಣಿ ಹೊಂದಿರುವ ಮನೆ. ಮನೆಯ ಒಳಭಾಗದಲ್ಲಿ ಜಾನುವಾರುಗಳ ಕೊಟ್ಟಿಗೆಯಲ್ಲಿ ಹಾಲು ಹಿಂಡುತ್ತಿರುವ ಗೃಹಿಣಿ, ಮನೆಮಂದಿ ಎಲ್ಲಾ ತಮ್ಮ ದೈನಂದಿನ ದಿನಚರಿಗಳಾದ ಪೂಜೆ, ಧಾನ್ಯ ಬೀಸುವ ಕಾರ್ಯದಲ್ಲಿ ನಿರತರಾಗಿರುವ ಮಹಿಳೆ ಮತ್ತು ಮಕ್ಕಳ ಆಟೋಟಗಳನ್ನೊಳಗೊಂಡ ಮಾಳಿಗೆ ಮನೆ ಕಲಾರಸಿಕರನ್ನು ಸೆಳೆಯುವಂತಿದೆ.

ಊರಿನ ಜನರಿಗೆ ಬಟ್ಟೆಗಳನ್ನು ನೇಯುವ ನೇಕಾರರ ಮನೆಯನ್ನು ಬೆಂಗಳೂರು ಗ್ರಾಮಾಂತರ ಜಿಲ್ಲೆಯಿಂದ ಆಯ್ದುಕೊಳ್ಳಲಾಗಿದೆ. ಕೈಮಗ್ಗದಿಂದ ಸೀರೆ ನೇಯುವ ನೇಕಾರರ ಮನೆ, ನೇಕಾರರು ಚರಕದಿಂದ ನೂಲು ತೆಗೆಯುವುದಕ್ಕೆ ವೃದ್ಧೆಯೊಬ್ಬಳು ಸಹಕರಿಸುವ ದೃಶ್ಯ, ಹಳ್ಳಿಯವರ ಬಣ್ಣ ಬಣ್ಣದ ಕನಸುಗಳಿಗೆ ಜೀವ ತುಂಬಿದೆ. ಮಹಿಳೆಯೊಬ್ಬಳು ಬಟ್ಟೆಗೆ ಕೈಹೊಲಿಗೆ ಹಾಕುತ್ತಿದ್ದಾಳೆ.

ಮಂಡ್ಯ ಜಿಲ್ಲೆಯ ಹಳ್ಳಿ ಜನರು ವಾಸ ಮಾಡುವ ಗ್ರಾಮೀಣ ತೊಟ್ಟಿ ಮನೆಯಲ್ಲಿ ಗಾಳಿ ಬೆಳಕು ಸಾಕಷ್ಟಿರುತ್ತದೆ. ಮನೆಯ ಮಧ್ಯದ ಪಡಸಾಲೆಯಲ್ಲಿ ಸಣ್ಣ ಮಗುವನ್ನು ಸ್ನಾನ ಮಾಡಿಸುತ್ತಿರುವ ದೃಶ್ಯ, ಅದನ್ನು ನಿಂತು ನೋಡುವ ಬಾಣಂತಿಯ ಶಿಲಾಕೃತಿ ನೋಡುಗರ ಮನಸ್ಸನ್ನು ಸೆಳೆಯುತ್ತದೆ. ಇಂದಿಗೂ ಗ್ರಾಮೀಣ ಜನರ ಪ್ರಿಯ ವ್ಯಕ್ತಿ ಅಂಚೆ ಅಣ್ಣ. ಪತ್ರ ತರುವುದಷ್ಟೇ ಅಲ್ಲ, ಪತ್ರವನ್ನು ಓದಬೇಕು, ಯಾಕೆಂದರೆ ಪತ್ರ ಪಡೆದುಕೊಳ್ಳುವವರು ಅಜ್ಜಿ. ಅದರ ಪಕ್ಕದಲ್ಲಿಯೇ ಇದೆ ಕಂಬಳಿ ನೇಯುವವರ ಮನೆ. ಅಲ್ಲಿಯ ಹೆಣ್ಣುಮಗಳು ಒನಕೆಯಿಂದ ರಾಗಿ ಕುಟ್ಟುವುದನ್ನು ಕಾಣಬಹುದು. ನಂತರ ಮಡಿವಾಳರ ಮನೆಯಲ್ಲಿ ಬಟ್ಟೆಗಳನ್ನು ಹೊಳೆಯಲ್ಲಿ ತೊಳೆದು ಶುಭ್ರವಾಗಿಸುವುದನ್ನು ಕಾಣಬಹುದು. ಹೀಗೆ ಶುಭ್ರವಾದ ಬಟ್ಟೆಗಳನ್ನು ಇಸ್ತ್ರೀ ಮಾಡುತ್ತಿರುವವರನ್ನು ಕಾಣಬಹುದು.



ಚಿಕ್ಕಮಗಳೂರು ಜಿಲ್ಲೆಯ ಗ್ರಾಮೀಣ ಪ್ರದೇಶದಲ್ಲಿ ಗಾಣದ ಮೂಲಕ ಎಣ್ಣೆ ತಯಾರಿಸುವ ಗಾಣಿಗರು ಸ್ವಾವಲಂಬಿ ಬದುಕನ್ನು ಕಂಡುಕೊಂಡವರು. ಮನೆಯಲ್ಲಿ ತಯಾರಾಗುವ ತಿಂಡಿ ತಿನಿಸುಗಳಿಗೆ ಅಡುಗೆ ಎಣ್ಣೆಯನ್ನು, ತಮ್ಮಲ್ಲಿರುವ ಎತ್ತುಗಳ ಸಹಾಯದಿಂದ ತಮ್ಮ ಮನೆಗಳಲ್ಲಿಯೇ ಗಾಣದಿಂದ ಎಣ್ಣೆ ತಯಾರಿಸುವ ಗಾಣಿಗ ಹಾಗೂ ಆತನ ಪತ್ನಿ, ಮಗುವಿನ ಶಿಲ್ಪಕಲೆ ನೈಜವಾಗಿ ಮೂಡಿಬಂದಿದೆ. ಗ್ರಾಮದ ಗಾಣಿಗ ಕುಟುಂಬ ಗ್ರಾಮಕ್ಕೆ ಎಣ್ಣೆ ತಯಾರಿಸುವ, ಆ ಸಂದರ್ಭದಲ್ಲಿ ಮನೆಯ ಹೆಣ್ಣು ಮಕ್ಕಳು ಅದರಲ್ಲಿ ತೊಡಗಿಸಿಕೊಳ್ಳುವ ದೃಶ್ಯ ಮಹಿಳಾ ಸ್ವಾವಲಂಬೀಕರಣ ನಮ್ಮ ಹಳ್ಳಿಯಲ್ಲಿಯೇ ಆರಂಭವಾಯಿತು ಎನ್ನಬಹುದು.

ಮಕ್ಕಳ ಆಟಿಕೆ ಸಾಮಾನು ತಯಾರು ಮಾಡುವವರು, ಧಾನ್ಯ ಬೀಸಲು ಬೀಸುವ ಕಲ್ಲನ್ನು ತಯಾರು ಮಾಡುವವರ ಮನೆಗಳು ಇವೆ. ಮೇದಾರರ ಮನೆ ಅಂದರೆ ಬುಟ್ಟಿ, ಮೊರ, ಬೀಸಣಿಗೆ ಮುಂತಾದವುಗಳನ್ನು ತಯಾರು ಮಾಡುವವರನ್ನು ನೋಡಬಹುದು. ಹದವಾದ ಮಣ್ಣಿನಿಂದ ಮಡಕೆ, ಪಾತ್ರೆಗಳನ್ನು ತಯಾರು ಮಾಡುವ ಕುಂಬಾರರನ್ನು ನೋಡಬಹುದು. ಮಣ್ಣನ್ನು ಹದಗೊಳಿಸುವ ಕಲಾಕೃತಿ ತುಂಬಾ ಸುಂದರವಾಗಿ ಮೂಡಿಬಂದಿದೆ. ಗ್ರಾಮೀಣ ಪ್ರದೇಶದ ಜನರಿಗೆ ಅವಶ್ಯವಿರುವ ಪಾತ್ರೆಗಳನ್ನು ತಾಮ್ರ, ಹಿತ್ತಾಳೆ ಮತ್ತು ಅಲ್ಯುಮಿನಿಯಂಗಳಿಂದ ತಯಾರಿಸಿಕೊಡುವ ತಮಟಗಾರ ದಂಪತಿಗಳು ತಮ್ಮ ಕುಲಕಸುಬಿನಲ್ಲಿ ನಿರತರಾಗಿದ್ದನ್ನು ಕಾಣಬಹುದು. ಕಂಚುಗಾರ ಹಂಡೆಯನ್ನು ತಯಾರು ಮಾಡುತ್ತಿರುವ ದೃಶ್ಯ, ಕ್ಷೌರಿಕ ಕ್ಷೌರ ಮಾಡುವ ದೃಶ್ಯವನ್ನು ಸಹ ಇಲ್ಲಿ ಕಾಣಬಹುದು.

ಹಳ್ಳಿ ಜನರಿಗೆ ಕೃಷಿ ಪರಿಕರವಾದ ರಂಟೆ, ಕುಂಟೆ, ಚಕ್ಕಡಿ, ಕುರ್ಚಿ ನೇಗಿಲುಗಳನ್ನು ತಯಾರಿಸಲು ಬಡಗಿ ಇಲ್ಲಿದ್ದಾನೆ. ಕೃಷಿಕರಿಗೆ ಕುಡುಗೋಲು, ಕತ್ತಿ ಮುಂತಾದವುಗಳನ್ನು ತಯಾರಿಸಿ ಕೊಡುವ ಕಮ್ಮಾರನ ಮನೆ ಕೂಡ ಇಲ್ಲಿದೆ.

ನಮ್ಮ ರಾಜ್ಯದ ಕೊಡವರ ಸಂಸ್ಕೃತಿ



Download From : www.kpscvaani.com



ವಿಭಿನ್ನವಾಗಿದೆ. ಕೊಡವರ ಮನೆಯನ್ನು ಇಲ್ಲಿ ಕಾಣಬಹುದು. ಊರಿನವರ ಜಗಳವನ್ನು ಪರಿಹರಿಸುವ ಪಂಚಾಯಿತಿ ಕಟ್ಟೆಯು ಇಲ್ಲಿ ನೈಜವಾಗಿ ಮೂಡಿಬಂದಿದೆ. ಸುಣ್ಣ ತಯಾರಿಸುವ ಸುಣಗಾರರು, ಮೆಟ್ಟು ಮಾಡುತ್ತಿರುವ ಚಮ್ಮಾರರನ್ನು ಇಲ್ಲಿ ಹಳ್ಳಿಯ ಪರಿಸರಕ್ಕೆ ತಕ್ಕಂತೆ ರೂಪಿಸಲಾಗಿದೆ.

ನಮ್ಮ ದೇಶ ಹಳ್ಳಿಗಳ ದೇಶ, ರೈತ ದೇಶದ ಬೆನ್ನೆಲುಬು. ರೈತರು ಬೆಳೆ ಬೆಳೆದರೆ ನಾವೆಲ್ಲಾ ತಿನ್ನುವೆವು ಹೊನ್ನು, ಇಲ್ಲವಾದರೆ ಮಣ್ಣಾಗಿ ಹೋಗುವೆವು. ಬೇಸಾಯದ ವಿವಿಧ ಚಿತ್ರಣ ಇಲ್ಲಿದೆ. ಹೊಲ ಉಳುಮೆ ಮಾಡುವುದು, ಬಿತ್ತುವುದು, ಕಳೆ ತೆಗೆಯುವುದು, ಕೊಯ್ಲು ಮಾಡುವುದು ಹೀಗೆ ವಿವಿಧ ಹಂತಗಳನ್ನು ಸುಂದರವಾಗಿ ಕೆತ್ತಿದ್ದಾರೆ. ಹೀಗೆ ಬಿತ್ತಿದ್ದನ್ನು ಮಾರಾಟ ಮಾಡಲು ರೈತರ ಸಂತೆ ಇದೆ. ಇಲ್ಲಿ ತೆಂಗಿನ ಕಾಯಿಯಿಂದ ದೈನಂದಿನ ಜೀವನಕ್ಕೆ ಬೇಕಾಗುವ ಎಲ್ಲ ಬಗೆಯ ತರಕಾರಿಗಳನ್ನು ಇಲ್ಲಿ ನೋಡಬಹುದು. ಹಾಗೆಯೇ ದನದ ಸಂತೆಯೂ ಇಲ್ಲಿದೆ.

ಇಲ್ಲಿರುವ ಸಭಾ ಗೃಹದಲ್ಲಿ ಗ್ರಾಮೀಣ ಪರಂಪರೆಯ ಸೊಗಡಿದೆ. ಸಭಾಗೃಹದ ಸುತ್ತಲೂ ಕರ್ನಾಟಕದ ಚೌಡಕಿ ಪದ ಹಾಡುವವರ ಕಲಾಕೃತಿ, ಗೀಗೀ ಪದ ಹಾಡುವವರು, ಹಲಗಿ ವಾದನ, ಡೊಳ್ಳಿನ ಕುಣಿತ, ಕರಡಿ ಕುಣಿತ, ಪಾರಿಜಾತ, ತಮಟೆ ವಾದನ, ಜಗ್ಗಲಗೀ ಕುಣಿತ, ಕಂಸಾಳೆ ಪದ, ಬುರ್ರ ಕಥಾ, ದಕ್ಷಿಣ ಕನ್ನಡದ ಕಲೆಯಾದ ಯಕ್ಷಗಾನ, ಹುಲಿಯಾಟ, ಸಿಂಹ ನೃತ್ಯ, ಕೊಡವರ ಹುತ್ತರಿ ನೃತ್ಯ ಎಲ್ಲವನ್ನು ಹೊರಾಂಗಣದಲ್ಲಿ ಕಾಣಬಹುದು. ಒಳಾಂಗಣದಲ್ಲಿ ಪಗಡೆಯಾಟ, ಅಕ್ಕಿ ಬೀಸುವುದು, ಸಾಣಿಸುವುದು, ಮಕ್ಕಳನ್ನು ಮಲಗಿಸುವುದರ ಕಲಾಕೃತಿಯನ್ನು ಕಾಣಬಹುದು.

ಆವರಣದಲ್ಲಿ ರೈತರ ಒಡನಾಡಿಯಾದ ಸಹಜವಾಗಿರುವ ಪ್ರಾಣಿ ಜಗತ್ತನ್ನು ಇಲ್ಲಿ ನೋಡಬಹುದು. ಇಲ್ಲಿ ಕೋಳಿ ಹುಂಜಗಳು ಸುತ್ತಾಡುವಂತಿವೆ. ಜನ ಜೀವನ ವಿಧಾನದ ಸೂಕ್ಷ್ಮಾತಿಸೂಕ್ಷ್ಮ ವಿವರಗಳನ್ನು ಇಲ್ಲಿನ ಕಲಾಕೃತಿಗಳಲ್ಲಿ ಹಿಡಿಯಲಾಗಿದೆ. ಆವರಣದಲ್ಲಿ ವಿವಿಧ ವಿಶೇಷ ಗಿಡ, ಮರಗಳ ವಿವರಗಳನ್ನು ನಾವು ನೋಡಬಹುದು. ರೈತರ ಪಾಲಿಗೆ ಕಲ್ಪವೃಕ್ಷವಾದ ಹೊಂಗೆ ಮರದ ವಿವರಗಳು, ಸಿಮಾರೂಬ ಮರದ ವಿವರಗಳನ್ನು, ಜಟ್ರೋಫ–ತೈಲ ಗಿಡದ ವಿವರಗಳು ಮತ್ತು ಅವುಗಳ ಉಪಯೋಗ ತಿಳಿಸುವ ಭಿತ್ತಿ ಚಿತ್ರಗಳು ಇಲ್ಲಿವೆ.

ಇತಿಹಾಸದ ಅಧ್ಯಯನಕ್ಕೆ ಅನೇಕ ಆಕರಗಳಿವೆ. ಅವುಗಳಲ್ಲಿ ಮುಖ್ಯವಾದವು ಶಿಲ್ಪಕಲೆಯೂ ಒಂದು. ಇವುಗಳ ಅಧ್ಯಯನದಿಂದ ಆಯಾಯ ಕಾಲಕ್ಕೆ, ಆಯಾಯ ಪರಿಸರಕ್ಕೆ, ಜನಜೀವನ ಹೇಗಿತ್ತು, ತಮ್ಮ ಭಾವನೆಗಳನ್ನು, ಭಾವಗಳನ್ನು, ಕೆಲಸವನ್ನು ಹೇಗೆ ಅಭಿವ್ಯಕ್ತಿಗೊಳಿಸುತ್ತಿದ್ದರು, ಏನು ಮಾಡುತ್ತಿದ್ದರು ಎನ್ನುವುದರ ಮೇಲೆ ಬೆಳಕು ಚೆಲ್ಲುತ್ತದೆ. ಗ್ರಾಮೀಣ ಪರಿಸರವನ್ನು ನಗರಕ್ಕೆ ತಂದು ಮಹಾತ್ಮಾ ಗಾಂಧಿ ಗ್ರಾಮೀಣ ಇಂಧನ ಮತ್ತು ಅಭಿವೃದ್ಧಿ ಸಂಸ್ಥೆಯ ಆವರಣದಲ್ಲಿ ಅನಾವರಣಗೊಳಿಸಿದ ಡಾ. ಟಿ. ಬಿ. ಸೊಲಬಕ್ಕನವರ್ ಅವರ ಕಲೆ ಮತ್ತು ಕಲ್ಪನೆಯನ್ನು ನಾವು ಮೆಚ್ಚಲೇಬೇಕು.
ಅವರ ಆಶಯದಂತೆ ಕಲೆ ಕೇವಲ ಸೌಂದರ್ಯ ಪ್ರಜ್ಞೆಯಾಗಿರದೇ, ಸಾಮಾಜಿಕ ಚಿಂತನೆಯಾಗಿರಬೇಕು. ಅದನ್ನು ಸಿಮೆಂಟಿನಲ್ಲಿ, ಶಿಲೆಯಲ್ಲಿ, ಕಟ್ಟಿಗೆಯಲ್ಲಿ ಪಡಿಯಚ್ಚು ಮಾಡಿ ಅವುಗಳಿಗೆ ಜೀವ ತುಂಬಿದವರು ಡಾ.ಟಿ.ಬಿ. ಸೊಲಬಕ್ಕನವರ್ ಅವರು. ಕಾಂಕ್ರಿಟ್ ನಾಡಿನಲ್ಲಿ ಒಂದು ದಿನದ ಮಟ್ಟಿಗೆ ಬಿಡುವು ಮಾಡಿಕೊಂಡು ಮಾದರಿ ಪಾರಂಪರಿಕ ಗ್ರಾಮಕ್ಕೆ ಹೋಗಿ ಬಂದಾಗ ಸುಂದರ, ನೈಸರ್ಗಿಕದತ್ತವಾದ ಪರಿಸರವನ್ನು ನೋಡಿದಾಗ ಸಿಗುವ ಆನಂದಕ್ಕೆ ಸರಿಸಾಟಿ ಯಾವುದೂ ಇಲ್ಲ.

ಜನ ಬದುಕಿನ ಕಲಾಕೃತಿಗಳು ಇಲ್ಲಿ ಜೀವತಳೆದದ್ದು. ಕಳೆದು ಹೋಗುತ್ತಿರುವ ಬದುಕನ್ನು ಹಿಡಿದು ತೋರಿಸುವಂತ್ತಿರುವ ಇಲ್ಲಿನ ಕಲಾಕೃತಿಗಳು ನೋಡುಗರೊಳಗೆ ಹೊಸ ಪುಳಕವೊಂದನ್ನು ಹುಟ್ಟಿಸುತ್ತವೆ. ಹಳ್ಳಿಯ ಜನಬದುಕಿನ ಲೋಕವನ್ನೇ ಮರುಸೃಷ್ಟಿ ಮಾಡಿದ ನಿಜ ಬದುಕೊಂದು ನೋಡುಗರನ್ನು ದಿಗ್ಭ್ರಮೆಗೊಳಿಸುತ್ತದೆ. ■



Download From : www.kpscvaani.com



# ಎನ್‌ಆರ್‌ಜಿ ಕೆಲಸಕ್ಕೆ ಪುರುಷರು ದೂರ.. ಮಹಿಳೆಯರೇ ಪೂರ...

**ರಾಷ್ಟ್ರೀಯ ಮಹಾತ್ಮ ಗಾಂಧಿ ಉದ್ಯೋಗಖಾತ್ರಿ ಯೋಜನೆಯಡಿ ತಮ್ಮ ಊರಿನಲ್ಲಿ ನಡೆಸಲಾಗುತ್ತಿದ್ದ ಅಭಿವೃದ್ಧಿ ಕಾಮಗಾರಿ ಕೆಲಸಕ್ಕೆ ಬರಲು ಪುರುಷರು ಹಿಂದೇಟು ಹಾಕಿದಾಗ, ಗ್ರಾಮದ ಮಹಿಳೆಯರೇ ಮುಂದೆ ಬಂದು ಪುರುಷರಿಗಿಂತ ನಾವೇನು ಕಡಿಮೆ ಇಲ್ಲ ಎಂಬುದನ್ನು ತೋರಿಸಿಕೊಟ್ಟಿದ್ದಾರೆ.**

● ರಮೇಶ್ ಹೆಗಡೆ ಗುಂಡೂಮನೆ

ಪ್ರತಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಹಳ್ಳಿಗಳ ಅಭಿವೃದ್ಧಿಯಲ್ಲಿ ಪ್ರಸ್ತುತ ದೊಡ್ಡ ಪಾತ್ರವಹಿಸುತ್ತಿರುವುದು ಯಾವುದು ಎಂದರೆ ಅದು ರಾಷ್ಟ್ರೀಯ ಮಹಾತ್ಮ ಗಾಂಧಿ ಉದ್ಯೋಗಖಾತ್ರಿ ಯೋಜನೆ ಮಾತ್ರ. ಈ ಯೋಜನೆಯಿಂದ ಎರಡು ರೀತಿಯ ಪ್ರಯೋಜನವನ್ನು ಗಮನಿಸಲಾಗಿದೆ. ಮುಖ್ಯವಾಗಿ ನಿರುದ್ಯೋಗದಲ್ಲಿರುವ ಕಾರ್ಮಿಕರಿಗೆ ಉದ್ಯೋಗದ ಆಸರೆಯಾದರೆ, ಮತ್ತೊಂದು ಊರಿನ ಅಭಿವೃದ್ಧಿ ಕೆಲಸಗಳು ಈ ಯೋಜನೆಯ ಮೂಲಕ ನಡೆಯುತ್ತಿರುವುದು.

ಆದರೆ ಇಲ್ಲೊಂದು ಗ್ರಾಮ ಪಂಚಾಯಿತಿಯಲ್ಲಿ ಕಳೆದ ಅನೇಕ ವರ್ಷಗಳಿಂದ ಉದ್ಯೋಗಖಾತ್ರಿ ಯೋಜನೆಯ ಕಾಮಗಾರಿಗಾಗಿ ಇಲ್ಲಿಯ ಪುರುಷರನ್ನು ಕರೆದರೆ ಅವರ್‍ಯಾರೂ ಬಿಲ್‌ಕುಲ್ ಬರಲೊಪ್ಪಲಿಲ್ಲ. ಅವರು ಹೇಳುವ ಮಾತು ಒಂದೆ. ನಮಗೆ ಬೇರೆಡೆ ಹೆಚ್ಚು ಸಂಬಳ ದೊರೆಯಲಿದೆ ಮತ್ತು ಸಕಾಲದಲ್ಲಿ ಹಣ ಸಿಗಲಿದೆ ಎನ್ನುವುದಾಗಿ. ಪುರುಷರ ಈ ಮಾತಿನಿಂದ ಕಂಗ್ಗೆಟ್ಟ ಆಡಳಿತ, ಊರ ಅಭಿವೃದ್ಧಿ ಕಾಮಗಾರಿ ಮಾಡುವುದಾದರೂ ಹೇಗೆ, ಮತ್ತು  ಏನು ಮಾಡಬೇಕು ಎಂದು ತೋಚದೆ ತಲೆಮೇಲೆ ಕೈ ಹೊತ್ತು ಕುಳಿತಾಗ, ಧೈರ್ಯ ಹೇಳಿ ಮುಂದೆ ಬಂದವರು ಈ ಊರಿನ ಮಹಿಳೆಯರು. ಮತ್ತು ಬರೀ ಮಾತಿನಲ್ಲಿ ಅಲ್ಲ, ಉದ್ಯೋಗ ಖಾತ್ರಿ ಕೆಲಸ ಬೇಡ ಎಂದು ಗುಡ್ ಬೈ ಹೇಳಿ ಹೋದ ಪುರುಷರಿಗೆ ಸವಾಲು ಹಾಕುವ ರೀತಿಯಲ್ಲಿ  ಕಾಮಗಾರಿಗಳನ್ನು ಮಾಡುವ ಮೂಲಕ ಸಾಧಿಸಿ ಸೈ ಎನಿಸಿಕೊಂಡ ಮಹಿಳೆಯರ ಸಾಧನೆ ಸಣ್ಣದಲ್ಲ.

ಹೌದು ಶಿವಮೊಗ್ಗ ಜಿಲ್ಲೆಯ ಹೊಸನಗರ ತಾಲೂಕು ಹರಿದ್ರಾವತಿ ಗ್ರಾಮ ಪಂಚಾಯತಿ ಎನ್ನುವುದು ಕುಗ್ರಾಮಗಳನ್ನು ಒಳಗೊಂಡ ಗ್ರಾಮ ಪಂಚಾಯಿತಿ. ಇಲ್ಲಿರುವುದು ಎಲ್ಲವೂ ಕಚ್ಚಾ ರಸ್ತೆಗಳೆ. ಮಲೆನಾಡ ಗ್ರಾಮೀಣ ಭಾಗದಲ್ಲಿ ಮೈಲಿಗಳ ದೂರಕ್ಕೆ ಒಂಟಿ ಮನೆಗಳಿರುವುದು ಸಹಜ. ಆದರೆ ಅಲ್ಲಿಗೆ ಹೋಗಿ ಬರುವುದಕ್ಕೆ ಸಮರ್ಪಕ ರಸ್ತೆಯ ಅಗತ್ಯತೆ ಇದೆ. ಇದನ್ನು ಎನ್‌ಆರ್‌ಜಿ ಯೋಜನೆಯಲ್ಲಿ ಮಾತ್ರ ಮಾಡಬಹುದು.



Download From : www.kpscvaani.com



ಎನ್‌ಆರ್‌ಜಿ ಕಾಮಗಾರಿ ಎಂದರೆ ಯಂತ್ರ ಬಳಸುವಂತಿಲ್ಲ. ಆದರೆ ಇಲ್ಲಿ ಗಟ್ಟಿ ನೆಲ ಅಗೆದು ಮಣ್ಣಿನ ಕಾಮಗಾರಿ ಮಾಡುವುದಕ್ಕೆ ಪುರುಷರು ಒಲ್ಲೆ ಎಂದು ದೂರ ಸರಿದಿದ್ದಾರೆ.

ಈ ಸಂದಿಗ್ಧ ಸ್ಥಿತಿಯಲ್ಲಿ ಪಂಚಾಯಿತಿ ಕೈ ಹಿಡಿದವರು ಹರಿದ್ರಾವತಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಆಲಗೇರಿ ಮಂಡ್ರಿಯ ಮಹಿಳೆಯರ ತಂಡ. ಈ ಮಹಿಳೆಯರ ತಂಡ ಅತ್ಯಂತ ಕಠಿಣವಾದ ರಸ್ತೆ ಕಾಮಗಾರಿಯನ್ನು ಮಾಡಿ ಸೈ ಎನಿಸಿಕೊಂಡಿರುವುದಲ್ಲದೆ ಪಂಚಾಯಿತಿ ವ್ಯಾಪ್ತಿಯ ಎಲ್ಲ ಕಚ್ಚಾರಸ್ತೆಯನ್ನು ಪಕ್ಕ ರಸ್ತೆಯನ್ನಾಗಿಸಿದ ಹೆಮ್ಮೆ ಅವರಿಗಿದೆ. ಮಂಡ್ರಿಯಿಂದ ಹೊನ್ನೇಬೀಸೆಗೆ ಹೋಗುವ 1.5 ಕಿಮಿ, ಅಡ್ಡಳಾಕೊಪ್ಪ 2 ಕಿಮಿ ದೂರದ ರಸ್ತೆ, ಕಾಡ್ರಿಗೆ ಹೋಗುವ 1.5 ಕಿಮಿ ರಸ್ತೆ, ಕೆರೆಹಳ್ಳಿ 2 ಕಿಮಿ ರಸ್ತೆ, ಹಸರುಮನೆ 2 ಕಿಮಿ ರಸ್ತೆ, ಮಾಕನಕಟ್ಟೆ ರಸ್ತೆ, ಹುಣಸವಳ್ಳಿ 4 ಕಿಮಿ ದೂರದ ರಸ್ತೆಗಳನ್ನು ನಿರ್ಮಿಸಿ ಸಾಧನೆ ಮಾಡಿದ್ದಾರೆ. ವಿಶೇಷ ಎಂದರೆ ಅತ್ಯಂತ ಕಲ್ಲು ಮಣ್ಣಿನ ಭೂಮಿಯಾದರೂ ಯಂತ್ರ ಬಳಸದೆ ಕೈಯಲ್ಲಿ ಹಾರೆ ಗುದ್ದಲಿ ಹಿಡಿದು ಅಗೆದು ಹೊಸ ರಸ್ತೆ ನಿರ್ಮಿಸಿದ ಅವರ ಸಾಹಸ ಮೆಚ್ಚಲೇಬೇಕು.

**ಈ ಮಹಿಳಾ ತಂಡ ಮಾಡಿರುವುದು ಕೇವಲ ರಸ್ತೆ ಕೆಲಸ ಮಾತ್ರ ಅಲ್ಲ. ಪಂಚಾಯಿತಿ ವ್ಯಾಪ್ತಿಯಲ್ಲಿ ಕೆರೆ ನಿರ್ಮಾಣ ಹಾಗೂ ದುರಸ್ತಿ ಕಾಮಗಾರಿಯನ್ನು ಅಚ್ಚುಕಟ್ಟಾಗಿ ನಿರ್ವಹಿಸಿದ್ದಾರೆ. ಅನೇಕ ಹೂಳೆತ್ತುವ ಕೆಲಸ ಮಾಡುವ ಮೂಲಕ ಊರ ಕೆರೆಗಳಲ್ಲಿ ಜಲ ಸಮೃದ್ಧಿಯಾಗುವ ರೀತಿಯ ಕಾಮಗಾರಿ ನಡೆಸಿದ್ದಾರೆ. ಅಲ್ಲದೆ ಕೆರೆಯಿಂದ ಹೆಚ್ಚುವರಿ ನೀರು ಹೊರ ಹೋಗುವುದಕ್ಕೆ ಇದ್ದ ಹಳೆ ಚಾನಲ್ ದುರಸ್ತಿ, ಇನ್ನು ಮೈಲುಗಟ್ಟಲೆ ದೂರದ ಅತ್ಯಂತ ಕಠಿಣ ಎನ್ನಬಹುದಾದ ಹೊಸ ಚಾನಲ್ ನಿರ್ಮಾಣದ ಮೂಲಕ ಯಾವ ಕೆಲಸವಾದರೂ ಜಗ್ಗದೆ ಕುಗ್ಗದೆ ಮಾಡಬಲ್ಲೆವು ಎನ್ನುವುದನ್ನು ತೋರಿಸಿಕೊಟ್ಟಿದ್ದಾರೆ.**

ಹಾಗಂತ ಈ ಮಹಿಳೆಯರಿಗೆ ಬೇರೆ ಕಡೆ ಕೆಲಸ ಇರಲಿಲ್ಲ ಎಂದೇನೂ ಇಲ್ಲ. ಭತ್ತ, ಶುಂಠಿ ಮತ್ತು ಅಡಕೆ ತೋಟಗಳ ಕೆಲಸಕ್ಕೆ ಯಾವಾಗಲೂ ವಿಶೇಷ ಬೇಡಿಕೆ ಇದೆ. ಮಾತ್ರವಲ್ಲ ಉದ್ಯೋಗಖಾತ್ರಿಯಲ್ಲಿ ಮೈಮುರಿದು ದುಡಿಮೆ ಮಾಡಿದರೆ ಸಿಗುವುದಕ್ಕಿಂತ ಹೆಚ್ಚು ಕೂಲಿ ಹಣ ಗದ್ದೆ ಕೊಯ್ಲು ಮತ್ತು ಅಡಕೆ ಕೊಯ್ಲುಗಳಿಗೆ ಹೋದರೆ ಸಿಗಲಿದೆ. ಈ ಸತ್ಯ ಅವರಿಗೆ ಗೊತ್ತಿದ್ದರೂ ಮತ್ತು ಆ ಅವಕಾಶವಿದ್ದರೂ ಊರ ಅಭಿವೃದ್ಧಿಯ ಕೆಲಸವನ್ನು ಆಸಕ್ತಿಯಿಂದ ಕೈಗೊಂಡಿರುವ ಪಂಚಾಯಿತಿಗೆ ಸಹಕಾರವಾಗಿ ನಿಲ್ಲುವ ಪ್ರಮುಖ ಉದ್ದೇಶಹೊಂದಿ ಈ ಕೆಲಸ ಮಾಡಿರುವುದು ಮಾದರಿಯೇ ಸರಿ.

ಇನ್ನು ಇಲ್ಲಿ ಬಂದು ಕಾಮಗಾರಿಗಳನ್ನು ವೀಕ್ಷಿಸಿದ ತಾಲೂಕು ಮತ್ತು ಜಿಲ್ಲಾ ಪಂಚಾಯತಿ ಅಧಿಕಾರಿಗಳು ನಿಜಕ್ಕೂ ಅಚ್ಚರಿ ಪಟ್ಟಿದ್ದಾರೆ. ಕಠಿಣವಾದ ಕೆಲಸವನ್ನು ಅಚ್ಚುಕಟ್ಟಾಗಿ ಮತ್ತು ಅತ್ಯಂತ ಗುಣಮಟ್ಟದ ಕಾಮಗಾರಿಯಾಗಿ ನಿರ್ವಹಿಸುತ್ತಿರುವ ಇಲ್ಲಿಯ ಮಹಿಳೆಯರನ್ನು ಪ್ರೋತ್ಸಾಹಿಸುವ ಅಗತ್ಯವಿದೆ ಎಂದು ಶ್ಲಾಘಿಸಿದ್ದಾರೆ. ■



Download From : www.kpscvaani.com

# ಅನಾಥ ಶವಗಳಿಗೆ ಮುಕ್ತಿ ಕರುಣಿಸುವ ಮಹಿಳೆ

● ವೃಷಾಂಕ್ ಖಾಡಿಲ್ಕರ್

**ಅನಾಥ ಶವಗಳಿಗೆ ವಾರಸುದಾರರಾಗಲು ಯಾರೂ ಇಚ್ಛಿಸುವುದಿಲ್ಲ. ಇನ್ನು ಶವ ಸಂಸ್ಕಾರ ಮಾಡುವ ಕೆಲಸದಲ್ಲಿ ತೊಡಗುವ ಪ್ರಯತ್ನವನ್ನಂತೂ ಮಾಡುವವರೇ ಅಪರೂಪ. ರಸ್ತೆಯಲ್ಲಿ ಸಂಚರಿಸುವಾಗ ಆಕಸ್ಮಾತ್ ಆಗಿ ಅಪಘಾತ ಕಂಡು ಬಂದರೆ ಕಂಡು ಕಾಣದಂತೆ ಹೋಗುವ ಅಥವಾ ವಾಹನ ನಿಲ್ಲಿಸಿ ಗಾಯಾಳುಗಳನ್ನು ಉಪಚರಿಸಿ ಸೌಜನ್ಯ ತೋರುವ ಮಾನವೀಯತೆಯೂ ಬರಿದಾಗಿರುವ ಈ ದಿನಗಳಲ್ಲಿ ಸ್ವಂತ ಸಂಬಂಧಿಯಂತೆ ಅನಾಥ ಶವಗಳನ್ನು ವಿಲೇವಾರಿ ಮಾಡುತ್ತಿರುವ 'ಆಶಾ' ರವರ ಮಾನವೀಯ ಸೇವೆ ನಿಜಕ್ಕೂ ಶ್ಲಾಘನೀಯ.**

ಕೆಂಗೇರಿಯಿಂದ ಮಂಡ್ಯದವರೆಗೆ ಯಾವುದೇ ಅನಾಥ ಶವ ಕಂಡುಬಂದರೂ ಅದರ ವಿಲೇವಾರಿಗೆ ಪೊಲೀಸರಿಂದ ಮೊದಲ ಫೋನ್ ಕರೆ ಹೋಗುವುದು ಈ ಮಹಿಳೆಗೆ. ಹಾಗಂತ ಇವರು ಪಂಚಾಯ್ತಿ ಮೆಂಬರೋ, ಜನ ಪ್ರತಿನಿಧಿಯೋ, ವೈದ್ಯರೋ ಅಥವಾ ಸರಕಾರಿ ಅಧಿಕಾರಿಯೂ ಅಲ್ಲ. ಸಾಮಾನ್ಯ ಕುಟುಂಬದ, ಕೂಲಿ ಕೆಲಸ ಮಾಡಿಕೊಂಡು ಜೀವನ ಸಾಗಿಸುತ್ತಿರುವ ಸಾಮಾನ್ಯ ಮಹಿಳೆ.

ಸುಮಾರು ಐದು ವರ್ಷಗಳಿಂದ ಅನಾಥ ಶವಗಳ ವಿಲೇವಾರಿ ಮಾಡಿ ಸದ್ಗತಿ ಕರುಣಿಸುತ್ತಿರುವವರು ಚನ್ನಪಟ್ಟಣ ತಾಲೂಕಿನ ಲಾಳಘಟ್ಟ ಹೋಬಳಿಯ ಬ್ರಹ್ಮಣಿಪುರದವರಾದ ಆಶಾ. 'ಶವ' ಎಂದು ಕೇಳಿದರೆ ಭಯ ಬೀಳುವವರ ಮಧ್ಯೆ 29 ವರ್ಷ ವಯಸ್ಸಿನ ಈ ಗಟ್ಟಿಗಿತ್ತಿ ಅನಾಥ ಶವಗಳ ಸಂಸ್ಕಾರ ಮಾಡುತ್ತಿರುವುದು ಎಲ್ಲರ ಹುಬ್ಬೇರುವಂತೆ ಮಾಡಿದೆ.







Download From : www.kpscvaani.com







ಮಧ್ಯರಾತ್ರಿ ಫೋನ್ ಕರೆ ಬಂದರೂ ಕಣ್ಣುಜ್ಜಿಕೊಂಡು ಕೈಗಳಿಗೆ ಗ್ಲೌಸ್ ಹಾಕಿಕೊಂಡು, ಮುಖಗವಸು ಧರಿಸಿಕೊಂಡು ಇದು ತನ್ನ ಕರ್ತವ್ಯ ಎನ್ನುವ ರೀತಿಯಲ್ಲಿ ಹೊರಟು ನಿಲ್ಲುತ್ತಾರೆ. ಶವ ರಸ್ತೆಯಲ್ಲಿರಲಿ, ಕೆರೆ–ಬಾವಿಯಲ್ಲಿರಲಿ, ರೈಲ್ವೆ ಹಳಿಯಲ್ಲಿರಲಿ, ಬಸ್‌ಸ್ಟ್ಯಾಂಡ್‌ನಲ್ಲಿರಲಿ, ಪಾಳುಬಿದ್ದ ಕಟ್ಟಡದಲ್ಲಿರಲಿ, ಕೊಳೆತುನಾರುತ್ತಿರಲಿ, ಅವಯವಗಳು ರುಂಡ–ಮುಂಡ ಬೇರ್ಪಟ್ಟಿರಲಿ, ಅಂತ್ಯಸಂಸ್ಕಾರಕ್ಕೆ ಇವರು ಸಿದ್ಧ. ಮನುಷ್ಯರ ಶವಗಳು ಮಾತ್ರವಲ್ಲದೆ ಅನಾಥವಾಗಿ ಸಾಯುವ ಬೀದಿ ನಾಯಿ, ಹಸು, ಮೊದಲಾದ ಪ್ರಾಣಿಗಳ ಕಳೇಬರವನ್ನೂ ಅಸಹ್ಯ ಎಂದು ಭಾವಿಸದೆ ತಾನೇ ಅದರ ವಾರಸುದಾರರು ಎಂಬ ಭಾವನೆಯಿಂದ ಸಂಸ್ಕಾರ ಮಾಡುತ್ತಾರೆ. ಇದುವರೆಗೆ ಸುಮಾರು 4,500 ಕ್ಕೂ ಅಧಿಕ ಶವಗಳು ಇವರ ಕೈಯಿಂದ ಮಣ್ಣಾಗಿವೆ.

ಆಶಾರವರ ಭಾವ ಪ್ರವೀಣ್ ಸಮಾಜ ಸೇವಕರು. ನಾಲ್ಕು ವರ್ಷಗಳ ಹಿಂದೆ ಅಪಘಾತವೊಂದರಲ್ಲಿ ಸಿಕ್ಕಿದ್ದ ಶವವನ್ನು ಪ್ರವೀಣ್‌ರವರು ಅಂತ್ಯಸಂಸ್ಕಾರ ನಡೆಸಿದನ್ನು ನೋಡಿದ ಆಶಾ ಶವ ಸಂಸ್ಕಾರಕ್ಕಿಂತ ಪುಣ್ಯದ ಕೆಲಸ ಬೇರೊಂದಿಲ್ಲವೆಂದು ಭಾವಿಸಿ ಸೇವೆ ಆರಂಭಿಸಿದರು. ಒಂದೊಮ್ಮೆ ಸತ್ತ ವ್ಯಕ್ತಿಯ ವಿಳಾಸ ಪತ್ತೆಯಾಗದಿದ್ದರೆ ಅದರ ವಾರಸುದಾರರು ಆಶಾ. ನಂತರ ಅದರ ಅಂತ್ಯ ಸಂಸ್ಕಾರದ ಹೊಣೆಯೆಲ್ಲ ಇವರದ್ದೇ. ಕಳೇಬರವನ್ನು ಸರಿಯಾಗಿ ಜೋಡಿಸಿ ಪ್ಯಾಕ್ ಮಾಡಿ ಶವಾಗಾರಕ್ಕೆ ಸಾಗಿಸಿ ಹೂಳುತ್ತಾರೆ ಅಥವಾ ಸಾರ್ವಜನಿಕ ರುದ್ರಭೂಮಿಗಳಲ್ಲಿ ಅಂತ್ಯಕ್ರಿಯೆ ನೆರೆವೇರಿಸುತ್ತಾರೆ. ವಿಲೇವಾರಿಯ ಖರ್ಚುಗಳೂ ಇವರದ್ದೇ. ಹೀಗೆ ವಾರದಲ್ಲಿ ಕನಿಷ್ಟ 2 – 3 ಶವಗಳಾದರೂ ಇವರ ಕೈಯ್ಯಲ್ಲಿ ಮಣ್ಣಾಗುತ್ತವೆ.

**ಕೋವಿಡ್‌ನಿಂದ ಮೃತರಾದ ಶವಗಳಿಗೂ ಸಂಸ್ಕಾರ :**

ಕೋವಿಡ್ ಎರಡನೆ ಅಲೆ ಎಲ್ಲೆಡೆ ವ್ಯಾಪಕವಾಗಿ ಹರಡಿದ್ದ ದಿನಗಳಲ್ಲಿ ದಿನಕ್ಕೆ 10 ರಿಂದ 15 ಶವಗಳ ವಿಲೇವಾರಿ ಜವಾಬ್ದಾರಿಯನ್ನು ಆಶಾ ಹೆಗಲಿಗೇರಿಸಿಕೊಂಡರು. ಅನಾಥ ಶವಗಳಿಗೆ ಮಾತ್ರವಲ್ಲದೆ ವಾರಸುದಾರರು ಇದ್ದ ಶವಗಳಿಗೂ ಮುಕ್ತಿ ದೊರಕಿಸಿದರು. ರಾಮನಗರ, ತಾವರೆಕೆರೆ, ಚನ್ನಪಟ್ಟಣ, ಮಾಗಡಿ, ಕನಕಪುರ, ಬೆಂಗಳೂರು, ಬಿಡದಿ ಮೊದಲಾದ ಕಡೆಗಳಲ್ಲಿ ನೂರಕ್ಕೂ ಅಧಿಕ ಅನಾಥ ಶವಗಳನ್ನು ಕೋವಿಡ್ ಸಂದರ್ಭದಲ್ಲಿ ಅಂತ್ಯ ಸಂಸ್ಕಾರ ಮಾಡಿದ್ದಾರೆ. ಹೆತ್ತವರು ಕೋವಿಡ್‌ನಿಂದ ಮೃತಪಟ್ಟರು ಎಂದು ತಿಳಿದು ಶವಗಳನ್ನು ಆಸ್ಪತ್ರೆಗಳಲ್ಲೇ ಬಿಟ್ಟು ಹೋದಾಗಲೂ ಅವುಗಳನ್ನು ಪಿ.ಪಿ.ಇ. ಕಿಟ್ ಧರಿಸಿ ಆಶಾರವರೇ ವಿಲೇವಾರಿ ಮಾಡಿದ್ದಾರೆ.

**ಶವಸಂಸ್ಕಾರಕ್ಕಿಂತ ಪುಣ್ಯದ ಕೆಲಸ ಬೇರೊಂದಿಲ್ಲ ಎಂದು ಭಾವಿಸಿ ಶವಸಂಸ್ಕಾರದಲ್ಲಿ ನಿರತರಾಗಿರುವ ಆಶಾ ಅವರು ವಾರಕ್ಕೆ ಎರಡರಿಂದ ಮೂರು ಅನಾಥ ಶವಗಳಿಗೆ ಸಂಸ್ಕಾರ ನಡೆಸುತ್ತಾರೆ. ಇದುವರೆಗೆ ಸುಮಾರು 4,500 ಕ್ಕೂ ಹೆಚ್ಚು ಅನಾಥ ಶವಗಳಿಗೆ ಅಂತ್ಯ ಸಂಸ್ಕಾರವನ್ನು ಮಾಡಿದ್ದಾರೆ**

**ಜೀವನೋಪಾಯಕ್ಕೆ ಕೂಲಿ ಕೆಲಸ:**

ಶವಗಳಿಗೆ ಮುಕ್ತಿ ಕೊಡುವ ಇವರು ಸಾಕಷ್ಟು ದುಡ್ಡಿರುವ ಸಿರಿವಂತರಲ್ಲ. ಹೊಟ್ಟೆಪಾಡಿಗಾಗಿ ಅಕ್ಕಪಕ್ಕದ ಜಮೀನುಗಳಲ್ಲಿ ದಿನನಿತ್ಯ ಕೂಲಿ ಕೆಲಸಕ್ಕೆ ಹೋಗುತ್ತಾರೆ. ಇವರ ಪತಿ ವೆಂಕಟಸ್ವಾಮಿಯವರು ಗೇಣಿಗೆ ಜಮೀನು ಪಡೆದು ವ್ಯವಸಾಯ ಮಾಡುತ್ತಾರೆ. ದಂಪತಿಗೆ ಇಬ್ಬರು ಪುಟ್ಟ ಮಕ್ಕಳಿದ್ದಾರೆ. ತನ್ನ ದುಡಿಮೆಯ ಸ್ವಲ್ಪ ದುಡ್ಡನ್ನು ಈ ಸಮಾಜ ಸೇವೆಗೆ ವಿನಿಯೋಗಿಸುತ್ತಾರೆ. ಇವರ ಕೆಲಸಕ್ಕೆ ಪತಿಯೂ ಸಾಥ್ ನೀಡುತ್ತಾರೆ.

**ಜೀವ ರಕ್ಷಾ ಚಾರಿಟೆಬಲ್ ಟ್ರಸ್ಟ್ (ರಿ)**


ಈ ಸ್ವಯಂ ಸೇವಕಿಯ ಸಮಾಜ ಸೇವೆಯನ್ನು ಬೆಂಬಲಿಸಿ ಈಗ ಅನೇಕರು ಕೈಜೋಡಿಸಿದ್ದಾರೆ. ಸಮಾನ ಮನಸ್ಕರನ್ನು ಸೇರಿಸಿಕೊಂಡು ಆಶಾರವರು ಜೀವ ರಕ್ಷಾ ಚಾರಿಟೆಬಲ್ ಟ್ರಸ್ಟ್ ಅನ್ನು ಸ್ಥಾಪಿಸಿದ್ದಾರೆ. ಟ್ರಸ್ಟ್‌ನಲ್ಲಿ 20 ಮಂದಿ ಸದಸ್ಯರಿದ್ದಾರೆ. ಆಸ್ಪತ್ರೆಗೆ ತೆರಳಲು ವಾಹನದ ವ್ಯವಸ್ಥೆ ಇಲ್ಲದ ಕಡುಬಡವರಿಗೆ ಟ್ರಸ್ಟ್ ಮೂಲಕ ಆಂಬ್ಯುಲೆನ್ಸ್ ಸೇವೆಯನ್ನು ಒದಗಿಸುತ್ತಾರೆ. ಬಡಮಕ್ಕಳ ವಿದ್ಯಾಭ್ಯಾಸಕ್ಕೆ ಸಹಾಯ ಮಾಡುವ ಜೊತೆಗೆ ಹೆಚ್ಚು ಅಂಕ ಗಳಿಸುವ ಮಕ್ಕಳಿಗೆ ಉಚಿತ ಪುಸ್ತಕ, ಬಟ್ಟೆಗಳನ್ನು ವಿತರಿಸುತ್ತಾರೆ.

ಆಶಾರವರ ಸ್ತುತ್ಯರ್ಹ ಸಮಾಜ ಸೇವೆಯನ್ನು ಮೆಚ್ಚಿ, ನೀವೂ ಅಭಿನಂದಿಸಬಹುದು. ಅವರ ಮೊಬೈಲ್ ಸಂಖ್ಯೆ 8971896986.



Download From : www.kpscvaani.com

# ಪದಬಂಧ-23




ವಿದ್ಯಾ ವಿ. ಹಾಲಭಾವಿ

### ಎಡದಿಂದ ಬಲಕ್ಕೆ

1. ಮುಖ್ಯ ಬೆಳೆಯ ಅಧಿಕ ಇಳುವರಿಗಾಗಿ ಅಳವಡಿಸಿ ಕೊಳ್ಳುವಬೇಸಾಯ ಪದ್ಧತಿ (3)
2. ಮೊದಲೇ ತಿಳಿಯ ಪಡಿಸುವಿಕೆ (4)
4. ಗ್ರಹಣದಲ್ಲಿರುವ ಆಕಾಶಚರ ಕಾಣಿಸೀತೇ? (3)
5. ಮುಗುಳುನಗೆಯನ್ನು ಹೀಗೆನ್ನಿ (4)
7. ಛತ್ರಿಯನ್ನು ಹೀಗೂ ಹೇಳುವರು (2)
8. ನಮ್ರತೆಯಿಲ್ಲಿ ತಿರುವು ಮುರುವಾಗಿದೆಯಲ್ಲಾ! (3)
9. ಜನನಿ ನುಡಿದಿರುವ ಸತ್ಯ (2)
10. ಪ್ರತಿಯೊಡನೆ ಬಂದ ಬಂಡಾಯ ಹಿಂದು ಮುಂದಾಗಿದೆ! (4)
11. ಮುತ್ತಿಗೆಯಿಲ್ಲಿ ಉಲ್ಟಾ ಪಲ್ಟಾ ಆಗಿದೆ (2)
12. ಬೇರೆಯವರ ಅಧೀನದಲ್ಲಿರುವಿಕೆ (4)
13. ನೆಲವನ್ನು ಗೋಮಯದಿಂದ ಸಾರಿಸುವುದು (4)

### ಮೇಲಿಂದ ಕೆಳಕ್ಕೆ

1. ಕುರಿಮೇಕೆ ಸಾಕಾಣಿದಾರರಿಗೆ ಪರಿಹಾರಧನ ನೀಡುವ ಯೋಜನೆ (7)
2. ರೈತಮಕ್ಕಳ ಉನ್ನತಶಿಕ್ಷಣಕ್ಕೆ ಶಿಷ್ಯವೇತನ ನೀಡುವ ಯೋಜನೆ (8)
3. ನದಿ,ಕೆರೆ,ಕೊಳಗಳಿಗೆ ಸೇರುವ ನೀರು ಹರಿದು ಬರುವ ಪ್ರದೇಶ (8)
4. ಸಮಾಜವನ್ನು ತಿದ್ದುವುದು (7)

### ಉತ್ತರ

**ಎಡದಿಂದ ಬಲಕ್ಕೆ**

1. ಅಕ್ಕಡಿ 2. ಮುನ್ಸೂಚನೆ 4. ಗ್ರಹ 5. ಮಂದಹಾಸ
7. ಕೊಡೆ 8. ಯನವಿ 9. ನಿಜ 10. ಗೆದಂತಿಪ್ರ
11. ಳಿಧಾ 12. ಪರವಶ 13. ಸಾರಣೆ

**ಮೇಲಿಂದ ಕೆಳಕ್ಕೆ**

1. ಅನುಗ್ರಹಯೋಜನೆ 2. ಮುಖ್ಯಮಂತ್ರಿವಿದ್ಯಾನಿಧಿ
3. ಜಲಾನಯನಪ್ರದೇಶ 4. ಸಮಾಜಸುಧಾರಣೆ

**–: ಸೂಚನೆ :–**

ಲೇಖನಗಳನ್ನು ಬರೆಯುವ ಆಸಕ್ತರು ವಾರ್ತಾ ಜನಪದಕ್ಕೆ ಲೇಖನಗಳನ್ನು ಕಳುಹಿಸಬಹುದು. ಸರ್ಕಾರದ ಯೋಜನೆಗಳು, ಅಭಿವೃದ್ಧಿಗಳು, ಪ್ರಗತಿಪರ ರೈತರ ಯಶೋಗಾಥೆ, ಜನಜಾಗೃತಿ ಮೂಡಿಸುವ ವಿಚಾರಗಳು, ಕರ್ನಾಟಕದ ಪ್ರೇಕ್ಷಣೀಯ ಸ್ಥಳಗಳು, ಕರ್ನಾಟಕದ ಇತಿಹಾಸ ಸಾರುವ ಗತ ವೈಭವಗಳು, ವಿವಿಧ ವಲಯದಲ್ಲಿ ಸಾಧನೆ ಮಾಡಿರುವ ರಾಜ್ಯದ ಸಾಧಕರ ಪರಿಚಯ ಇಂತಹ ವಿಷಯಗಳಿಗೆ ಹೆಚ್ಚಿನ ಆದ್ಯತೆ ನೀಡಲಾಗುವುದು.

ನುಡಿ ತಂತ್ರಾಂಶದಲ್ಲಿ ಟೈಪ್ ಮಾಡಿದ ಕನಿಷ್ಠ 500 ಪದಗಳಿಂದ 750 ಪದಗಳಿಗೆ ಮೀರದಂತೆ ಲೇಖನವನ್ನು ಪೂರಕವಾದ ಛಾಯಾಚಿತ್ರದೊಂದಿಗೆ ನಮ್ಮ ಇ–ಮೇಲ್ ವಿಳಾಸ janapada2008@gmail.comಗೆ ಕಳುಹಿಸಬಹುದು. ಲೇಖನಗಳ ಆಯ್ಕೆ ತೀರ್ಮಾನ ಅಂತಿಮವಾಗಿ ಸಂಪಾದಕ ಮಂಡಳಿಯದಾಗಿರುತ್ತದೆ. ಲೇಖನದ ಜೊತೆಗೆ ತಮ್ಮ ಹೆಸರು ವಿಳಾಸ ಮತ್ತು ದೂರವಾಣಿಯನ್ನು ನಮೂದಿಸತಕ್ಕದ್ದು.

Published by : Dr P S Harsha, IPS, Commissioner, Department of Information & Public Relation, 17, Varthasoudha, Bhagwan Mahaveer Road, Bangalore - 560 001
Printed at :M/s Lavanya Mudrana, #19, Vidyapeeta Circle, Banashankari 1st Stage, Bangalore-560050

Download From : www.kpscvaani.com



ಸೆಪ್ಟೆಂಬರ್ 22 ರಂದು ಕಂಟೋನ್ಮೆಂಟ್‌ನಿಂದ ಶಿವಾಜಿನಗರ ಮೆಟ್ರೋ ನಿಲ್ದಾಣದವರೆಗೆ ಸುರಂಗ ಮಾರ್ಗ ಕೊರೆದು ಶಿವಾಜಿನಗರ ನಿಲ್ದಾಣದಲ್ಲಿ ಹೊರಬಂದ ಊರ್ಜ ಯಂತ್ರದ ಕಾರ್ಯಾಚರಣೆಯನ್ನು ಮುಖ್ಯಮಂತ್ರಿ ಬಸವರಾಜ ಎಸ್ ಬೊಮ್ಮಾಯಿ ಅವರು ವೀಕ್ಷಿಸಿದರು.
ಈ ಸಂದರ್ಭದಲ್ಲಿ ಸಚಿವರಾದ ಉಮೇಶ್ ಕತ್ತಿ, ಎಸ್.ಟಿ. ಸೋಮಶೇಖರ್, ಬಿಡಿಎ ಅಧ್ಯಕ್ಷ ಎಸ್.ಆರ್.ವಿಶ್ವನಾಥ್, ಸಂಸದರಾದ ಪಿ.ಸಿ.ಮೋಹನ್, ಶಾಸಕರಾದ ರಿಜ್ವಾನ್ ಅರ್ಷದ್, ಲೆಹರ್ ಸಿಂಗ್ ಮತ್ತಿತರರು ಉಪಸ್ಥಿತರಿದ್ದರು.



ಸೆಪ್ಟೆಂಬರ್ 12 ರಂದು ಮುಖ್ಯಮಂತ್ರಿ ಬಸವರಾಜ ಎಸ್ ಬೊಮ್ಮಾಯಿ ಅವರು ಜಯನಗರದಲ್ಲಿ ಕೆ.ಎಸ್.ಆರ್.ಟಿ.ಸಿ ವತಿಯಿಂದ ನವೀಕೃತಗೊಂಡಿರುವ ಕೋವಿಡ್–19 ಮಕ್ಕಳ ಆಸ್ಪತ್ರೆಯನ್ನು ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಸಾರಿಗೆ ಸಚಿವರಾದ ಬಿ.ಶ್ರೀರಾಮುಲು, ಸಂಸದ ತೇಜಸ್ವಿ ಸೂರ್ಯ, ಶಾಸಕಿ ಸೌಮ್ಯ ರೆಡ್ಡಿ, ಸಾರಿಗೆ ಸಂಸ್ಥೆ ವ್ಯವಸ್ಥಾಪಕ ನಿರ್ದೇಶಕರಾದ ಶಿವಯೋಗಿ ಕಳಸದ್, ಬೆಂಗಳೂರು ನಗರ ಜಿಲ್ಲಾಧಿಕಾರಿ ಮಂಜುನಾಥ್ ಉಪಸ್ಥಿತರಿದ್ದರು.

Download From : www.kpscvaani.com

RNI No. KAR/KAN/2017/75029

Regd No.KA/BGGPO/2583/2021-23 Licensed to post without prepayment Licence No. PMG/BG/ WPP-365/2021-23
Published on 27th, Dt. 29th & 30th Posted at (Every month), Bangalore PSO, Mysore Road, Bangalore - 26



Download From : www.kpscvaani.com